ಭಾನುವಾರ, ಮೇ 24, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 143 | ಪುಟ 18
● www.prajavani.net prajavani.net prajavani
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ದಾಖಲೆ 'ವೀರ'
ಗುರಿಂದರ್‌ವೀರ್ ಸಿಂಗ್ ಶನಿವಾರ ರಾಷ್ಟ್ರೀಯ ಫೆಡರೇಷನ್ ಕಪ್ ಕೂಟದಲ್ಲಿ ಪುರುಷರ 100 ಮೀ. ಓಟವನ್ನು 10.09 ಸೆಕೆಂಡ್‌ಗಳಲ್ಲಿ ಮುಗಿಸಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು

ಸಮರ್ಥ್ ಸಿಂಗ್ ಪೊಲೀಸ್ ವಶಕ್ಕೆ 7
ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ 6

ಪುರಾತತ್ವ ತಾಣ ಅನಾಥ

ಹಾಳು ಸುರಿಯುವ ಸ್ಮಾರಕಗಳು: ಇಲಾಖೆಗೆ ಸಿಬ್ಬಂದಿ, ಅನುದಾನ ಕೊರತೆ

● ಕೆ.ಎಸ್.ಗಿರೀಶ

ಒಳನೋಟ

ಮಡಿಕೇರಿ: ಇಲ್ಲಿನ ಕೋಟೆ ಬಾಗಿಲು ದಾಟಿ ಒಳಗೆ ಕಾಲಿಡುತ್ತಿದ್ದಂತೆ ಶ್ವೇತ ವರ್ಣದಲ್ಲಿ ಕಂಗೊಳಿಸುತ್ತಿದ್ದ ಅರಮನೆಯು ಕಾಣುತ್ತದೆ. ಹತ್ತು ವರ್ಷದ ಹಿಂದೆ ಕುಸಿಯುವ ಸ್ಥಿತಿಯಲ್ಲಿದ್ದ ಅದು ಈಗ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. 'ಸರ್ಕಾರ ಕೊನೆಗೂ ಒಳ್ಳೆಯ ಕೆಲಸ ಮಾಡಿದೆ' ಎಂದು, ಕೋಟೆ ಬಾಗಿಲಲ್ಲೇ ಕುಳಿತಿದ್ದ ಹಿರಿಯರೊಬ್ಬರಿಗೆ ಹೇಳಿದಾಗ ಅವರು ವ್ಯಂಗ್ಯದಿಂದ ನಕ್ಕರು. 'ಇದು ಸರ್ಕಾರದ ಕೆಲಸವಲ್ಲ, ಆ ಮನುಷ್ಯ ಕೋರ್ಟ್ ಮೆಟ್ಟಿಲೇರದಿದ್ದರೆ ಎಂದೋ ಬಿದ್ದು ಹೋಗುತ್ತಿತ್ತು' ಎಂದರು.

'ಅರಮನೆಯನ್ನು ರಕ್ಷಿಸಬೇಕು' ಎಂದು ಕೋರಿ ವಿರೂಪಾಕ್ಷಯ್ಯ ಎಂಬುವವರ ಮನವಿ ಮೇರೆಗೆ ಹೈಕೋರ್ಟ್ ಸೂಚನೆ ನೀಡಿದ ಬಳಿಕವಷ್ಟೇ ಸರ್ಕಾರ ಅರಮನೆಯನ್ನು ದುರಸ್ತಿಗೊಳಿಸಿತು. ಹೀಗೆ, ಪ್ರತಿಯೊಂದು ಸ್ಮಾರಕದ ರಕ್ಷಣೆಗಾಗಿ ಹೈಕೋರ್ಟ್ ಮೆಟ್ಟಿಲೇರುವಂತಹ ಸ್ಥಿತಿ ರಾಜ್ಯದಲ್ಲಿದೆ.

ಇದೇ ಅರಮನೆಯ ಎದುರು 1858ರಲ್ಲಿ ಬ್ರಿಟಿಷರು ಕಟ್ಟಿದ್ದ ಸೇಂಟ್ ಮಾರ್ಕ್ಸ್ ಚರ್ಚ್ ಸರ್ಕಾರಿ ವಸ್ತು ಸಂಗ್ರಹಾಲಯವಾಗಿದೆ. ಆದರೆ, ನವೀಕರಣಗೊಂಡ ನಂತರವೂ ಚಾವಣಿಯು ಸೋರುತ್ತಿದೆ. ಪಾರಂಪರಿಕ ಕಟ್ಟಡಗಳ ದುರಸ್ತಿ ಹೇಗೆ ನಡೆದಿದೆ ಎಂಬುದಕ್ಕೆ ಇದೊಂದು ಕೆಟ್ಟ ನಿದರ್ಶನದಂತಿದೆ.

ಮತ್ತೊಂದೆಡೆ, ಸೋಮವಾರಪೇಟೆ ತಾಲ್ಲೂಕಿನ ದೊಡ್ಡಮಳ್ತೆಯಲ್ಲಿರುವ ಕ್ರಿ.ಪೂ ಸುಮಾರು 2,500–2000 ವರ್ಷದಷ್ಟು ಹಳೆಯ, ಬೃಹತ್ ಶಿಲಾಯುಗಕ್ಕೆ ಸೇರಿದ ಸಮಾಧಿಗಳು ಯಾರಿಗೂ ತಿಳಿಯದಂತಿವೆ. ಬ್ರಿಟಿಷರ ಕಾಲದಲ್ಲೇ, 1939ರಲ್ಲಿ ಪುರಾತತ್ವ ಸರ್ವೇಕ್ಷಣಾಲಯಕ್ಕೆ ಸೇರ್ಪಡೆಯಾಗಿದ್ದರೂ ಅಭಿವೃದ್ಧಿ ಕಂಡಿಲ್ಲ.

ಇದು ಕೊಡಗು ಜಿಲ್ಲೆಯ ಪರಿಸ್ಥಿತಿಯಲ್ಲ. ಇಡೀ ರಾಜ್ಯದ ಚಿತ್ರಣವೇ ಹೀಗಿದೆ...

ಕೊಡಗಿನಲ್ಲಿ ಲಿಂಗಾಯತ ಅರಸರು ಕಟ್ಟಿದ ಮಡಿಕೇರಿ ಅರಮನೆಯನ್ನು ರಕ್ಷಿಸಲು ಹೈಕೋರ್ಟ್ ಮೆಟ್ಟಿಲೇರಬೇಕಾಯಿತು. ಈಗಲೂ ಅರಸರ ಸಮಾಧಿಗಳಿರುವ ಗದ್ದುಗೆ ಪ್ರದೇಶ ಒತ್ತುವರಿಯಾಗಿದ್ದು, ಶಿಥಿಲಾವಸ್ಥೆ ತಲುಪಿವೆ. ಈ ಬಗೆಯ ಉದಾಹರಣೆಗಳು ನಾಡಿನಾದ್ಯಂತ ಸಿಗುತ್ತವೆ. ▶4

ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮದಲ್ಲಿರುವ ತಾರಕೇಶ್ವರ ದೇವಸ್ಥಾನದ ಸುತ್ತಲೂ ಗಿಡಗಂಟಿ ಬೆಳೆದಿದೆ ಪ್ರಜಾವಾಣಿ ಚಿತ್ರ: ಇಮಾಮ್‌ಹುಸೇನ್ ಗೂಡುನವರ

ರಾಜ್ಯದ ಕೆಲ ಪ್ರಮುಖ ಶಿಥಿಲ ಸ್ಮಾರಕಗಳು

- 'ಮಿನಿಹಂಪಿ' ಎಂದೇ ಖ್ಯಾತಿ ಪಡೆದ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೂಲಿ ಗ್ರಾಮದ ಪುರಾತನ ದೇಗುಲಗಳು, ಕಟ್ಟಡಗಳು ದುಷ್ಕರ್ಮಿಗಳ ಉಪಟಳದಲ್ಲಿ ನಲುಗಿವೆ. ನಿಧಿ ಆಸೆಯಿಂದ ಸ್ಮಾರಕಗಳಿಗೆ ಧಕ್ಕೆ ತರಲಾಗಿದೆ.
- ಮಂಗಳೂರು ನಗರದಲ್ಲಿ ಟಿಪ್ಪು ಸುಲ್ತಾನ್ ನಿರ್ಮಿಸಿದ 'ಸುಲ್ತಾನ್ ಬತ್ತೇರಿ'ಯ ಸುತ್ತ ಸದಾ ದೂಳು ಹಾರುತ್ತಿರುತ್ತದೆ. ಬೀದಿನಾಯಿಗಳೇ ಇಲ್ಲಿ ಕಾವಲುಗಾರರು. ಬತ್ತೇರಿಯ ಗೋಡೆಗಳ ಮೇಲೆ ಪ್ರೇಮಿಗಳ ಹೆಸರುಗಳು ರಾರಾಜಿಸುತ್ತಿವೆ.
- ತುಳುನಾಡಿನ ರಾಜಧಾನಿಯಾಗಿದ್ದ ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪದ ಬಾರ್ಕೂರುನಲ್ಲಿರುವ ಕೋಟೆಯು ಅಳಿವಿನಂಚಿಗೆ ತಲುಪಿದೆ. ಉದ್ಯಾವರದ ಕೋಟೆಯದ್ದೂ ಅದೇ ಸ್ಥಿತಿ. ಕಟಪಾಡಿ, ಕೋಟ, ಕುಂದಾಪುರದ ಕಂಡ್ಲೂರಿನ ಕೋಟೆಗಳು ನಶಿಸಿವೆ.
- ರಾಯಚೂರು ಜಿಲ್ಲೆಯಲ್ಲಿ 28 ಹೊಸ ತಾಣಗಳನ್ನು ಗುರುತಿಸಿದ್ದರೂ ಅಭಿವೃದ್ಧಿಯಾಗಿಲ್ಲ. ಇಲಾಖೆಯ ಕಚೇರಿಯಲ್ಲಿ ಇರುವುದು ಅಟೆಂಡರ್ ಮಾತ್ರ.
- 2 ಸಾವಿರ ವರ್ಷಗಳ ಹಿಂದಿನ ಸನ್ನತಿಯ ಬೌದ್ಧಸ್ತೂಪ, ರಾಷ್ಟ್ರಕೂಟರ ರಾಜಧಾನಿ ಮಳಖೇಡದ ಕೋಟೆ, ಐತಿಹಾಸಿಕ ಕಲಬುರಗಿಯ ಬಹಮನಿ ಕೋಟೆಗಳು ದಿವ್ಯ ನಿರ್ಲಕ್ಷ್ಯಕ್ಕೀಡಾಗಿವೆ. ಮಳಖೇಡ ಕೋಟೆಯ ಗೋಡೆಯು ಮಳೆಯಿಂದ ಧರೆಗುರುಳಿದ ಬಳಿಕ ದುರಸ್ತಿಯಾಗಿಲ್ಲ. ▶4

ಹತ್ತು ದಿನಗಳಲ್ಲಿ ಲೀಟರ್‌ಗೆ ಸರಿಸುಮಾರು ₹5 ಹೆಚ್ಚಳ ● ಸಿಎನ್‌ಜಿಯೂ ತುಟ್ಟಿ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಪೆಟ್ರೋಲ್ ದರವನ್ನು ಲೀಟರಿಗೆ 87 ಪೈಸೆಯಷ್ಟು ಹಾಗೂ ಡೀಸೆಲ್ ದರವನ್ನು 91 ಪೈಸೆಯಷ್ಟು ಹೆಚ್ಚು ಮಾಡಲಾಗಿದೆ. ಅಲ್ಲದೆ, ಸಿಎನ್‌ಜಿ ದರವು ಕೆ.ಜಿ.ಗೆ ₹1ರಷ್ಟು ಜಾಸ್ತಿ ಆಗಿದೆ. ಶನಿವಾರದಿಂದ ಇದು ಜಾರಿಗೆ ಬಂದಿದೆ.

ಈ ಹೆಚ್ಚಳದೊಂದಿಗೆ ಪೆಟ್ರೋಲ್ ಮತ್ತು ಡೀಸೆಲ್ ದರವು 10 ದಿನಗಳಲ್ಲಿ ಸರಿಸುಮಾರು ₹5ರಷ್ಟು ಜಾಸ್ತಿ ಆದಂತಾಗಿದೆ. ಸಿಎನ್‌ಜಿ ದರವು ಒಟ್ಟು ₹4ರಷ್ಟು ಜಾಸ್ತಿ ಆದಂತಾಗಿದೆ.

ಈಗ ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರವು ₹108.09 ಹಾಗೂ ಡೀಸೆಲ್ ದರವು ₹95.99 ಆಗಿದೆ. ಪೆಟ್ರೋಲ್, ಡೀಸೆಲ್ ದರದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸ ಇರುತ್ತದೆ.

ಶನಿವಾರದ ಹೆಚ್ಚಳದೊಂದಿಗೆ ದೆಹಲಿಯಲ್ಲಿ ಪೆಟ್ರೋಲ್ ದರವು ₹99.51 ಆಗಿದೆ. ಡೀಸೆಲ್ ದರವು ₹92.49 ಆಗಿದೆ. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಮೇ 15ರಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸುತ್ತಿವೆ. ಇದಕ್ಕೂ ಮೊದಲು ಅವು ಸರಿಸುಮಾರು ನಾಲ್ಕು ವರ್ಷ ಇಂಧನ ಬೆಲೆಯನ್ನು ಹೆಚ್ಚಿಸಿರಲಿಲ್ಲ. ಪೆಟ್ರೋಲ್, ಡೀಸೆಲ್ ಬೆಲೆಯನ್ನು ಮೇ 15ರಂದು ಲೀಟರಿಗೆ ತಲಾ ₹3ರಷ್ಟು ಹೆಚ್ಚು ಮಾಡಲಾಗಿತ್ತು. ಮೇ 19ರಂದು ಕೂಡ ಬೆಲೆ ಹೆಚ್ಚಳ ಆಗಿತ್ತು.

ಖಾಸಗಿ ಸ್ವಾಮ್ಯದ ನಯಾರಾ ಎನರ್ಜಿ ಮತ್ತು ಶೆಲ್ ಮೇ 15ಕ್ಕೆ ಮೊದಲೂ ಇಂಧನ ಬೆಲೆ ಹೆಚ್ಚಿಸಿದ್ದವು. ಅಲ್ಲದೆ, ಸರ್ಕಾರಿ ಸ್ವಾಮ್ಯದ ಕಂಪನಿಗಳು ಬೆಲೆ ಹೆಚ್ಚಳ ಮಾಡಿದಾಗ ಕೂಡ ಇವು ತಮ್ಮಲ್ಲಿ ಮಾರಾಟವಾಗುವ ಇಂಧನ ಬೆಲೆ ಜಾಸ್ತಿ ಮಾಡಿವೆ. ಆದರೆ ಖಾಸಗಿ ವಲಯದ ಜಿಯೊ–ಬಿಪಿ ತನ್ನಲ್ಲಿ ಮಾರಾಟವಾಗುವ ಇಂಧನ ಬೆಲೆಯನ್ನು ಸರ್ಕಾರಿ ಕಂಪನಿಗಳ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿಯೇ ಜಾಸ್ತಿ ಮಾಡಿದೆ.

'ಬಸ್ ಪ್ರಯಾಣ ದರ ಏರಿಕೆ ಅನಿವಾರ್ಯ'



ತುಮಕೂರು: 'ಪೆಟ್ರೋಲ್, ಡೀಸೆಲ್ ದರ ಇದೇ ರೀತಿ ಏರಿಕೆ ಆಗುತ್ತಿದ್ದರೆ ಬಸ್ ಪ್ರಯಾಣ ದರ ಹೆಚ್ಚಳ ಅನಿವಾರ್ಯ' ಎಂದು ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್ ಹೇಳಿದರು.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಡೀಸೆಲ್ ಬೆಲೆ ಹೆಚ್ಚಳ ಮಾಡಲಾಗಿದೆ. ಬಸ್‌ಗಳನ್ನು ನೀರಿನಿಂದ ಓಡಿಸಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

ಡೀಸೆಲ್ ದರ ಏರಿಕೆ ಕಾರಣದಿಂದ ಬಸ್ ಪ್ರಯಾಣ ದರ ಸಹಜವಾಗಿ ಏರಲಿದೆ. ಸಂಸ್ಥೆ ನೌಕರರಿಗೆ ₹1,260 ಕೋಟಿ ವೇತನ ಬಾಕಿ ನೀಡಲಾಗುತ್ತಿದೆ. ಈಗಾಗಲೇ ಕೆಎಸ್‌ಆರ್‌ಟಿಸಿ ನಷ್ಟದಲ್ಲಿದೆ' ಎಂದು ತಿಳಿಸಿದರು.

ಸಾಂಸ್ಥಿಕ ಬಳಕೆದಾರರಿಂದಾಗಿ ಇಂಧನ ಅಭಾವ: ಪ್ರಧಾನಿಗೆ ಪತ್ರ

ಕೈಗಾರಿಕೆಗಳು, ದೂರಸಂಪರ್ಕ ನೆಟ್‌ವರ್ಕ್ ಟವರ್‌ಗಳು, ಮಾಲ್‌ಗಳಂತಹ ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಬಂಕ್‌ಗಳಿಂದ ಡೀಸೆಲ್ ಖರೀದಿಸುತ್ತಿರುವ ಕಾರಣಕ್ಕೆ, ಇಂಧನ ಅಭಾವದ ಸ್ಥಿತಿ ತಲೆದೋರುತ್ತಿದೆ ಎಂದು ಇಂಡಿಯನ್ ಆಯಿಲ್ ಡೀಲರ್ಸ್ ಸಂಘವು ಪ್ರಧಾನಿ ಕಾರ್ಯಾಲಯಕ್ಕೆ ಪತ್ರ ಬರೆದಿದೆ.

ಬಂಕ್‌ಗಳಲ್ಲಿ ಮಾರಾಟವಾಗುವ ಡೀಸೆಲ್ ಬೆಲೆ ₹92–₹95ರಷ್ಟು (ಪ್ರತಿ ಲೀಟರ್‌ಗೆ) ಇದೆ. ಸಾಂಸ್ಥಿಕ ಬಳಕೆದಾರರು ತೈಲ ಕಂಪನಿಗಳಿಂದಲೇ ನೇರವಾಗಿ ಡೀಸೆಲ್ ಖರೀದಿಸಬೇಕು ಎಂಬ ನಿಬಂಧನೆಯಿದ್ದು, ಅಲ್ಲಿ ಪ್ರತಿ ಲೀಟರ್‌ನ ಬೆಲೆ ₹127–₹128ರಷ್ಟು ಇದೆ. ಬಂಕ್‌ಗಳಲ್ಲಿ ಖರೀದಿಸಿದರೆ, ಪ್ರತಿ ಲೀಟರ್ ಮೇಲೆ ಸುಮಾರು ₹30ರಷ್ಟು ಉಳಿತಾಯವಾಗುತ್ತದೆ. ಈ ಕಾರಣದಿಂದ ಸಾಂಸ್ಥಿಕ ಬಳಕೆದಾರರು ಬಂಕ್‌ಗಳಲ್ಲೇ ಖರೀದಿಸುತ್ತಿದ್ದಾರೆ. ಅಂತಹ ಬಂಕ್‌ಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಇಂಧನ ಮಾರಾಟವಾಗುತ್ತಿದೆ ಎಂದು ನೆಪವೊಡ್ಡಿ, ತೈಲ ಪೂರೈಕೆ ಸ್ಥಗಿತಗೊಳಿಸಲಾಗುತ್ತಿದೆ. ಈ ವಿಚಾರದಲ್ಲಿ ಪ್ರಧಾನಿ ಕಾರ್ಯಾಲಯವು ಮಧ್ಯ ಪ್ರವೇಶಿಸಿ, ಸಮಸ್ಯೆ ಬಗೆಹರಿಸಬೇಕು ಎಂದು ಸಂಘವು ಕೋರಿದೆ.

ಪೆಟ್ರೋಲ್–ಡೀಸೆಲ್ ಮೇಲೆ ದಿನವೂ ₹1,000 ಕೋಟಿಯಷ್ಟು ಕೇಂದ್ರದ ಸುಂಕ ಹಾಕಿದ ಮೇಲೆಯೂ ಬಿಜೆಪಿಯ ಹೊಟ್ಟೆ ಇನ್ನೂ ತುಂಬಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ದರ ಕುಸಿಯುತ್ತಿದ್ದ ಹೊತ್ತಿನಲ್ಲಿಯೂ ಇದರ ಪ್ರಯೋಜನವನ್ನು ಜನರಿಗೆ ದಾಟಿಸಲಿಲ್ಲ. ಈಗ ಜನರಿಂದ ಹಂತ ಹಂತವಾಗಿ ಲೂಟಿ ಹೊಡೆಯಲಾಗುತ್ತಿದೆ

ಮಲ್ಲಿಕಾರ್ಜುನ ಖರ್ಗೆ
ಕಾಂಗ್ರೆಸ್ ಅಧ್ಯಕ್ಷ

ನಾಗಮಂಗಲ ಪ್ರಕರಣ: ತನಿಖೆಯ ಹೊಣೆ ಎಎಸ್ಪಿ ಹೆಗಲಿಗೆ

ಸಾವಿರ ಎಕರೆ ಸರ್ಕಾರಿ ಭೂ ಕಬಳಿಕೆ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ನಾಗಮಂಗಲದಲ್ಲಿ ಸರ್ಕಾರಿ ಭೂಮಿ ಕಬಳಿಕೆಯ ಪ್ರಮಾಣ 320 ಎಕರೆಯಿಂದ 1 ಸಾವಿರ ಎಕರೆಗೆ ಏರಿಕೆಯಾಗಿದ್ದು, ಪ್ರಕರಣ ಗಂಭೀರ ಸ್ವರೂಪ ಪಡೆದಿದೆ. ಡಿವೈಎಸ್ಪಿಗೆ ನೀಡಿದ್ದ ತನಿಖೆಯ ಹೊಣೆಯನ್ನು ಈಗ ಹೆಚ್ಚುವರಿ ಎಸ್ಪಿಗೆ ವರ್ಗಾಯಿಸಲಾಗಿದೆ.

ನಾಗಮಂಗಲ ಡಿವೈಎಸ್ಪಿ ಚಲುವರಾಜು ನೇತೃತ್ವದಲ್ಲಿ ತಂಡ ರಚಿಸಿ, ಜ. 15ರಂದು ತನಿಖೆಗೆ ಒಪ್ಪಿಸಲಾಗಿತ್ತು. 4 ತಿಂಗಳಾದರೂ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ. ತನಿಖೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಅವರು ಮಂಡ್ಯ ಎಸ್ಪಿ ಶೋಭಾರಾಣಿ ಅವರಿಗೆ ಈಚೆಗೆ ತಾಕೀತು ಮಾಡಿದ್ದರು.

'ಪ್ರಕರಣ ಗಂಭೀರವಾಗಿದ್ದು, ಸಿಐಡಿಗೆ ವಹಿಸಬೇಕು' ಎಂದು ಎಸ್ಪಿಗೆ ತನಿಖಾಧಿಕಾರಿಯೂ ಪತ್ರ ಬರೆದಿದ್ದರು. ಈಗ ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ), ಮಂಡ್ಯದ ಹೆಚ್ಚುವರಿ ಎಸ್ಪಿ (ಕಾನೂನು ಮತ್ತು ಸುವ್ಯವಸ್ಥೆ) ತಿಮ್ಮಯ್ಯ ಅವರಿಗೆ ತನಿಖೆ ಹೊಣೆ ವಹಿಸಿ ಆದೇಶಿಸಿದ್ದಾರೆ. ▶7

ಶ್ವೇತಭವನಕ್ಕೆ ಬನ್ನಿ– ಮೋದಿಗೆ ರುಬಿಯೊ ಆಹ್ವಾನ

ಮಾರ್ಕೊ ರುಬಿಯೊ ಮತ್ತು ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಭಾರತಕ್ಕೆ ಮೊದಲ ಅಧಿಕೃತ ಭೇಟಿ ನೀಡಿರುವ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ಶ್ವೇತಭವನಕ್ಕೆ ಭೇಟಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಆಹ್ವಾನ ನೀಡಿದ್ದಾರೆ.

ಪ್ರಧಾನಿ ಅವರೊಂದಿಗೆ ನವದೆಹಲಿಯಲ್ಲಿ ಶನಿವಾರ ರುಬಿಯೊ ಅವರು ಮಹತ್ವದ ಮಾತುಕತೆ ನಡೆಸಿದರು.

'ಮುಂದಿನ ದಿನಗಳಲ್ಲಿ ಅಮೆರಿಕಕ್ಕೆ ಭೇಟಿ ನೀಡುವಂತೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪರವಾಗಿ ಭಾರತದ ಪ್ರಧಾನಿಗೆ ರುಬಿಯೊ ಆಹ್ವಾನ ನೀಡಿದ್ದಾರೆ' ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಜಿಯೊ ಗೋರ್ ತಿಳಿಸಿದ್ದಾರೆ.

ಮೋದಿ–ರುಬಿಯೊ ಅವರ ಭೇಟಿಯಲ್ಲಿ ಭಾರತ–ಅಮೆರಿಕ ದ್ವಿಪಕ್ಷೀಯ ಒಪ್ಪಂದಗಳ ಬಗ್ಗೆ ಚರ್ಚೆ ನಡೆದಿದೆ. ವಿಶೇಷವಾಗಿ ರಕ್ಷಣೆ, ವ್ಯಾಪಾರ, ಇಂಧನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಕುರಿತಂತೆ ಸಮಾಲೋಚನೆ ನಡೆದಿದೆ. ▶7

ರುಬಿಯೋ ಅವರ ಭೇಟಿ ಭಾರತ-ಅಮೆರಿಕದ ಜಾಗತಿಕ ರಚನಾತ್ಮಕ ಪಾಲುದಾರಿಕೆಗೆ ಬಲ ತುಂಬಿದೆ
ರಣಧೀರ್ ಜೈಸ್ವಾಲ್
ಭಾರತದ ವಿದೇಶಾಂಗ ಇಲಾಖೆ ವಕ್ತಾರ

ಭಾರತ -ಅಮೆರಿಕದ ಪಾಲುದಾರಿಕೆ ಇನ್ನಷ್ಟು ಗಟ್ಟಿಯಾಗುವುದನ್ನು ಎದುರು ನೋಡುತ್ತಿದ್ದೇವೆ
ಸರ್ಜಿಯೊ ಗೋರ್
ಭಾರತದಲ್ಲಿನ ಅಮೆರಿಕ ರಾಯಭಾರಿ

ಕೆಇಎಗೆ ತಲುಪದ ಸೀಟು ಲಭ್ಯತಾ ಪಟ್ಟಿ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಪ್ರಕಟಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿದ್ಧತೆ ಪೂರ್ಣಗೊಳಿಸಿದ್ದರೂ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನು ಇನ್ನೂ ಕಾಲೇಜುಗಳು ಸಲ್ಲಿಸಿಲ್ಲ.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿ-ಫಾರ್ಮ್, ಡಿ–ಫಾರ್ಮ್, ಯೋಗ ಮತ್ತು ನ್ಯಾಚುರೋಪಥಿ, ಅಲೈಡ್ ಹೆಲ್ತ್ ಸೈನ್ಸ್, ಆರ್ಕಿಟೆಕ್ಚರ್, ಬಿ.ಎಸ್‌ಸಿ ನರ್ಸಿಂಗ್, ಹೋಮಿಯೋಪಥಿ ಕೋರ್ಸ್‌ಗಳ 2026–27ನೇ ಸಾಲಿನ ಪ್ರವೇಶಕ್ಕೆ ಕೆಇಎ ಏ. 23 ಮತ್ತು 24ರಂದು ಪರೀಕ್ಷೆ ನಡೆಸಿತ್ತು. 3.30 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ▶8

ಇರಾನ್ ಮೇಲೆ ದಾಳಿಗೆ ಟ್ರಂಪ್ ಚಿಂತನೆ: ವರದಿ

ವಾಷಿಂಗ್ಟನ್ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ಶಾಂತಿ ಒಪ್ಪಂದ ಏರ್ಪಡದೇ ಇದ್ದರೆ, ಇರಾನ್ ಮೇಲೆ ಹೊಸದಾಗಿ ದಾಳಿ ನಡೆಸುವ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಂಭೀರ ಚಿಂತನೆ ನಡೆಸಿದ್ದಾರೆ ಎಂದು ಅಮೆರಿಕದ ಸುದ್ದಿ ಸಂಸ್ಥೆ 'ಆಕ್ಸಿಯೋಸ್' ವರದಿ ಮಾಡಿದೆ.

ಟ್ರಂಪ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿರುವ ಇರಾನ್, 'ಮತ್ತೆ ದಾಳಿ ನಡೆಸಲು ಮುಂದಾದರೆ 'ಅತಿ ಭೀಕರ' ಪ್ರತಿದಾಳಿ ನಡೆಸುತ್ತೇವೆ' ಎಂದು ಎಚ್ಚರಿಸಿದೆ.

ವಿವರ ▶8

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

‘ಶಾಲಾ ವಾಹನ: ಸುರಕ್ಷತೆಗೆ ಆದ್ಯತೆ’

ಸುರಕ್ಷತಾ ಪ್ರಯಾಣಕ್ಕೆ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ರಜೆ ಮುಕ್ತಾಯವಾಗಿ ಮೇ 25ರಿಂದ ಕೆಲವು ಶಾಲೆಗಳು ಪುನರ್ ಆರಂಭಗೊಳ್ಳುತ್ತಿದ್ದು, ಮಕ್ಕಳನ್ನು ಕರೆದೊಯ್ಯುವ ಶಾಲಾ ಹಾಗೂ ಖಾಸಗಿ ವಾಹನಗಳಲ್ಲಿ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಕಾರ್ತಿಕ್ ರೆಡ್ಡಿ ಸೂಚಿಸಿದ್ದಾರೆ.

‘ಶಾಲಾ ಬಸ್ ಕೇವಲ ಒಂದು ವಾಹನ ಅಲ್ಲ. ಪ್ರತಿದಿನ ನಮ್ಮ ನಗರದ ಭವಿಷ್ಯವನ್ನು ಹೊತ್ತು ಸಾಗುವ ವಾಹನ. ಶಾಲಾ ಆಡಳಿತ ಮಂಡಳಿಯವರು ನಿಯಮಿತವಾಗಿ ಶಾಲಾ ಬಸ್‌ಗಳನ್ನು ಪರಿಶೀಲಿಸಬೇಕು. ಸುರಕ್ಷತೆಯನ್ನು ಖಚಿತ ಪಡಿಸಿಕೊಳ್ಳಬೇಕು’ ಎಂದು ಕೋರಿದ್ದಾರೆ.

ಪ್ರತಿನಿತ್ಯ ಸಾವಿರಾರು ಮಕ್ಕಳು ಬಸ್‌ನಲ್ಲಿ ಶಾಲೆಗೆ ಹೋಗಿ ಬರುತ್ತಾರೆ. ಶಾಲಾ ಆಡಳಿತ ಮಂಡಳಿ, ಪೋಷಕರು, ಚಾಲಕರು, ಶಾಲೆಯ ಸಹಾಯಕರು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಜತೆಗೆ, ಮಕ್ಕಳ ಸುರಕ್ಷತಾ ಪ್ರಯಾಣಕ್ಕೆ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು.

ವಿಶೇಷ ಕಾರ್ಯಾಚರಣೆ

ನಗರದ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮುಂದಿನ ದಿನಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದರೆ ಹಾಗೂ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದರೆ ಅಂತಹ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾರ್ತಿಕ್ ರೆಡ್ಡಿ ಹೇಳಿದ್ದಾರೆ.

ಕಾರ್ತಿಕ್ ರೆಡ್ಡಿ

ರಾಜ್ಯ ಸರ್ಕಾರವು ಶಾಲಾ ಬಸ್‌ಗಳಿಗೆ ಸ್ಪಷ್ಟವಾದ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅವುಗಳನ್ನು ಪಾಲಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಶಾಲಾ ಬಸ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು, ತುರ್ತು ನಿರ್ಗಮನ ದ್ವಾರಗಳು, ಕಿಟಕಿಯ ಬಳಿ ರಾಡ್‌ಗಳು, ಪ್ರಥಮ ಚಿಕಿತ್ಸಾ ಕಿಟ್‌ಗಳು, ಅಗ್ನಿ ನಂದಕ ಉಪಕರಣಗಳು, ಜಿಪಿಎಸ್ ಟ್ರ್ಯಾಕಿಂಗ್ ಸಿಸ್ಟಂ, ಬಾಗಿಲುಗಳಿಗೆ ಸರಿಯಾದ ಲಾಕಿಂಗ್ ಉಪಕರಣ, ಸುರಕ್ಷತಾ ಸೀಟಿನ ವ್ಯವಸ್ಥೆ, ವಾಹನದ ಸಾಮರ್ಥ್ಯ ಪ್ರಮಾಣ ಪತ್ರ, ಅಗತ್ಯ ಅನುಮತಿ ಪತ್ರ ಹಾಗೂ ದಾಖಲೆಗಳನ್ನು ಹೊಂದಿರಬೇಕು ಎಂದು ಕಾರ್ತಿಕ್ ರೆಡ್ಡಿ ಸೂಚನೆ ನೀಡಿದ್ದಾರೆ.

ಕಿಟಕಿ ಹಾಗೂ ಗಾಜುಗಳು ಸುಸ್ಥಿತಿಯಲ್ಲಿ ಇರಬೇಕು. ಅಲ್ಲದೇ ಶಾಲಾ ವಾಹನಗಳ ಚಾಲಕರು ಚಾಲನಾ ಪ್ರಮಾಣ ಪತ್ರ ಪಡೆದಿರಬೇಕು ಎಂದು ಸೂಚಿಸಿದ್ದಾರೆ.

ಬಸ್‌ಗಳನ್ನು ನಿಯಮಿತವಾಗಿ ತಪಾಸಣೆ ನಡೆಸಬೇಕು. ಪೋಷಕರೂ ಮಕ್ಕಳನ್ನು ಕರೆದೊಯ್ಯುವ ಶಾಲಾ ಬಸ್ ಹಾಗೂ ಖಾಸಗಿ ವಾಹನಗಳಲ್ಲಿ ಅಳವಡಿಸಿರುವ ಸುರಕ್ಷತೆ ಕ್ರಮಗಳನ್ನು ಪರಿಶೀಲಿಸಬೇಕು. ಸಣ್ಣ ನಿರ್ಲಕ್ಷ್ಯವು ಅಪಘಾತಕ್ಕೆ ಕಾರಣ ಆಗಬಹುದು ಎಂದು ಎಚ್ಚರಿಸಿದ್ದಾರೆ.

ಮಾನಸಿಕ ಕಿರುಕುಳ ಆರೋಪ: ಕಾನ್‌ಸ್ಟೆಬಲ್ ಪತ್ನಿ ಆತ್ಮಹತ್ಯೆ

ಬೆಂಗಳೂರು: ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಕಾನ್‌ಸ್ಟೆಬಲ್ ರಾಜೇಶ್ ಆರಾಧ್ಯ ಅವರ ಪತ್ನಿ ಲಕ್ಷ್ಮಿಪ್ರಿಯಾ (26) ಅವರು ಕೆ.ಆರ್. ಪುರದ ಮನೆಯಲ್ಲಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

2023ರ ಮೇ 11ರಂದು ರಾಜೇಶ್ ಆರಾಧ್ಯ– ಲಕ್ಷ್ಮಿಪ್ರಿಯಾ ಮದುವೆ ನಡೆದಿತ್ತು. ರಾಜೇಶ್ ಆರಾಧ್ಯ ಹಾಗೂ ಅವರ ತಂದೆ ಪಾಲಾಕ್ಷಾರಾಧ್ಯ ಮತ್ತು ತಾಯಿ ಭಾಗ್ಯಮ್ಮ ಅವರು ಮಗಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಲಕ್ಷ್ಮಿಪ್ರಿಯಾ ಪೋಷಕರು ದೂರು ನೀಡಿದ್ದಾರೆ.

‘ಶುಕ್ರವಾರ ಮಧ್ಯಾಹ್ನ 2.31ರ ಸುಮಾರಿಗೆ ಸಹೋದರಿ ಜಯಶ್ರೀಗೆ ವಾಟ್ಸ್‌ಆ್ಯಪ್ ಮೂಲಕ ಲಕ್ಷ್ಮಿಪ್ರಿಯಾ ಅವರು ಮೊಬೈಲ್ ಪಾಸ್‌ವರ್ಡ್ ಕಳುಹಿಸಿದ್ದರು.

ಲಕ್ಷ್ಮಿಪ್ರಿಯಾ

ತಕ್ಷಣವೇ ಕರೆ ಮಾಡಿದಾಗ ಕರೆ ಸ್ವೀಕರಿಸಿರಲಿಲ್ಲ. ನಂತರ ರಾಜೇಶ್ ಆರಾಧ್ಯ ಅವರಿಗೆ ಕರೆ ಮಾಡಿದಾಗ ಲಕ್ಷ್ಮಿಪ್ರಿಯಾ ಅವರು ಮೃತಪಟ್ಟಿದ್ದಾರೆ ಎಂಬುದಾಗಿ ತಿಳಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರಿಟೇಲ್ ಗ್ರಾಹಕರಿಗಾಗಿ ನೇರ ವಿಶೇಷ ಕೊಡುಗೆ
ಭಾನುವಾರದಂದು ಕೇವಲ 12 ಗಂಟೆಗಳ ಮಾರಾಟ
ಸಿಂಧೂರ್ ಕನ್ವೆನ್ಷನ್ ಸೆಂಟರ್, ಜೆ.ಪಿ. ನಗರ
ಸಹಸ್ರಾರು ವಿಧದ ಉಡುಪುಗಳು, ಶೂಗಳು ಮತ್ತು ವಸ್ತ್ರಗಳ ಮೇಲೆ
ಶೇ.90ರವರೆಗೆ ರಿಯಾಯಿತಿ ಸ್ಟಾಕ್ ಕ್ಲಿಯರೆನ್ಸ್ ಮಾರಾಟ
ಭಾರತದ ಅತಿದೊಡ್ಡ ಬೇಸಿಗೆ ಮತ್ತು ಪಾರ್ಟಿ ವೇರ್ ಪ್ರದರ್ಶನ
ಎಂಆರ್ ಪಿ ರೂ.1000 ರಿಂದ 2000 ವರೆಗಿನ ಮಹಿಳೆ, ಪುರುಷರ ಮಿಶ್ರ ಉಡುಪುಗಳು
ಕೇವಲ ರೂ. 100, 200/- ರಿಂದ 300/- ಕ್ಕೆ ಖರೀದಿಸಿ
ಎಂಆರ್ ಪಿ ರೂ.3000 ದಿಂದ 6000 ವರೆಗಿನ ಪ್ರೀಮಿಯಂ ಬ್ರ್ಯಾಂಡೆಡ್ ಉಡುಪುಗಳು ಮತ್ತು ಶೂಗಳು
ಕೇವಲ ರೂ. 500/- ರಿಂದ 1500/- ಕ್ಕೆ ಖರೀದಿಸಿ
ಎಂಆರ್ ಪಿ ರೂ.1000 ದಿಂದ 2500 ವರೆಗಿನ ಮಹಿಳೆಯರು, ಪುರುಷರು ಮತ್ತು ಮಕ್ಕಳ ಮಿಶ್ರ ಉಡುಪುಗಳ
ಕೇವಲ ರೂ. 100/- ರಿಂದ 500/- ಕ್ಕೆ ಖರೀದಿಸಿ
ಎಂಆರ್‌ಪಿ ರೂ.5000 ದಿಂದ 13000 ವರೆಗಿನ ಬ್ರ್ಯಾಂಡೆಡ್ ಟ್ರಾಲಿಗಳು ಮತ್ತು ಲಗೇಜ್ ಬ್ಯಾಗ್‌ಗಳು
ಕೇವಲ ರೂ. 1500/- ಕ್ಕೆ ಖರೀದಿಸಿ

ಇಂದು ಕೇವಲ 12 ಗಂಟೆಗಳ ಕಾಲ ಮಾರಾಟ
24ನೇ ಮೇ, 2026
ಭಾನುವಾರ | ಸಮಯ: ಬೆಳಿಗ್ಗೆ 10 ರಿಂದ ರಾತ್ರಿ 10 ಗಂಟೆವರೆಗೆ
Sindhoor
ಸಿಂಧೂರ್ ಕನ್ವೆನ್ಷನ್ ಸೆಂಟರ್
15ನೇ ಕ್ರಾಸ್, ಸಾರಕ್ಕಿ 1ನೇ ಹಂತ, ರಿಂಗ್ ರಸ್ತೆ, ಜೆ.ಪಿ.ನಗರ, ಬೆಂಗಳೂರು-560 078
FREE ENTRY | FREE PARKING | DIGITAL PAYMENTS ACCEPTED

ಪರಿಶೀಲನೆಗೆ ಹೋದ ಸಿಬ್ಬಂದಿ ಮೇಲೆ ಹಲ್ಲೆ

ಹೊಸಕೋಟೆ: ಬಕ್ರೀದ್‌ಗಾಗಿ ಮಾರಾಟ ಹಾಗೂ ಮಾಂಸದ ಉದ್ದೇಶಕ್ಕೆ ಮೇಡಿಮಲ್ಲಸಂದ್ರದಲ್ಲಿ 10ಕ್ಕೂ ಹೆಚ್ಚು ರಾಸು ಮತ್ತು 20 ಒಂಟೆಗಳನ್ನು ಕೂಡಿ ಹಾಕಲಾಗಿದೆ ಎಂಬ ಮಾಹಿತಿ ಮೇರೆಗೆ ಶನಿವಾರ ಪೊಲೀಸರೊಂದಿಗೆ ಸ್ಥಳಕ್ಕೆ ಭೇಟಿ ನೀಡಿದ ಕೇಂದ್ರ ಸರ್ಕಾರದ ಭಾರತೀಯ ಪ್ರಾಣಿ ದಯಾ ಮಂಡಳಿ ಸಿಬ್ಬಂದಿ ಮೇಲೆ ಸ್ಥಳೀಯರ ಗುಂಪೊಂದು ಹಲ್ಲೆ ನಡೆಸಿದೆ.

ಪ್ರಾಣಿದಯಾ ಮಂಡಳಿಯ ಅಧಿಕಾರಿ ಸಂಜಯ್ ಕುಲಕರ್ಣಿ ಹಾಗೂ ಪ್ರಾಣಿದಯಾ ಸಂಘದ ಸ್ವಯಂ ಸೇವಕ ಮಂಜುನಾಥ್ ಹಲ್ಲೆಗೆ ಒಳಗಾದವರು. ಅನಗೊಂಡನಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಾಣಿದಯಾ ಮಂಡಳಿ ಸಿಬ್ಬಂದಿ ಪೊಲೀಸರೊಂದಿಗೆ ಶನಿವಾರ ನಸುಕಿನ ಜಾವ 2.15ಕ್ಕೆ ಸ್ಥಳ ಭೇಟಿ ನೀಡಿ, ಮಹಜರು ನಡೆಸುತ್ತಿದ್ದರು. ಆಗ ಸ್ಥಳಕ್ಕೆ ಭೇಟಿ ನೀಡಿದ ಗುಂಪು, ಪೊಲೀಸರ ಸಮ್ಮುಖದಲ್ಲೇ ಹಲ್ಲೆ ನಡೆಸಿದೆ ಎಂದು ತಿಳಿಸಲಾಗಿದೆ.

ಹಲ್ಲೆ ನಡೆಸಿದವರ ಹೆಸರು ಮತ್ತು ವಿವರ ನಿರ್ದಿಷ್ಟವಾಗಿ ನೀಡಿದರೂ ಪೊಲೀಸರು, ಅಪರಿಚಿತರಿಂದ ಹಲ್ಲೆ ಎಂದು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಸಂಜಯ್ ಕುಲಕರ್ಣಿ ಆರೋಪಿಸಿದ್ದಾರೆ.

ಈಶಾನ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ
ಟೆಂಡರ್ ಪ್ರಕಟಣೆ ಸಂ. ಎನ್–235–62
ಟೆಲೆ ಟೆಂಡರ್ 05–2026
ಭಾರತದ ರಾಷ್ಟ್ರಪತಿಗಳ ಪರವಾಗಿ ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜಿನಿಯರ್/ ಟೆಲೆ/ಎಚ್‌ಕ್ಯೂ, ಈಶಾನ್ಯ ರೈಲ್ವೆ, ಗೋರಖಪುರ ಇವರು ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಲಾಗಿರುವ ಅರ್ಹತಾ ಮಾನದಂಡಗಳನ್ನು ಹೊಂದಿರುವ ಮತ್ತು ಸಾಕಷ್ಟು ಅನುಭವ ಹೊಂದಿರುವ ಗುತ್ತಿಗೆದಾರರಿಂದ ಇ–ಟೆಂಡರ್ ಆಹ್ವಾನಿಸಿದ್ದಾರೆ. 1) ಟೆಂಡರ್ ನಂ.: ಎನ್–235–62 ಟೆಲೆ ಟೆಂಡರ್ 05–2026, ಕಾಮಗಾರಿ ಹೆಸರು: ಈಶಾನ್ಯ ರೈಲ್ವೆಯ ಪ್ರಧಾನ ಕಚೇರಿ ಗೋರಖಪುರದಲ್ಲಿ ಐಪಿ ಆಧಾರಿತ ಇಂಟರ್‌ಕಾಂ ಎಕ್ಸ್‌ಚೇಂಜ್‌ಗಳು ಮತ್ತು ಟೆಲಿಕಾಂ ಪರಿಕರಗಳ ಪೂರೈಕೆ, ಅಳವಡಿಕೆ, ಟೆಸ್ಟಿಂಗ್, ಕಮಿಷನಿಂಗ್ ಮುಖಾಂತರ ಟೆಲಿಕಾಂ ಸೌಲಭ್ಯಗಳ ಆಗ್ಮೆಂಟೇಶನ್ ಮತ್ತು ಸುಧಾರಣೆ ಅಥವಾ ಮೇಲ್ದರ್ಜೀಕರಣದ ಜೊತೆಗೆ ಫೈರಂ ಅಲಾರಂ ಸಿಸ್ಟಮ್‌ಗೆ ಸಂಬಂಧಿತ ಲಯಾನ್ ಕೇಬಲಿಂಗ್ ಹಾಗೂ ಪೂರಕ ಕಾಮಗಾರಿಗಳು, ಲೈಟ್ನಿಂಗ್ ಅರೆಸ್ಟರ್, ಪವರ್ ಸಪ್ಲೈ ಮತ್ತು ಹಳೆಯ ಅನಲಾಗ್ ಪಿಸಿಎಸ್‌ಟಿಇ ಕಾನ್ಫರೆನ್ಸ್ ಸಿಸ್ಟಮ್‌ನ್ನು ಡಿಜಿಟಲ್ ಆಡಿಯೊ ಕಾನ್ಫರೆನ್ಸ್ ಸಿಸ್ಟಮ್ ಸಮೇತ ಬದಲಾಯಿಸುವ ಕಾಮಗಾರಿ. 3) ಟೆಂಡರ್ ಮೌಲ್ಯ ರೂ. 2,11,86,288.95/– (ರೂ. ಎರಡು ಕೋಟಿ ಹನ್ನೊಂದು ಲಕ್ಷ ಎಂಭತ್ತಾರು ಸಾವಿರದ ಎರಡು ನೂರ ಅರವತ್ತಾರು ಮತ್ತು ತೊಂಬತ್ತೈದು ಪೈಸೆ ಮಾತ್ರ). 4) ಬಿಡ್ ಸೆಕ್ಯೂರಿಟಿ: ರೂ. 427100.00/–. 5) ಆಫರ್ ವ್ಯಾಲಿಡಿಟಿ: 60 ದಿನಗಳು. 6) ಟೆಂಡರ್ ಕ್ಲೋಸಿಂಗ್ ಮತ್ತು ಓಪನಿಂಗ್ ದಿನಾಂಕ: 25.06.2026 ರಂದು 12:30 ಗಂಟೆ. 7) ಪೂರ್ಣಗೊಳಿಸುವ ಅವಧಿ: 06 (ಆರು) ತಿಂಗಳು. 8) ಟೆಂಡರ್‌ನ ಯಾವುದೇ ಬದಲಾವಣೆಗಳಿಗಾಗಿ, ಇಂಟರ್‌ನೆಟ್ ವೆಬ್‌ಸೈಟ್‌ನಲ್ಲಿ ಮೂಲ ಟೆಂಡರ್ ಪ್ರಕಟಣೆಯ ತಿದ್ದುಪಡಿಯನ್ನು ಪರಿಶೀಲಿಸಿರಿ. 9) ವಿವರವಾದ ಟೆಂಡರ್ ಪ್ರಕಟಣೆ, ದಸ್ತಾವೇಜು, ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು http://www.ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ.
ಸೂಚನೆ: ಟೆಂಡರ್‌ದಾರರು/ಬಿಡ್‌ದಾರರು ತಮ್ಮ ಬಿಡ್‌ನೊಂದಿಗೆ ಸಂಬಂಧಿತ ಎಲ್ಲಾ ಅಟ್ಯಾಚ್‌ಮೆಂಟ್‌ಗಳನ್ನು/ಫಾರ್ಮ್ಯಾಟ್‌ಗಳನ್ನು/ಅನುಬಂಧಗಳನ್ನು ಲಗತ್ತಿಸುವುದು ಕಡ್ಡಾಯ.
ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜಿನಿಯರ್/ ಟೆಲೆ/ಎಚ್‌ಕ್ಯೂ, ಗೋರಖಪುರ
CPRO/Signal-41
ಚಾವಣಿ ಮತ್ತು ಮೆಟ್ಟಿಲುಗಳ ಮೇಲೆ ಪ್ರಯಾಣಿಸಬಾರದು.

‘ನೇರಳೆ ಪಾನೀಯ’ಕ್ಕೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರಳೆ ಜ್ಯೂಸ್ ‘ಶಾಟ್ಸ್’, ಆಯುರ್ವೇದಿಕ್ ಹೇರ್ ಡೈ, ಬೆಟ್ಟದ ನೆಲ್ಲಿಕಾಯಿ, ಮಾವು–ಹಲಸು, ಮುಳ್ಳು ಬದನೆಕಾಯಿ, ನಾಟಿ ಸೌತೆಕಾಯಿ, ಸಿಹಿ ಜೋಳ ಸುಲಿಯುವ ಯಂತ್ರ ಸಾರ್ವಜನಿಕರನ್ನು ಆಕರ್ಷಿಸಿದವು.

ಜಿಕೆವಿಕೆ ಆವರಣದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವತಿಯಿಂದ ಶನಿವಾರ ನಡೆದ ರೈತ ಸಂತೆಯಲ್ಲಿ ನೇರಳೆಯಿಂದ ತಯಾರಿಸಿದ ಈ ಆರೋಗ್ಯಪೂರ್ಣ ಪಾನೀಯ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಗುಣ ಹೊಂದಿದ್ದು, ನೈಸರ್ಗಿಕ ರುಚಿ ಮತ್ತು ತಾಜಾತನದಿಂದ ಆಕರ್ಷಿಸಿತು. ಬೇಸಿಗೆಯಲ್ಲಿ ‘ನೇರಳೆ ಜ್ಯೂಸ್ ಶಾಟ್ಸ್’ ಒಂದು ಉತ್ತಮ ಪೌಷ್ಟಿಕ ಪಾನೀಯವಾಗಿದೆ ಎಂದು ನಾಗರಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಜೋಳದ ಕಾಳುಗಳನ್ನು ವೇಗವಾಗಿ ಹಾಗೂ ಸುಲಭವಾಗಿ ಬೇರ್ಪಡಿಸುವ ಯಂತ್ರವು ಸಮಯ ಮತ್ತು ಶ್ರಮ ಉಳಿಸಲಿದ್ದು, ರೈತರ ಗಮನ ಸೆಳೆಯಿತು. ವಿವಿಧ ಸಿರಿಧಾನ್ಯಗಳಿಂದ ಹಾಗೂ ಔಷಧಿ ಗಿಡಗಳಿಂದ ತಯಾರಿಸಿದ ‘ಮಲ್ಟಿ ಮಿಲೆಟ್ಸ್’ ಮಿಶ್ರಣವನ್ನು ಸಾರ್ವಜನಿಕರು ಖರೀದಿಸಿದರು. ವಿಜಯಪುರ ಜಿಲ್ಲೆಯ ರೈತ ಮಹಿಳೆಯರು ತಂದಿದ್ದ ಮುಳ್ಳು ಬದನೆಕಾಯಿಗಳು ಆಕರ್ಷಿಸಿದವು.

ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಅಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣೆ, ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವಿತ್ತು.

6 ಕಿ.ಮೀ ನಡಿಗೆ: ‘ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿದ್ದ ‘ಕೃಷಿ ಪರಿಸರದೆಡೆಗೆ ನಮ್ಮ ನಡಿಗೆ’ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 150ಕ್ಕೂ ಹೆಚ್ಚು ನಗರವಾಸಿಗಳು ಪಾಲ್ಗೊಂಡಿದ್ದರು. 6 ಕಿ.ಮೀ ನಡಿಗೆಯಲ್ಲಿ ಕೃಷಿ ಸಂಬಂಧಿತ ವಿಷಯಗಳ ಸಮಗ್ರ ಮಾಹಿತಿ ಪಡೆದುಕೊಂಡರು’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ರೈತ ಸಂತೆಯಲ್ಲಿ ಸಾರ್ವಜನಿಕರು ತರಕಾರಿ ಖರೀದಿಸಿದರು

ಬೇಸಿಗೆ ಶಿಬಿರ ನಾಳೆಯಿಂದ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಇದೇ 25ರಿಂದ 29ರವರೆಗೆ ‘ಮಕ್ಕಳಿಗೆ ಬಿತ್ತನೆಯಿಂದ ಬೆಳೆಯವರೆಗೆ ಕೃಷಿ ಪಯಣ’ ಎಂಬ ಮೂರನೇ ಬೇಸಿಗೆ ಶಿಬಿರವನ್ನು ಹಮ್ಮಿಕೊಂಡಿದೆ. 8ರಿಂದ 14 ವರ್ಷದೊಳಗಿನ ಆಸಕ್ತ ಮಕ್ಕಳು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಮಾಹಿತಿಗೆ: 98443 80742, 85532 15997ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಂಕ್ ಸಿಬ್ಬಂದಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ನಕಲಿ ಆಭರಣ ಅಡವಿಟ್ಟು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಆಭರಣಗಳನ್ನು ಅಡಮಾನ ಇರಿಸಿ, ಲಕ್ಷಾಂತರ ರೂಪಾಯಿ ಸಾಲ ಪಡೆದು ಬ್ಯಾಂಕ್‌ಗೆ ವಂಚಿಸಿದ್ದ ರಾಷ್ಟ್ರೀಕೃತ ಬ್ಯಾಂಕ್‌ನ ಚಿನ್ನ ಮೌಲ್ಯಮಾಪಕ ಸೇರಿದಂತೆ ನಾಲ್ವರ ವಿರುದ್ಧ ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬ್ಯಾಂಕ್‌ನ ಚಿನ್ನ ಮೌಲ್ಯಮಾಪಕ ರವಿಕುಮಾರ್, ಸಹಚರರಾದ ಮೋಹನ್ ರೆಡ್ಡಿ, ಕೇಶವ ಮತ್ತು ಮಹದೇಶ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು, ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ವರ್ತೂರಿನ ರಾಷ್ಟ್ರೀಕೃತ ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕ ಎಸ್.ಎನ್. ಆದರ್ಶ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ. ₹16.53 ಲಕ್ಷ ವಂಚಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ರವಿಕುಮಾರ್ ಎಂಬುವರು ಬ್ಯಾಂಕ್‌ನ ವರ್ತೂರು ಶಾಖೆಯಲ್ಲಿ ಮೂರು ವರ್ಷಗಳಿಂದ ಚಿನ್ನ ಮೌಲ್ಯಮಾಪಕರಾಗಿ ಕೆಲಸ ಮಾಡುತ್ತಿದ್ದರು. ಈ ವೇಳೆ ಮೋಹನ್ ರೆಡ್ಡಿ, ಕೇಶವ ಮತ್ತು ಮಹದೇಶಗೆ ಕಮಿಷನ್ ಆಸೆ ತೋರಿಸಿ ನಕಲಿ ಆಭರಣಗಳನ್ನು ಅವರ ಹೆಸರಿನಲ್ಲಿ ಅಡಮಾನ ಇರಿಸಿ ಲಕ್ಷಾಂತರ ರೂಪಾಯಿ ಸಾಲ ಪಡೆಯಲಾಗಿತ್ತು. ಬಳಿಕ, ಮೋಹನ್ ರೆಡ್ಡಿ, ಕೇಶವ ಹಾಗೂ ಮಹದೇಶ ಅವರಿಗೆ ಕಮಿಷನ್ ನೀಡುತ್ತಿದ್ದರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಮೂರು ತಿಂಗಳಿಗೊಮ್ಮೆ ಗ್ರಾಹಕರು ಅಡವಿಟ್ಟ ಚಿನ್ನವನ್ನು ಮರುಮೌಲ್ಯಮಾಪನ ಮಾಡಬೇಕು. ಇದರಂತೆ ಮೇ 12ರಂದು ಬೇರೆ ಚಿನ್ನ ಮೌಲ್ಯಮಾಪಕರಿಂದ ಚಿನ್ನ ಪರಿಶೀಲಿಸುವಾಗ ಆರೋಪಿ ಮೋಹನ್ ರೆಡ್ಡಿ ಖಾತೆಯಲ್ಲಿ ಅಡವಿಟ್ಟಿದ್ದ 56.20 ಗ್ರಾಂ ಚಿನ್ನ ನಕಲಿ ಎಂದು ಗೊತ್ತಾಗಿತ್ತು. ಮೇಲಧಿಕಾರಿಗಳಿಗೆ ವಿಷಯ ತಿಳಿಸಿದಾಗ ಎಲ್ಲಾ ಖಾತೆಗಳನ್ನು ಪರಿಶೀಲಿಸುವಂತೆ ತಿಳಿಸಿದ್ದರು. ಈ ವೇಳೆ ಕೇಶವ್ ಹಾಗೂ ಮಹದೇವ್ ಅಡಮಾನ ಇಟ್ಟಿದ್ದ ಬಂಗಾರ ನಕಲಿ ಎಂದು ತಿಳಿದುಬಂದಿತ್ತು. ಮೂವರನ್ನು ಬ್ಯಾಂಕ್‌ಗೆ ಕರೆಸಿ, ವಿಚಾರಣೆ ನಡೆಸಿದಾಗ, ‘ರವಿಕುಮಾರ್ ಅವರು ತನ್ನ ಆಭರಣಗಳನ್ನು ತನ್ನ ಹೆಸರಿನಲ್ಲಿ ಅಡಮಾನ ಇರಿಸಲು ಸಾಧ್ಯ ಇಲ್ಲ. ಹೀಗಾಗಿ, ನಿಮ್ಮ ಹೆಸರಿನಲ್ಲಿ ಅಡಮಾನ ಇರಿಸಿ, ಸಾಲ ಪಡೆದು, ಬಳಿಕ ಅದಕ್ಕೆ ಕಮಿಷನ್ ನೀಡುತ್ತೇನೆ’ ಎಂಬುದಾಗಿ ನಂಬಿಸಿದ್ದರೆಂದು ಹೇಳಿಕೆ ನೀಡಿದ್ದರು. ಅದಾದ ಮೇಲೆ ದೂರು ನೀಡಲಾಗಿತ್ತು ಎಂದು ಮೂಲಗಳು ಹೇಳಿವೆ.

‘ಆಯ್ಕೆಗೆ ವಿರೋಧವಿಲ್ಲ’

ಬೆಂಗಳೂರು: ‘ರಾಜ್ಯಸಭೆಗೆ ಎಚ್.ಡಿ. ದೇವೇಗೌಡ ಅವರನ್ನು ಆಯ್ಕೆ ಮಾಡಲು ನಮ್ಮ ವಿರೋಧ ಇಲ್ಲ. ಆದರೆ, ಆ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಎನ್‌ಡಿಎ ವತಿಯಿಂದ ಅವರನ್ನು ಆಯ್ಕೆ ಮಾಡುವ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ. ಜೆಡಿಎಸ್ ನಾಯಕರೂ ಈ ಬಗ್ಗೆ ನಮ್ಮೊಂದಿಗೆ ಮಾತನಾಡಿಲ್ಲ’ ಎಂದರು.

‘ರಾಜ್ಯಸಭೆಗೆ ಯಾರನ್ನು ಆಯ್ಕೆ ಮಾಡಬೇಕು ಎಂಬುದನ್ನು ಪಕ್ಷದ ವರಿಷ್ಠರು ನಿರ್ಧರಿಸಲಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ‘ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸುವಲ್ಲಿ ದೇವೇಗೌಡ ಅವರು ಜತೆಯಾಗಿ ನಿಂತಿದ್ದಾರೆ. ಅವರು ರಾಜ್ಯಸಭೆಗೆ ಆಯ್ಕೆಯಾದರೆ ಒಳ್ಳೆಯದೆ. ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಈ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ’ ಎಂದು ಹೇಳಿದರು.

ಕಳವು: ತಲೆಮರೆಸಿಕೊಂಡಿದ್ದ ಯುವತಿ 8 ವರ್ಷದ ಬಳಿಕ ಸೆರೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಅಂಗಡಿಗಳಲ್ಲಿ ವಾಚ್, ಪವರ್ ಬ್ಯಾಂಕ್ ಹಾಗೂ ಹೇರ್ ಬ್ಯಾಂಡ್ ಕಳವು ಮಾಡಿದ್ದ ಪ್ರಕರಣದಲ್ಲಿ ಎಂಟು ವರ್ಷದಿಂದ ತಲೆಮರೆಸಿಕೊಂಡಿದ್ದ ಯುವತಿಯನ್ನು ಪೊಲೀಸರು ಈಚೆಗೆ ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಮನ್ನನ್ ಹುಸೇನ್ (30) ಬಂಧಿತ ಆರೋಪಿ. ನ್ಯಾಯಾಲಯದ ವಿಚಾರಣೆಗೆ ಗೈರಾಗಿದ್ದ ಹಿನ್ನೆಲೆಯಲ್ಲಿ ಅವರ ವಿರುದ್ಧ ವಾರಂಟ್ ಜಾರಿಯಾಗಿತ್ತು.

ಈಚೆಗೆ ಇಂದಿರಾನಗರದಲ್ಲಿ ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದ ವೇಳೆ ಸ್ಥಳೀಯರ ಮಾಹಿತಿ ಮೇರೆಗೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದರು. 2018ರ ಕಳವು ಪ್ರಕರಣದ ಆರೋಪಿ ಎಂಬುದನ್ನು ಪತ್ತೆ ಹಚ್ಚಿದ್ದಾರೆ. ಬಳಿಕ ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

84 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಪಡೆದ 84 ಅಭ್ಯರ್ಥಿಗಳಿಗೆ ಕೇಂದ್ರ ಸಣ್ಣ ಮತ್ತು ಮಧ್ಯಮ ಉದ್ಯಮಗಳು ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರು ಶನಿವಾರ ನಡೆದ 19ನೇ ಉದ್ಯೋಗ ಮೇಳದಲ್ಲಿ ನೇಮಕಾತಿ ಪತ್ರಗಳನ್ನು ವಿತರಿಸಿದರು.

ನಂತರ ಮಾತನಾಡಿದ ಶೋಭಾ ಕರಂದ್ಲಾಜೆ, ನಮ್ಮ ದೇಶವು 2047ರ ವೇಳೆಗೆ ವಿಶ್ವದಲ್ಲಿ ಅಗ್ರಸ್ಥಾನ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕು’ ಎಂದರು. ಎಲ್ಲಾ ಸರ್ಕಾರಿ ನೌಕರರು ತಮಗೆ ಸಿಗುವ 30 ರಿಂದ 35 ವರ್ಷಗಳ ಸೇವಾ ಅವಧಿಯನ್ನು ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಬಳಸಿಕೊಳ್ಳಬೇಕು’ ಎಂದರು.

ಇದೇ ಸಂದರ್ಭದಲ್ಲಿ ರೈಲ್ವೆ ಇಲಾಖೆಗೆ ನೇಮಕಗೊಂಡ 35 ಅಭ್ಯರ್ಥಿಗಳು ಸೇರಿದಂತೆ ಅಂಚೆ ಇಲಾಖೆ, ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ), ಬ್ಯಾಂಕ್ ಆಫ್ ಬರೋಡಾ, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಮತ್ತು ಇತರೆ ಕೇಂದ್ರ ಸರ್ಕಾರಿ ಸಂಸ್ಥೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಶುತೋಷ್ ಕುಮಾರ್ ಸಿಂಗ್, ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪ್ರವೀಣ್ ಕಾತರಕಿ, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ ಮತ್ತಿತರರು ಇದ್ದರು.

4.26 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆ | ‘ಹಸಿವು ಮುಕ್ತ ಕರ್ನಾಟಕ’ದ ಕನಸು ನನಸು

ದಾಸೋಹ ಪರಂಪರೆಯ ಆಧುನಿಕ ರೂಪ ಅನ್ನಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ‘ಆಶೆ ಇಚ್ಛೆಗೆನ್ನ ಗಾಸಿ ಮಾಡದಿರಯ್ಯಾ, ದಾಸೋಹಿಯಾಗಿರ್ಪ ದಾಸನಾಗಿರಿಸೆನ್ನ ಕೂಡಲಸಂಗಮದೇವಾ, ನಿಮ್ಮ ಧರ್ಮ’– ಜಗಜ್ಯೋತಿ ಬಸವಣ್ಣನವರ ಈ ಅಮರ ವಚನದ ಸಾಲುಗಳು ಮನುಷ್ಯನಲ್ಲಿರಬೇಕಾದ ಕರುಣೆ ಮತ್ತು ದಾಸೋಹದ ನಿಜವಾದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತವೆ. ಶರಣರ ಈ ಕಲ್ಯಾಣದ ಆಶಯವೇ ಕರ್ನಾಟಕ ಸರ್ಕಾರದ ‘ಅನ್ನಭಾಗ್ಯ’ ಯೋಜನೆಯಾಗಿ ನಾಡಿನಲ್ಲಿ ಸಾಕಾರಗೊಂಡಿದೆ. 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ‘ಅನ್ನಭಾಗ್ಯ’ ಅತ್ಯಂತ ಪ್ರಮುಖ ಹಾಗೂ ತಳಮಟ್ಟದ ಜನರನ್ನು ತಲುಪಿದ ಯೋಜನೆಯಾಗಿ ಯಶಸ್ಸನ್ನೂ ಸಾಧಿಸಿದೆ.

ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಮತ್ತು ಅಂತ್ಯೋದಯ ಕಾರ್ಡ್ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯನಿಗೆ ತಿಂಗಳಿಗೆ ಒಟ್ಟು 10 ಕೆಜಿ ಆಹಾರ ಧಾನ್ಯವನ್ನು ನೀಡುವ ಉದ್ದೇಶದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಅಕ್ಕಿಯನ್ನು ಪೂರೈಸಲು ವಿಫಲವಾದಾಗ, ರಾಜ್ಯ ಸರ್ಕಾರವು ಕೈಕಟ್ಟಿ ಕೂರದೆ, ಹೆಚ್ಚುವರಿಯಾಗಿ ಘೋಷಿಸಿದ 5 ಕೆಜಿ ಅಕ್ಕಿಯ ಬದಲಾಗಿ, ಪ್ರತಿ ಕೆಜಿಗೆ 34 ರೂಪಾಯಿಯಂತೆ 2024ರ ಡಿಸೆಂಬರ್‌ವರೆಗೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ 11,821 ಕೋಟಿ ರೂ. ನೇರವಾಗಿ ನಗದು ವರ್ಗಾವಣೆ (Direct Benefit Transfer - DBT) ಮಾಡುವ ಮೂಲಕ ‘ನುಡಿದಂತೆ ನಡೆದ ಸರ್ಕಾರ’ ಎಂಬ ಘೋಷವಾಕ್ಯವನ್ನು ಉಳಿಸಿಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ 4.26 ಕೋಟಿ ಬಡ ಕುಟುಂಬಗಳ ಹಸಿವು ನೀಗಿಸಿರುವ ‘ಅನ್ನಭಾಗ್ಯ’ವು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ‘ಹಸಿವು ಮುಕ್ತ ಕರ್ನಾಟಕ’ದ ಕನಸನ್ನು ನನಸಾಗಿಸಿದೆ.

ದಿನಗೂಲಿ ನೌಕರರು, ಆಟೋ ಚಾಲಕರು, ಕೃಷಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗೆ ಅನ್ನಭಾಗ್ಯ ಯೋಜನೆಯಿಂದಾಗಿ ಪ್ರತಿ ತಿಂಗಳು ಆಹಾರಕ್ಕಾಗಿ ವ್ಯಯಿಸುತ್ತಿದ್ದ ಸಾವಿರಾರು ರೂಪಾಯಿಗಳು ಉಳಿತಾಯವಾಗುತ್ತಿವೆ. ಒಂದು ವರ್ಷಗಳವರೆಗೆ ಬ್ಯಾಂಕ್ ಖಾತೆಗೆ ನೇರವಾಗಿ ಜಮೆಯಾದ ನಗದು ಹಣವನ್ನು ಬಡ ಕುಟುಂಬಗಳು ಬೇಳೆಕಾಳು, ಎಣ್ಣೆ, ತರಕಾರಿ ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಪದಾರ್ಥಗಳ ಖರೀದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಬಳಸಿಕೊಂಡಿದ್ದಾರೆ. ಈ ಯೋಜನೆಯು ರಾಜ್ಯದಲ್ಲಿ ಅಪೌಷ್ಟಿಕತೆಯನ್ನು ನಿವಾರಿಸುವಲ್ಲಿ ಮತ್ತು ಗ್ರಾಮೀಣ ಭಾಗದ ಆರ್ಥಿಕತೆಗೆ ಚೇತರಿಕೆ ನೀಡುವಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಕೋಟ್ಯಂತರ ಫಲಾನುಭವಿಗಳು: ಸರ್ಕಾರದ ಅಂಕಿ–ಅಂಶಗಳ ಪ್ರಕಾರ, ಅನ್ನಭಾಗ್ಯ ಯೋಜನೆಯಡಿ ರಾಜ್ಯದ 4.26 ಕೋಟಿಗೂ ಅಧಿಕ ಫಲಾನುಭವಿಗಳು ನಿರಂತರವಾಗಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. 2023– 24ರವರೆಗೆ ಡಿಬಿಟಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ನೇರವಾಗಿ ಬಡವರ ಖಾತೆಗೆ ವರ್ಗಾಯಿಸುವ ಮೂಲಕ ಪಾರದರ್ಶಕತೆಯನ್ನು ಕಾಯ್ದುಕೊಂಡಿದೆ. ಪಡಿತರ ವಿತರಣಾ ವ್ಯವಸ್ಥೆಯನ್ನು (PDS) ಇನ್ನಷ್ಟು ಬಲಪಡಿಸಲಾಗಿದ್ದು, ಯಾವುದೇ ಸೋರಿಕೆಯಿಲ್ಲದೆ ಅರ್ಹರಿಗೆ ಸೌಲಭ್ಯ ತಲುಪುವಂತೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ.

ದೇಶದಲ್ಲೇ ಮಾದರಿ: ಕರ್ನಾಟಕದ ‘ಅನ್ನಭಾಗ್ಯ’ ಯೋಜನೆಯು ಕೇವಲ ಉಚಿತ ಪಡಿತರ ನೀಡುವುದಕ್ಕೆ ಸೀಮಿತವಾಗಿರದೆ, ಬಡವರ ಆಹಾರದ ಹಕ್ಕನ್ನು ಎತ್ತಿಹಿಡಿದಿದೆ. ದೇಶದ ಯಾವುದೇ ರಾಜ್ಯದಲ್ಲೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಉಚಿತ ಆಹಾರ ಧಾನ್ಯ ಮತ್ತು ನಗದು ವರ್ಗಾವಣೆಯ ಸೌಲಭ್ಯವನ್ನು ನೀಡಿದ ಉದಾಹರಣೆಯಿಲ್ಲ. ಕರ್ನಾಟಕದ ಈ ಹಸಿವು ಮುಕ್ತ ಮತ್ತು ಪೌಷ್ಟಿಕ ಭದ್ರತೆಯ ಮಾದರಿಯನ್ನು ಇಂದು ದೇಶದ ಇತರೆ ರಾಜ್ಯಗಳು ಹಾಗೂ ಸಾಮಾಜಿಕ ತಜ್ಞರು ಮುಕ್ತಕಂಠದಿಂದ ಶ್ಲಾಘಿಸುತ್ತಿದ್ದಾರೆ.

‘ಇಂದಿರಾ ಕಿಟ್’ ಶೀಘ್ರ ಅನುಷ್ಠಾನ

‘ಅನ್ನಭಾಗ್ಯ’ ಯೋಜನೆಯಡಿ ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲಾಗಿ ‘ಇಂದಿರಾ’ (Integrated Nutrition And Dietary Initiative for Revitalizing Annabhagya Beneficiaries) ಆಹಾರ ಕಿಟ್ ವಿತರಿಸುವ ಕುರಿತು ಈಗಾಗಲೇ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆಜಿ ಅಕ್ಕಿ ಬದಲಾಗಿ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು. ಇದಕ್ಕಾಗಿ ಪ್ರತಿ ತಿಂಗಳು ಒಟ್ಟು 18,628 ಮೆ.ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆ.ಟನ್ ಸೂರ್ಯಕಾಂತಿ ಎಣ್ಣೆ,

ವಂಚನೆ: ಯುವಕನಿಂದಲೂ ಪ್ರತಿದೂರು

ಮೈಸೂರು ನಗರ ಪೊಲೀಸ್ ಕಮಿಷನರ್ ಕಚೇರಿಗೆ ಇ–ಮೇಲ್ ಮೂಲಕ ದೂರು ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯನ್ನು ಮದುವೆ ಆಗುವುದಾಗಿ ನಂಬಿಸಿ, ಹಣಕ್ಕೆ ಬೇಡಿಕೆಯಿಟ್ಟು ವಂಚಿಸಿದ್ದ ಆರೋಪದಡಿ ಯುವಕನ ವಿರುದ್ಧ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಯುವತಿಯ ಕುಟುಂಬಸ್ಥರ ವಿರುದ್ಧ ಯುವಕ ಪ್ರತಿದೂರು ಸಲ್ಲಿಸಿದ್ದಾರೆ.

ಮೈಸೂರಿನ ಪ್ರದೀಪ್ ಸೋಲೊಮನ್ ಹಾಗೂ ಅವರ ತಾಯಿ ಕಲಾವತಿ ವಿರುದ್ಧ ಆಡುಗೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ತನಿಖೆ ಆರಂಭಿಸಿದ್ದರು. ಇದೀಗ ಪ್ರದೀಪ್ ಅವರೂ ಇ–ಮೇಲ್ ಮೂಲಕ ಮೈಸೂರು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಿದ್ದಾರೆ ಎಂಬುದು ಗೊತ್ತಾಗಿದೆ.

‘ಎಸ್.ಪ್ಯಾಟ್ರಿಕ್ ರಾಜು ಕುಟುಂಬಸ್ಥರು ಮದುವೆ, ನಿಶ್ಚಿತಾರ್ಥದ ಹೆಸರಿನಲ್ಲಿ ಮೋಸ ಮಾಡಿದ್ದಾರೆ. ಅಪರಾಧ ಸಂಚು, ಸುಳ್ಳು ಆರೋಪಗಳು, ಮಾನಹಾನಿ ಮಾಡಿದ್ದಾರೆ. ಜೀವ ಬೆದರಿಕೆ ಹಾಕಿ ಮಾನಸಿಕ ಹಿಂಸೆ ನೀಡಿದ್ದಾರೆ. ಈಗಾಗಲೇ ನನ್ನೊಂದಿಗೆ ಮದುವೆ ನಿಶ್ಚಿತಾರ್ಥ ಕಾರ್ಯಕ್ರಮ ನೆರವೇರಿಸಿ, ಮದುವೆಗೆ ಸಂಪೂರ್ಣ ಒಪ್ಪಿಗೆ ನೀಡಿದ್ದರು. ನಾನು ಸುಮಾರು ₹40 ಲಕ್ಷದಿಂದ ₹44 ಲಕ್ಷ ಖರ್ಚು ಮಾಡಿದ್ದೇನೆ’ ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ.

‘ಉದ್ದೇಶ ಪೂರ್ವಕವಾಗಿ ತಪ್ಪು ಮಾಹಿತಿ ನೀಡಿ, ನನ್ನನ್ನು ನಂಬಿಸಿ ಮೋಸ ಮಾಡಲಾಗಿದೆ. ಕೆಲವು ಮಹತ್ವದ ವಿಚಾರಗಳನ್ನು ಮರೆಮಾಚಿ ನನ್ನೊಂದಿಗೆ ಮದುವೆ ಸಂಬಂಧ ಮುಂದುವರಿಸಲಾಗಿದ್ದು, ಈ ಮೂಲಕ ನನಗೆ ಆರ್ಥಿಕ, ಮಾನಸಿಕ ಹಾನಿ ಉಂಟಾಗಿದೆ’ ಎಂದು ಉಲ್ಲೇಖಿಸಿದ್ದಾರೆ.

‘ಪ್ರದೀಪ್ ಅವರು ಮೈಸೂರು ನಗರ ಪೊಲೀಸ್ ಕಮಿಷನರ್ ಕಚೇರಿಗೆ ದೂರು ನೀಡಿದ್ದಾರೆ ಎಂಬುದು ಗೊತ್ತಾಗಿದೆ. ಆ ದೂರಿನ ಪ್ರತಿ ನಮಗೆ ವರ್ಗಾವಣೆಯಾದರೆ ಪರಿಶೀಲಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಯುವಕನ ವಿರುದ್ಧ ಆರೋಪ ಏನು?: ಯುವತಿಯ ತಂದೆ ಪ್ಯಾಟ್ರಿಕ್ ರಾಜು ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು.

‘ಪ್ಯಾಟ್ರಿಕ್ ರಾಜುಗೆ 25 ವರ್ಷದ ಪುತ್ರಿ ಇದ್ದಾರೆ. ವಿವಾಹಕ್ಕೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿ ವರನನ್ನು ಹುಡುಕುತ್ತಿದ್ದರು. ಆ ವೇಳೆ ಪ್ರದೀಪ್ ಸೋಲೊಮನ್ ಹಾಗೂ ಅವರ ತಾಯಿ ಕಲಾವತಿ ಅವರು ಪ್ಯಾಟ್ರಿಕ್ ರಾಜು ಅವರನ್ನು ಸಂಪರ್ಕಿಸಿದ್ದರು. ನ್ಯಾಯಾಧೀಶ ಹುದ್ದೆಗೆ ಪರೀಕ್ಷೆ ಬರೆದಿದ್ದು, ಈ ಬಾರಿ ನ್ಯಾಯಾಧೀಶ ಆಗುತ್ತೇನೆ’ ಎಂಬುದಾಗಿ ಪ್ರದೀಪ್ ಸುಳ್ಳು ಹೇಳಿದ್ದರು. ಮೈಸೂರಿನಲ್ಲಿ ಇರುವ ಆರೋಪಿಯ ಮನೆಗೆ ಪ್ಯಾಟ್ರಿಕ್ ರಾಜು ಕುಟುಂಬಸ್ಥರೊಂದಿಗೆ ಹೋಗಿದ್ದರು. ಆಗ ಮೈಸೂರಿನಲ್ಲಿ ಮೂರು ಎಕರೆ ಜಾಗ, ಒಂದು ಕಾಂಪ್ಲೆಕ್ಸ್ ಇರುವುದಾಗಿ ಪ್ರದೀಪ್ ನಂಬಿಸಿದ್ದರು. ಜೊತೆಗೆ, ಪಿಎಚ್‌.ಡಿ ಪದವೀಧರ ಎಂಬುದಾಗಿ ಸುಳ್ಳು ಮಾಹಿತಿ ನೀಡಿದ್ದರು’ ಎಂದು ದೂರು ನೀಡಲಾಗಿತ್ತು.

ಲೈಂಗಿಕ ಕಿರುಕುಳ: ಬಾಕ್ಸಿಂಗ್ ತರಬೇತುದಾರನ ಸೆರೆ

ಬೆಂಗಳೂರು: ಬಾಕ್ಸಿಂಗ್ ಕ್ಲಬ್‌ನಲ್ಲಿ 17 ವರ್ಷದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಬಾಕ್ಸಿಂಗ್ ತರಬೇತುದಾರನನ್ನು ಸಂಪಂಗಿರಾಮನಗರ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ 50 ವರ್ಷದ ತರಬೇತುದಾರನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ನಗರದ ಕಸ್ತೂರ ಬಾ ರಸ್ತೆಯಲ್ಲಿನ ಕ್ರೀಡಾಂಗಣ ಆವರಣದಲ್ಲಿರುವ ಖಾಸಗಿ ಬಾಕ್ಸಿಂಗ್ ಕ್ಲಬ್‌ನಲ್ಲಿ ಬಾಲಕಿ ತರಬೇತಿ ಪಡೆಯಲು ಬರುತ್ತಿದ್ದಳು. ತರಬೇತಿ ವೇಳೆ ಆರೋಪಿ ಲೈಂಗಿಕ ಕಿರುಕುಳ ನೀಡುತ್ತಿದ್ದ. ಕಿರುಕುಳ ನೀಡಿದ್ದ ಬಗ್ಗೆ ಯಾರಿಗಾದರೂ ಹೇಳಿದರೆ ಸುಮ್ಮನೆ ಬಿಡುವುದಿಲ್ಲ ಎಂಬುದಾಗಿಯೂ ಜೀವ ಬೆದರಿಕೆ ಹಾಕಿದ್ದ. ತರಬೇತುದಾರನ ಅನುಚಿತ ವರ್ತನೆ ಅತಿಯಾದಾಗ, ಈ ವಿಚಾರವನ್ನು ಬಾಲಕಿ ತನ್ನ ತಾಯಿ ಬಳಿ ಹೇಳಿಕೊಂಡಿದ್ದಳು. ಬಳಿಕ, ಬಾಲಕಿಯ ತಾಯಿ ನೀಡಿರುವ ದೂರಿನ ಮೇರೆಗೆ ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೇ 17ರಂದು ಬಾಕ್ಸಿಂಗ್ ಸ್ಪರ್ಧೆಗೆ ಚೆನ್ನೈಗೆ ತೆರಳಿದ್ದ ವೇಳೆಯೂ ಆರೋಪಿ ಅವರಿದ್ದ ಕೊಠಡಿಗೆ ಮಗಳನ್ನು ಕರೆಸಿಕೊಂಡು ಕಿರುಕುಳ ನೀಡಿದ್ದ. ಆಕೆ ವಿರೋಧಿಸಿದ್ದರಿಂದ ನಿಂದಿಸಿದ್ದ. ಕ್ರೀಡಾಂಗಣದಲ್ಲಿಯೂ ಇದೇ ರೀತಿ ವರ್ತಿಸಿದ್ದ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

AMITY UNIVERSITY BENGALURU

LAW

- B.A, LL.B (Hons)*
- LL.B (Hons)*
- LL.M

(*Approved by BCI)

Scholarships	100%	50%	25%
UG Programmes			
12th (agg.)	95%	90%	85%
PG Programmes (Non-MBA)			
12th (agg.)	95%	90%	-
Graduation (agg.)	80%	75%	-

Above scholarships offered across all disciplines

To apply visit:
amity.edu/bengaluru
by: 29th May 2026
7303-399-000

The Amity Bengaluru Advantage

- Placements in leading entities such as SBI Mutual Fund, ICICI Lombard, Sheenlac Paints, Policy Bazaar, DCB Bank, Fractal Analytics, HiveMinds...
- Distinguished faculty comprising eminent visiting jurists & policy makers
- Regular visits to Courts, Lok Adalats, Tribunals, Jails, Forensics Labs and Police Stations
- Practical exposure through legal aid camps, pro-bono services, case presentations, moot court competitions, legal quiz...
- Centre for Research in Corporate Law & Entrepreneurial Practices
- Value-added courses such as foreign languages, specialized courses to enhance communication skills
- Eminent law experts visiting the campus include SC Judges, HC Judges, Lokayukta officials, Business Law Chamber Associates...

Amity University Bengaluru, NH 648, Devanahalli–Doddaballapur Rd, Bengaluru | E: admissions.blr@amity.edu

ಅತ್ಯಾಚಾರಕ್ಕೆ ಯತ್ನ: ಆರೋಪಿ ಸೆರೆ

ಬೆಂಗಳೂರು: ಪಾರ್ಟಿಗೆ ತೆರಳಿದ್ದ ವೇಳೆ ಕೇರಳದ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ ಆರೋಪಿಯನ್ನು ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಹೈನಾಸ್ ಬಂಧಿತ ಆರೋಪಿ. ‘ಕೇರಳದ 20 ವರ್ಷದ ವಿದ್ಯಾರ್ಥಿನಿ ನೀಡಿದ ದೂರಿನ ಮೇಲೆ ಹೈನಾಸ್ ಮತ್ತು ಸುರೇಶ್ ವಿರುದ್ಧ ಮಡಿವಾಳ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ದೂರು ಆಧರಿಸಿ, ಆರೋಪಿ ಹೈನಾಸ್ ಹಾಗೂ ಸುರೇಶ್‌ನನ್ನು ವಶಕ್ಕೆ ಪಡೆಯಲಾಗಿತ್ತು. ಆ ಪೈಕಿ ಹೈನಾಸ್‌ನನ್ನು ಬಂಧಿಸಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಮತ್ತೊಬ್ಬ ಆರೋಪಿ ಸುರೇಶ್ ವಿಚಾರಣೆ ಮುಂದುವರಿದಿದೆ’ ಎಂದು ಪೊಲೀಸರು ಹೇಳಿದರು.

ನಗರದ ಖಾಸಗಿ ಕಾಲೇಜಿನಲ್ಲಿ ಕೇರಳದ ಯುವತಿ ವ್ಯಾಸಂಗ ಮಾಡುತ್ತಿದ್ದಾರೆ. ಬಿಡುವಿನ ವೇಳೆ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಹೋಟೆಲ್ ಮಾಲೀಕ ಅತುಲ್ ಘೋಷ್ ಅವರು ಪಾರ್ಟಿ ಆಯೋಜಿಸಿದ್ದರು. ಮೇ 11ರಂದು ರಾತ್ರಿ ಹೋಟೆಲ್ ಮಾಲೀಕ, ಯುವತಿ, ಆರೋಪಿ ಸೇರಿ ನಾಲ್ವರು ಪಾರ್ಟಿಗೆ ಹೋಗಿದ್ದರು. ಈ ವೇಳೆ ಊಟ ತರಲು ಸಂತ್ರಸ್ತೆ ಹಾಗೂ ಹೈನಾಸ್ ತೆರಳಿದ್ದರು. ಈ ವೇಳೆ ಸಂತ್ರಸ್ತೆಯ ಜತೆಗೆ ಆರೋಪಿ ಅನುಚಿತವಾಗಿ ವರ್ತಿಸಿದ್ದ ಎಂಬುದಾಗಿ ದೂರು ನೀಡಲಾಗಿತ್ತು ಎಂದು ಮೂಲಗಳು ಹೇಳಿವೆ.

ಊಟ ತೆಗೆದುಕೊಂಡು ಪಾರ್ಟಿ ನಡೆಯುವ ಸ್ಥಳಕ್ಕೆ ಬಂದ ಮೇಲೆ ಆರೋಪಿಯು ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ. ಸ್ಥಳಕ್ಕೆ ಬಂದಿದ್ದ ಹೋಟೆಲ್ ಮಾಲೀಕ ಹಾಗೂ ಇತರರು, ಆರೋಪಿ ಮೇಲೆ ಹಲ್ಲೆ ನಡೆಸಿ ಯುವತಿಯನ್ನು ರಕ್ಷಿಸಿದ್ದರು. ಆಗ ಹೋಟೆಲ್ ಮಾಲೀಕರ ಮೇಲೂ ಆರೋಪಿ ಬಿಯರ್ ಬಾಟಲಿಯಿಂದ ಹಲ್ಲೆಗೆ ಮುಂದಾಗಿದ್ದ. ಅಲ್ಲದೇ ಯುವತಿಗೂ ಜೀವಬೆದರಿಕೆ ಹಾಕಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಮಡಿವಾಳ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಘಟನೆ

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ವಿದ್ಯಾರ್ಥಿ ಹಾಗೂ ಎಲೆಕ್ಟ್ರಿಕ್ ಸ್ಕೂಟಿ ಸವಾರ ಮೃತಪಟ್ಟಿದ್ದಾರೆ.

ಜ್ಞಾನಭಾರತಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಹಾಗೂ ಸರಕು ಸಾಗಣೆ ಆಟೊ ನಡುವೆ ಸಂಭವಿಸಿದ ಅಪಘಾತದಲ್ಲಿ ಬಿಎಸ್ಸಿ ವಿದ್ಯಾರ್ಥಿ, ಉಲ್ಲಾಳು ನಿವಾಸಿ ಸುಶಾಂಕ್(21) ಮೃತಪಟ್ಟಿದ್ದಾರೆ. ಶುಕ್ರವಾರ ತಡರಾತ್ರಿ ಮಲ್ಲತ್ತಹಳ್ಳಿ ಜಂಕ್ಷನ್‌ನ ಕಲಾಗ್ರಾಮದ ಬಳಿ ದುರ್ಘಟನೆ ನಡೆದಿದೆ.

ಸರಕು ಸಾಗಣೆ ಆಟೊ ಚಾಲಕ ಹರೀಶ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಶಿವಮೊಗ್ಗದ ಸುಶಾಂಕ್ ಅವರು ನಗರದ ಖಾಸಗಿ ಕಾಲೇಜಿನಲ್ಲಿ ಬಿಎಸ್ಸಿ ಓದುತ್ತಿದ್ದರು. ಮಲ್ಲತ್ತಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಶುಕ್ರವಾರ ತಡರಾತ್ರಿ ಬೈಕ್‌ನಲ್ಲಿ ಮಲ್ಲತ್ತಹಳ್ಳಿ ಕಡೆಯಿಂದ ಅಂಬೇಡ್ಕರ್ ಕಾಲೇಜು ಕಡೆ ಹೋಗುತ್ತಿದ್ದರು. ಅದೇ ಸಮಯದಲ್ಲಿ ಅಂಬೇಡ್ಕರ್ ಕಾಲೇಜು ಕಡೆಯಿಂದ ಮಲ್ಲತ್ತಹಳ್ಳಿ ಕಡೆಗೆ ವೇಗವಾಗಿ ಬಂದ ಸರಕು ಸಾಗಣೆ ಆಟೊ, ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಗಂಭೀರವಾಗಿ ಗಾಯಗೊಂಡು ಸುಶಾಂಕ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು. ಜ್ಞಾನಭಾರತಿ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಡಿವಾಳ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಎಲೆಕ್ಟ್ರಿಕ್ ಸ್ಕೂಟಿ ಸವಾರ ಆಂಧ್ರಪ್ರದೇಶದ ಸಾಯಿದುರ್ಗ ರಾವ್(23) ಮೃತಪಟ್ಟಿದ್ದಾರೆ.

ಬಿಎಂಟಿಸಿ ಬಸ್ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಶುಕ್ರವಾರ ತಡರಾತ್ರಿ ತಾವರೆಕೆರೆ ಜಂಕ್ಷನ್ ಸಮೀಪ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಾಯಿದುರ್ಗಾ ರಾವ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದರು. ಶುಕ್ರವಾರ ತಡರಾತ್ರಿ ಎಲೆಕ್ಟ್ರಿಕ್ ಸ್ಕೂಟಿಯಲ್ಲಿ ತಾವರೆಕೆರೆ ಜಂಕ್ಷನ್‌ನಿಂದ ಚೆಕ್‌ಪೋಸ್ಟ್ ಕಡೆ ಹೋಗುತ್ತಿದ್ದರು. ಸರ್ಜಾಪುರ ಕಡೆ ಹೋಗುತ್ತಿದ್ದ ಬಿಎಂಟಿಸಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಗಂಭೀರ ಗಾಯಗೊಂಡಿದ್ದ ಸಾಯಿದುರ್ಗಾ ರಾವ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಮಡಿವಾಳ ಸಂಚಾರ ಪೊಲೀಸರು ಹೇಳಿದರು.

ವಿದ್ಯಾರ್ಥಿನಿ ಮೇಲೆ ನಾಯಿ ಹಿಂಡು ದಾಳಿ

ಬೆಂಗಳೂರು: ರಾಮಮೂರ್ತಿನಗರದ ಸಮೀಪವಿರುವ ಹೊಯ್ಸಳ ನಗರದಲ್ಲಿ ಶುಕ್ರವಾರ ರಾತ್ರಿ ಬೀದಿ ನಾಯಿಗಳು ವಿದ್ಯಾರ್ಥಿನಿ ಮೇಲೆ ದಾಳಿ ನಡೆಸಿವೆ.

ವಿದ್ಯಾರ್ಥಿನಿಯು ವಸತಿ ಬಡಾವಣೆಯ ರಸ್ತೆಯಲ್ಲಿ ನಡೆದುಕೊಂಡು ಮನೆಗೆ ಹೋಗುತ್ತಿದ್ದಾಗ, ನಾಯಿಗಳು ದಾಳಿ ಮಾಡಿರುವುದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ವಿದ್ಯಾರ್ಥಿನಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಾಗ ಅಲ್ಲಿಯೇ ಬೀಡುಬಿಟ್ಟಿದ್ದ ಹತ್ತಕ್ಕೂ ಅಧಿಕ ನಾಯಿಗಳು ಬೊಗಳುತ್ತಾ ಸುತ್ತುವರಿದಿದ್ದವು. ಅವರು ಮುಂದೆ ಸಾಗಲು ಪ್ರಯತ್ನಿಸಿದಾಗ ನಾಯಿಗಳು ಆಕ್ರಮಣ ಮಾಡಿದವು. ಹೆದರಿದ ವಿದ್ಯಾರ್ಥಿನಿ ಕಿರುಚುತ್ತಾ ಹಿಂದಕ್ಕೆ ಓಡಿರುವುದು, ಒಂದು ನಾಯಿ ಎರಡು ಮೂರು ಬಾರಿ ಕಚ್ಚಿ ಗಾಯಗೊಳಿಸಿರುವುದು ವಿಡಿಯೊದಲ್ಲಿದೆ.

ಕಿರುಚಾಟ ಕೇಳಿ ಓಡಿ ಬಂದ ಸ್ಥಳೀಯರು ನಾಯಿಗಳನ್ನು ಓಡಿಸಿ ವಿದ್ಯಾರ್ಥಿನಿಯನ್ನು ರಕ್ಷಿಸಿದ್ದಾರೆ. ಆನಂತರ ಕೆ.ಆರ್. ಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಲ್ಲಿ ಅವರಿಗೆ ಪ್ರಾಥಮಿಕ ಚಿಕಿತ್ಸೆ ಮತ್ತು ಅಗತ್ಯ ಲಸಿಕೆಗಳನ್ನು ನೀಡಲಾಗಿದೆ.

ಈ ಘಟನೆಯಿಂದ ಹೊಯ್ಸಳ ನಗರದ ನಿವಾಸಿಗಳಲ್ಲಿ ತೀವ್ರ ಆತಂಕ ಮನೆಮಾಡಿದೆ. ಅದರಲ್ಲೂ ಕತ್ತಲಾದ ನಂತರ ಬೀದಿಗಳಲ್ಲಿ ಓಡಾಡುವುದು ಪ್ರಾಣಾಪಾಯಕ್ಕೆ ಆಹ್ವಾನ ನೀಡಿದಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಬಡಾವಣೆಯಲ್ಲಿ ಬೀದಿ ನಾಯಿಗಳ ಸಂಖ್ಯೆ ಮಿತಿಮೀರಿದೆ. ಸಂಬಂಧಪಟ್ಟ ಅಧಿಕಾರಿಗಳು ಪ್ರಾಣಿ ಜನನ ನಿಯಂತ್ರಣ (ಎಬಿಸಿ) ಕಾರ್ಯಕ್ರಮವನ್ನು ಚುರುಕುಗೊಳಿಸಬೇಕು. ವಸತಿ ಪ್ರದೇಶಗಳಲ್ಲಿರುವ ಆಕ್ರಮಣಕಾರಿ ನಾಯಿಗಳನ್ನು ಹಿಡಿಯಬೇಕು ಎಂದು ನಿವಾಸಿಗಳು ಆಗ್ರಹಿಸಿದ್ದಾರೆ.

ಸಮ್ಮೇಳನದಲ್ಲಿ ಡಾ.ಅರವಿಂದ್ ಜೆ.,ಡಾ.ಕಮಲಾಕರ ತ್ರಿಪಾಠಿ, ಡಾ.ಕೆ.ಕೆ.ಪರೀಕ್, ಡಾ.ಬನ್ನಿ ಸಾಬು, ಡಾ.ಅನೂಜ್ ಮಹೇಶ್ವರಿ, ಡಾ.ಜ್ಯೋತಿದೇವ್ ಕೇಶವ್‌ದೇವ್ ಹಾಗೂ ಮಧುಮೇಹ ತಜ್ಞರು ಪಾಲ್ಗೊಂಡಿದ್ದರು

ಮಧುಮೇಹ ನಿರ್ವಹಣೆ: ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧುಮೇಹವನ್ನು ಕೇಂದ್ರೀಕರಿಸಿ ನಗರದಲ್ಲಿ ಹಮ್ಮಿಕೊಂಡಿದ್ದ 10ನೇ ಎಡಿಸಿ ಸಮ್ಮೇಳನದಲ್ಲಿ ಮಧುಮೇಹದ ನಿರ್ವಹಣೆ ಹಾಗೂ ಚಿಕಿತ್ಸೆಯಲ್ಲಿ ಇತ್ತೀಚಿನ ಆವಿಷ್ಕಾರಗಳ ಬಗ್ಗೆ ಚರ್ಚಿಸಲಾಯಿತು.

ಚಿಕಿತ್ಸಾ ಕ್ಷೇತ್ರದ ಚರ್ಚೆ

ಚಾನ್ಸರಿ ಪೆವಿಲಿಯನ್ ಹೋಟೆಲ್‌ನಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಈ ಸಮ್ಮೇಳನಕ್ಕೆ ಶನಿವಾರ ಚಾಲನೆ ದೊರೆಯಿತು. ದೇಶದ ವಿವಿಧೆಡೆಯಿಂದ ಸಾವಿರಕ್ಕೂ ಅಧಿಕ ವೈದ್ಯರು, ನೂರಕ್ಕೂ ಅಧಿಕ ಸಂಪನ್ಮೂಲ ವ್ಯಕ್ತಿಗಳು ಸೇರಿದಂತೆ ವೈದ್ಯಕೀಯ ಕ್ಷೇತ್ರದ ಪ್ರಮುಖರು ಪಾಲ್ಗೊಂಡಿದ್ದರು.

ಮಧುಮೇಹ ತಜ್ಞರಾದ ಡಾ. ಕಮಲಾಕರ ತ್ರಿಪಾಠಿ, ಡಾ. ಕೆ.ಕೆ. ಪರೀಕ್, ಡಾ. ಬನ್ನಿ ಸಾಬು, ಡಾ. ಅನೂಜ್ ಮಹೇಶ್ವರಿ ಮತ್ತು ಡಾ. ಜ್ಯೋತಿದೇವ್ ಕೇಶವ್‌ದೇವ್ ಸಮ್ಮೇಳನದಲ್ಲಿ ಮಾತನಾಡಿದರು.

ಬೆಂಗಳೂರಿನ ಬಸವೇಶ್ವರ ನಗರದ ಡಾ. ಅರವಿಂದ್ ಡಯಾಬಿಟಿಸ್ ಸೆಂಟರ್‌ನ ಅಧ್ಯಕ್ಷ ಡಾ. ಅರವಿಂದ್ ಜೆ. ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಸಮ್ಮೇಳನದಲ್ಲಿ, ಮಧುಮೇಹ ಚಿಕಿತ್ಸಾ ಕ್ಷೇತ್ರದಲ್ಲಿ ಕಳೆದೊಂದು ದಶಕದಲ್ಲಿ ಆದ ಬದಲಾವಣೆಯ ಬಗ್ಗೆಯೂ ತಜ್ಞರು ಸಮಾಲೋಚನೆ ನಡೆಸಿದರು.

ಮುಖ್ಯಾಂಶಗಳು

- ಸಾವಿರಕ್ಕೂ ಅಧಿಕ ವೈದ್ಯರು, ಸಂಪನ್ಮೂಲ ವ್ಯಕ್ತಿಗಳು ಭಾಗಿ
- ಕ್ಷೇತ್ರದ ಬದಲಾವಣೆ ಕುರಿತು ತಜ್ಞರಿಂದ ಸಮಾಲೋಚನೆ

ಸಕ್ಕರೆ ಮತ್ತು ಉಪ್ಪು ಅಗತ್ಯ ಎಂದು ಅಂದಾಜಿಸಲಾಗಿದೆ. ಆಹಾರ ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆ ಗರಿಷ್ಠ ಪ್ರಮಾಣದಲ್ಲಿ ನೀಡಲು ಈಗಾಗಲೇ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದು, ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿಯೂ ಸಹ ಕ್ಯೂಆರ್ ಸ್ಕ್ಯಾನ್ ಮಾಡಬಹುದಾದ ತಂತ್ರಾಂಶವನ್ನು ಅಳವಡಿಸಿ ಅದರ ಆಧಾರದ ಮೇಲೆ ಪಡಿತರ ಚೀಟಿದಾರರಿಗೆ ‘ಇಂದಿರಾ’ ಫುಡ್ ಕಿಟ್ ವಿತರಣೆ ಮಾಡಲಾಗುತ್ತದೆ.

‘ಅನ್ನರಾಮಯ್ಯ’ರಾದ ಸಿದ್ದರಾಮಯ್ಯ!

2013ರಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ಗಂಟೆಗಳಲ್ಲಿ ಸಿದ್ದರಾಮಯ್ಯನವರು ಘೋಷಿಸಿದ ಮೊದಲ ಐತಿಹಾಸಿಕ ಯೋಜನೆ ‘ಅನ್ನಭಾಗ್ಯ’. ಅಂದು ಕೇವಲ 1 ರೂಪಾಯಿಗೆ ಅಕ್ಕಿ ನೀಡಿ, ನಂತರ ಅದನ್ನು ಸಂಪೂರ್ಣ ಉಚಿತಗೊಳಿಸಿ ಬಡವರ ಹೊಟ್ಟೆ ತಣಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅಂದಿನಿಂದಲೇ ಕರ್ನಾಟಕದ ಜನತೆ ಅವರನ್ನು ಪ್ರೀತಿಯಿಂದ ‘ಅನ್ನರಾಮಯ್ಯ’ ಎಂದು ಕರೆಯಲಾರಂಭಿಸಿದರು.

ಅಂದು 2013 ರಲ್ಲಿ ಜಾರಿಗೆ ಬಂದ ಅನ್ನಭಾಗ್ಯ ಯೋಜನೆ, 2023 ರ ನಂತರ ‘ಪಂಚ ಗ್ಯಾರಂಟಿ’ಗಳಲ್ಲಿ ಒಂದಾಗಿ ಮತ್ತಷ್ಟು ಶಕ್ತಿಶಾಲಿಯಾಗಿ ಮರುಜನ್ಮ ಪಡೆಯಿತು. ಅಂದು ರಾಜಕೀಯ ಇಚ್ಛಾಶಕ್ತಿಯಿಂದ ಆರಂಭವಾದ ಯೋಜನೆ, ಇಂದು ರಾಜ್ಯದ ಕೋಟ್ಯಂತರ ಬಡವರ ಪಾಲಿಗೆ ಬದುಕಿನ ಭರವಸೆಯಾಗಿದೆ.

೨೦೧೩-೨೦೨೬

4.26 ಕೋಟಿಗೂ ಅಧಿಕ
ಒಟ್ಟು ಫಲಾನುಭವಿಗಳು
₹18,897 ಕೋಟಿಗೂ ಅಧಿಕ
ಈವರೆಗೆ ‘ಅನ್ನಭಾಗ್ಯ’ಕ್ಕೆ ವ್ಯಯಿಸಲಾದ ಅನುದಾನ

“ ಯಾರ ಮೇಲೂ ಅವಲಂಬಿಸದೇ ಬದುಕಬೇಕೆಂಬ ನನ್ನ ಕನಸಿಗೆ ‘ಅನ್ನಭಾಗ್ಯ’ ಯೋಜನೆ ಭದ್ರ ಆಸರೆಯಾಗಿದೆ. ಇದರಿಂದಾಗಿ ಹೊಟ್ಟೆಯ ಪಾಡಿನ ಆತಂಕವಿಲ್ಲದೆ, ಎಲ್ಲಾ ಗ್ಯಾರಂಟಿಗಳಿಂದ ಉಳಿತಾಯವಾದ ಹಣದಿಂದ ಒಂದು ಹಸು ಖರೀದಿಸಿ ಹೈನುಗಾರಿಕೆ ಆರಂಭಿಸಲು ಸಾಧ್ಯವಾಯಿತು. ಇಂದು ದಿನಾ ಹಾಲು ಮಾರಿ ಬರುವ ಆದಾಯದಲ್ಲಿ ನನ್ನ ಬದುಕು ಸ್ವಾಭಿಮಾನದಿಂದ ಸಾಗುತ್ತಿದೆ.

ನೀಲಮ್ಮ, ಬೆಳ್ತಂಗಡಿ



“ ನನ್ನ ಗಂಡನ ನಿಧನದ ನಂತರ ಬಂಡವಾಳದ ಕೊರತೆಯಿಂದಾಗಿ ನಮ್ಮ ಸಾಂಪ್ರದಾಯಿಕ ಕುಂಬಾರಿಕೆ ಉದ್ಯಮ ನಡೆಸಲಾಗದೆ ಕಂಗಾಲಾಗಿದ್ದೆ. ಆ ಸಮಯದಲ್ಲಿ ಕುಟುಂಬ ನಿರ್ವಹಣೆಗೆ ದೊಡ್ಡ ಆಸರೆಯಾಗಿ ನಿಂತಿದ್ದು ‘ಅನ್ನಭಾಗ್ಯ’ ಯೋಜನೆ. ಸರ್ಕಾರದ ಉಚಿತ ಅಕ್ಕಿ ಮತ್ತು ದಿನಸಿ ನನ್ನ ಕುಟುಂಬದ ಮೂರೊತ್ತಿನ ಊಟದ ಆತಂಕವನ್ನು ಸಂಪೂರ್ಣವಾಗಿ ದೂರ ಮಾಡಿದೆ.

ಮಹಾದೇವಿ, ಇಂಡಿ



“ ನನ್ನ ಮಗನಿಗೆ ಆಕ್ಸಿಡೆಂಟ್ ಆಗಿ ಮನೇಲೇ ಇದ್ದಾನೆ. ನಾನೊಬ್ಬಳೇ ದುಡಿದು ಮನೆ ನಡೆಸಬೇಕಾಗಿದೆ. ಮೊದಲೆಲ್ಲಾ ಊಟ ಇಲ್ಲದಿದ್ದಾಗ, ಬರಿ ಕಾಲಲ್ಲೇ ನಡೆದುಕೊಂಡು ಹೋಗಿ ಕಾಡಿನ ಹಣ್ಣು ತಿಂದು ಬದುಕ್ತಿದ್ವಿ. ಈಗ ‘ಅನ್ನಭಾಗ್ಯ’ದಿಂದ ಅಕ್ಕಿ ಸಿಗ್ತಿದೆ. ನಮ್ಮಪ್ಪ ಸಿದ್ದರಾಮಯ್ಯ ಪುಣ್ಯಾತ್ಮನಿಂದಾಗಿ ನೆಮ್ಮದಿಯಾಗಿ ಜೀವನ ಮಾಡ್ತಾ ಇದ್ದೀವಿ.

ಜಡೆಮಾದಮ್ಮ, ಚಾಮರಾಜನಗರ

ಬಡತನದ ವಿರುದ್ಧದ ಹೋರಾಟ

ಬಡತನದ ಹಸಿವು ಹೇಗಿರುತ್ತದೆ ಎಂದು ನನಗೆ ಗೊತ್ತು. ಅದಕ್ಕಾಗಿಯೇ ನಾನು ಮುಖ್ಯಮಂತ್ರಿಯಾದ ಮೊದಲ ದಿನವೇ ಅನ್ನಭಾಗ್ಯ ಯೋಜನೆಗೆ ಸಹಿ ಹಾಕಿದ್ದೆ. ರಾಜ್ಯದ ಯಾವುದೇ ವ್ಯಕ್ತಿ ಹಸಿವಿನಿಂದ ಮಲಗಬಾರದು ಎಂಬುದೇ ನನ್ನ ಆಶಯವಾಗಿತ್ತು. ಅಂದು ಆರಂಭವಾದ ಆ ಪವಿತ್ರ ಕಾರ್ಯ ಇಂದು ‘ಗ್ಯಾರಂಟಿ’ಯಾಗಿ ಕೋಟ್ಯಂತರ ಮನೆ ತಲುಪಿದೆ ಎನ್ನುವುದೇ ನನಗೆ ತೃಪ್ತಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು



‘ಹಸಿವು ಮುಕ್ತ ಸಮಾಜ’ ನವ ಕರ್ನಾಟಕದ ಅಡಿಪಾಯ

ಜನರ ಕಷ್ಟಗಳಿಗೆ ಸ್ಪಂದಿಸುವುದು ನಮ್ಮ ಆದ್ಯ ಕರ್ತವ್ಯ. ಹಸಿವು ಮುಕ್ತ ಸಮಾಜದ ನಿರ್ಮಾಣವೇ ನವ ಕರ್ನಾಟಕದ ಅಡಿಪಾಯ. ‘ಅನ್ನಭಾಗ್ಯ’ ಮತ್ತು ‘ಪಂಚ ಗ್ಯಾರಂಟಿ’ ಯೋಜನೆಗಳ ಮೂಲಕ ಕರ್ನಾಟಕವನ್ನು ದೇಶದಲ್ಲೇ ಅತ್ಯಂತ ಪ್ರಗತಿಪರ ಹಾಗೂ ಕಲ್ಯಾಣ ರಾಜ್ಯವನ್ನಾಗಿ ಮಾಡುವುದೇ ನಮ್ಮ ಸರ್ಕಾರದ ಸಂಕಲ್ಪ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು



ಕೊನೆಯ ಪ್ರಜೆಗೂ ಅನ್ನ ಸಿಕ್ಕಿದೆ

ಮುಖ್ಯಮಂತ್ರಿಗಳ ದೂರದರ್ಶಿತ್ವದ ‘ಅನ್ನಭಾಗ್ಯ’ ಯೋಜನೆಯನ್ನು ಅತ್ಯಂತ ಪಾರದರ್ಶಕವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಜವಾಬ್ದಾರಿಯನ್ನು ನಮ್ಮ ಇಲಾಖೆ ಯಶಸ್ವಿಯಾಗಿ ನಿಭಾಯಿಸಿದೆ. ರಾಜ್ಯದ ಕಟ್ಟಕಡೆಯ ವ್ಯಕ್ತಿಗೂ ಆಹಾರ ಭದ್ರತೆ ಸಿಗುವಂತೆ ಮಾಡಲು ನಮ್ಮ ಆಹಾರ ಇಲಾಖೆ ಸದಾ ಬದ್ಧವಾಗಿದೆ.

– ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಕರ್ನಾಟಕ ವಾರ್ತೆ

ಪುರಾತತ್ವ ತಾಣ ಅನಾಥ

ಒಂದನೇ ಪುಟದಿಂದ...

ಮತ್ತೊಂದೆಡೆ, ಆದಾಯ ತರುವಂತಹ ದೇಗುಲಗಳ ನಿರ್ವಹಣೆ ಉತ್ತಮವಾಗಿಯೇ ಇದೆ. ಆಯಾ ಕ್ಷೇತ್ರದ ಸಮಿತಿಗಳು, ಪ್ರಾಧಿಕಾರಗಳ ನೇತೃತ್ವದಲ್ಲಿ ಸಂರಕ್ಷಣಾ ಕಾರ್ಯವೂ ನಡೆಯುತ್ತಿದೆ. ಆದರೆ, ಆದಾಯ ತರದ ಕೋಟೆ ಕೊತ್ತಲಗಳು, ಆದಿಮಾನವ ವಾಸಿಸಿದ್ದ ಸ್ಥಳಗಳು ಅನಾಥವಾಗಿವೆ.

ಪಾಳುಬಿದ್ದ ಇಲಾಖೆ: ಸ್ಮಾರಕಗಳಷ್ಟೇ ಅಲ್ಲದೆ, ಅವುಗಳ ರಕ್ಷಣೆಯ ಜವಾಬ್ದಾರಿ ಹೊತ್ತ ಇಲಾಖೆಗಳೂ ಸರ್ಕಾರಗಳ ನಿರ್ಲಕ್ಷ್ಯದಿಂದ ಪಾಳುಬಿದ್ದಿವೆ. ರಾಜ್ಯದ ಸ್ಮಾರಕಗಳ ನಿರ್ವಹಣೆ, ಸಂರಕ್ಷಿಸುವುದು ಕೇಂದ್ರ ಸರ್ಕಾರದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ರಾಜ್ಯ ಸರ್ಕಾರದ ಪುರಾತತ್ತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗಳ ಜವಾಬ್ದಾರಿ. ಇಲ್ಲೆಲ್ಲ ಸಿಬ್ಬಂದಿ ಕೊರತೆ ತೀವ್ರವಾಗಿದ್ದು, ಕೆಲಸ ಮಾಡುವವರೇ ಇಲ್ಲ. ಇದರೊಂದಿಗೆ ರಾಜ್ಯದಲ್ಲಿ ಈ ಇಲಾಖೆಗೆ ಕಚೇರಿಗಳೇ ಇಲ್ಲದ ಸ್ಥಿತಿಯೂ ಇದೆ.

18 ಜಿಲ್ಲೆಗಳಲ್ಲಷ್ಟೇ ಇಲಾಖೆಗೆ ಕಚೇರಿ ಇದೆ. ಉಳಿದೆಡೆ ಸಿಬ್ಬಂದಿಯೂ ಇಲ್ಲ, ಕಚೇರಿಯೂ ಇಲ್ಲ. ಇನ್ನು ಆ ಜಿಲ್ಲೆಗಳಲ್ಲಿ ಸಂರಕ್ಷಣೆ, ನಿರ್ವಹಣೆ ಹೇಗೆ ಸಾಧ್ಯ ಎಂಬ ತಿಳಿವಳಿಕೆಯೂ ಸರ್ಕಾರಗಳಿಗೆ ಇದ್ದಂತಿಲ್ಲ.

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿ (ಎಎಸ್‌ಐ) ಶೇ 40ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇವೆ. ರಾಜ್ಯದಲ್ಲಿ 917 ಹುದ್ದೆ ಮಂಜೂರಾಗಿದ್ದು, 597 ಹುದ್ದೆಗಳು ಭರ್ತಿಯಾಗಿವೆ. 320 ಹುದ್ದೆಗಳು ಖಾಲಿ. 282 ಸಂರಕ್ಷಿತ ಸ್ಮಾರಕಗಳನ್ನು ನಿರ್ವಹಿಸುವ ಧಾರವಾಡ ವೃತ್ತದಲ್ಲಿ 355 ಹುದ್ದೆಗಳ ಪೈಕಿ 252 ಹುದ್ದೆಗಳು ಭರ್ತಿಯಾಗಿವೆ. 103 ಹುದ್ದೆಗಳು ಖಾಲಿಯಿದೆ.

96 ಸ್ಮಾರಕಗಳನ್ನು ನಿರ್ವಹಿಸುವ ಹಂಪಿ ವೃತ್ತದಲ್ಲಿ 139 ಹುದ್ದೆಗಳಿವೆ. 63 ಹುದ್ದೆಗಳು ಭರ್ತಿಯಾಗಿದ್ದು, 76 ಹುದ್ದೆಗಳು ಖಾಲಿ. ಈ ವೃತ್ತ ಸಿಬ್ಬಂದಿಯಿಲ್ಲದೇ ಹೆಚ್ಚು ಸಮಸ್ಯೆ ಎದುರಿಸುತ್ತಿದೆ. ಹಳೇ ವೃತ್ತವಾದ ಬೆಂಗಳೂರು 129 ಸ್ಮಾರಕಗಳನ್ನು ನಿರ್ವಹಿಸುತ್ತಿದೆ. 207 ಸಂರಕ್ಷಿತ ಸ್ಮಾರಕಗಳು ಈ ವ್ಯಾಪ್ತಿಯಲ್ಲಿದೆ. 423 ಹುದ್ದೆಗಳ ಪೈಕಿ 282 ಭರ್ತಿಯಾಗಿದ್ದು, 141 ಖಾಲಿ ಇವೆ.



ಚಿತ್ರದುರ್ಗದ ಕಲ್ಲಿನಕೋಟೆಯ ಬಂದೀಖಾನೆ ಸ್ಮಾರಕದ ಕೂಗಳತೆ ದೂರದಲ್ಲೇ ಮನೆಗಳನ್ನು ನಿರ್ಮಿಸಲಾಗಿದೆ.

ರಾಜ್ಯ ಸರ್ಕಾರಕ್ಕೆ ಸೇರಿದ ಪುರಾತತ್ತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಲ್ಲಿ ಮಂಜೂರಾದ 219 ಹುದ್ದೆಗಳ ಪೈಕಿ 70 ಮಾತ್ರ ಭರ್ತಿಯಾಗಿವೆ. 149 ಹುದ್ದೆಗಳು ಖಾಲಿ ಇವೆ.

‘ಸಿಬ್ಬಂದಿ ಕೊರತೆಯು ಉತ್ಖನನ ಮತ್ತು ಅಧ್ಯಯನಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುತ್ತದೆ. ದಾಖಲೀಕರಣವು ನಿಧಾನಗೊಳ್ಳುತ್ತದೆ. ಅನೇಕ ಸಂರಕ್ಷಿತ ಸ್ಮಾರಕಗಳಲ್ಲಿ ಪೂರ್ಣಾವಧಿ ಭದ್ರತಾ ಸಿಬ್ಬಂದಿಯ ಕೊರತೆ ಇದೆ. ಬಹಳ ಸಮಯದಿಂದ ಖಾಲಿ ಬಿದ್ದಿರುವ ಈ ಹುದ್ದೆಗಳಿಗೆ ಗುತ್ತಿಗೆ, ಹೊರಗುತ್ತಿಗೆ ನೌಕರರನ್ನು ನೇಮಿಸಲಾಗಿದೆ’ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧಿಕಾರಿಗಳು ತಿಳಿಸುತ್ತಾರೆ.

ಅನುದಾನವೂ ಕಡಿಮೆ: ಭಾರತೀಯ ಪುರಾತತ್ವ ಸರ್ವೇಕ್ಷಣಾಲಯಕ್ಕೆ ನೀಡುತ್ತಿರುವ ಅನುದಾನವೂ ಕಡಿಮೆಯಾಗುತ್ತಿದೆ. ಕರ್ನಾಟಕದಲ್ಲಿ 2023–24ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯದ ಬೆಂಗಳೂರು ವೃತ್ತಕ್ಕೆ ₹17.34 ಕೋಟಿ, ಹಂಪಿ ವೃತ್ತಕ್ಕೆ ₹12.25 ಕೋಟಿ ಹಾಗೂ ಧಾರವಾಡ ವೃತ್ತಕ್ಕೆ ₹9.57 ಕೋಟಿ ಹಂಚಿಕೆಯಾಗಿತ್ತು. 2024–25ರಲ್ಲಿ ಬೆಂಗಳೂರು ವೃತ್ತಕ್ಕೆ ₹5.05 ಕೋಟಿ, ಹಂಪಿ ವೃತ್ತಕ್ಕೆ ₹3.80 ಕೋಟಿ ಹಾಗೂ ಧಾರವಾಡ ವೃತ್ತಕ್ಕೆ ₹5.42 ಕೋಟಿ ಬಿಡುಗಡೆಯಾಗಿದೆ.

ಫಲ ನೀಡದ ಸ್ಮಾರಕ ದತ್ತು ಯೋಜನೆ: ಸ್ಮಾರಕಗಳ ರಕ್ಷಣೆ, ಅಭಿವೃದ್ಧಿಗಾಗಿ ಜಾರಿಗೆ ತಂದ ಸ್ಮಾರಕ ದತ್ತು ಯೋಜನೆಯೂ ನಿರೀಕ್ಷಿತ ಫಲ ನೀಡಿಲ್ಲ. ಸಂಘ, ಸಂಸ್ಥೆಗಳು, ವ್ಯಕ್ತಿಗಳು, ಕಂಪನಿಗಳು, ಕಾರ್ಖಾನೆಗಳು ಸ್ಮಾರಕಗಳನ್ನು ದತ್ತು ಪಡೆಯಲು ಆಸಕ್ತಿ ತೋರಿಲ್ಲ.

ರಾಜ್ಯದಲ್ಲಿರುವ 844 ಸ್ಮಾರಕಗಳ ಪೈಕಿ 23 ಅನ್ನು ದತ್ತು ಪಡೆಯುವ ಪ್ರಯತ್ನ ನಡೆದರೂ 13 ಒಪ್ಪಂದಗಳಷ್ಟೇ ಏರ್ಪಟ್ಟಿವೆ. ಆ ಪೈಕಿ 5 ಸ್ಮಾರಕಗಳ ಸಂರಕ್ಷಣೆ ಪೂರ್ಣವಾಗಿದೆ. ಆನೆಗುಂದಿಯ ಗಗನ ಮಹಲ್, ನಂಜನಗೂಡು ಸಮೀಪದ ಕಳಲೆಯ ಲಕ್ಷ್ಮೀಕಾಂತ ದೇಗುಲ, ವಿಜಯಪುರದ ತಾಜ್ ಬಾವಡಿ, ಬೆಂಗಳೂರಿನ ವೆಂಕಟಪ್ಪ ಕಲಾ ಗ್ಯಾಲರಿ ಹಾಗೂ ಗದಗ ಜಿಲ್ಲೆಯ ನಾಗಕುಂದ ಬಾವಿ ಈ ಯೋಜನೆಯಿಂದ ಅಭಿವೃದ್ಧಿ ಕಂಡಿವೆ.

ಆದಿಮಾನವನ ಶಿಲಾಸಮಾಧಿಗಳಿಂದ ಬ್ರಿಟಿಷರ ಗೋರಿಗಳವರೆಗೂ ಎಲ್ಲ ಸ್ಮಾರಕಗಳೂ ನಾಡಿನಲ್ಲಿ ಉಳಿಯಬೇಕು. ಇತಿಹಾಸದ ಅರಿವಿದ್ದರೆ ಮಾತ್ರ ಪ್ರಗತಿ ಸಾಧ್ಯ ಎಂಬ ತಿಳಿವಳಿಕೆ ಮೂಡಬೇಕು. ಹುದ್ದೆಗಳನ್ನು ಭರ್ತಿ ಮಾಡಿ, ಅನುದಾನ ಹೆಚ್ಚಿಸಿ, ಕಚೇರಿಗಳನ್ನು ತೆರೆದು ಸ್ಮಾರಕಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು.

ಪೂರಕ ಮಾಹಿತಿ: ಇಮಾಮ್ ಹುಸೇನ್ ಗೂಡುನವರ, ಎಂ.ಜಿ.ಬಾಲಕೃಷ್ಣ, ಹರಿಶಂಕರ್.ಆರ್, ಶಶಿಕಾಂತ ಎಸ್. ಶೆಂಬೆಳ್ಳಿ, ಪಿ.ಎಚ್.ಬಾಲಕೃಷ್ಣ.

ಪುರಾತತ್ತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ	
ಮಂಜೂರಾದ ಹುದ್ದೆ	219
ಭರ್ತಿಯಾಗಿರುವ ಹುದ್ದೆ	70
ಖಾಲಿ ಇರುವ ಹುದ್ದೆ	149
ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ	
ದೇಶದಲ್ಲಿ ಮಂಜೂರಾಗಿರುವ ಹುದ್ದೆ	8,755
ಭರ್ತಿಯಾದ ಹುದ್ದೆ	4,845
ರಾಜ್ಯಕ್ಕೆ ಮಂಜೂರಾದ ಹುದ್ದೆ	917
ಭರ್ತಿಯಾದ ಹುದ್ದೆ	597
ಖಾಲಿ ಇರುವ ಹುದ್ದೆ	320

ದುಸ್ಥಿತಿಯಲ್ಲಿದ್ದ ಮಡಿಕೇರಿಯ ಕೋಟೆಯೊಳಗಿನ ಅರಮನೆ ಈಗ ಕಂಗೊಳಿಸುತ್ತಿದೆ

ರಾಜ್ಯದ ಕೆಲ ಪ್ರಮುಖ ಶಿಥಿಲ ಸ್ಮಾರಕಗಳು

- ಯಾದಗಿರಿ ಬೆಟ್ಟದ ಮೇಲಿನ ಐತಿಹಾಸಿಕ ಕೋಟೆ, ವಾಗಣಗೇರಿ ವನದುರ್ಗಕ್ಕೆ ತೆರಳಲು ಸೂಕ್ತ ಸೌಲಭ್ಯಗಳಿಲ್ಲ. ಮೆಟ್ಟಿಲು ಕಲ್ಲುಗಳು ಉದುರಿ ಬಿದ್ದಿವೆ.
- ಚಿತ್ರದುರ್ಗ ನಗರದ ಐತಿಹಾಸಿಕ ಕಲ್ಲಿನಕೋಟೆಗೆ ತೆರಳಲು ಸುಸಜ್ಜಿತವಾದ ರಸ್ತೆ, ವಾಹನ ನಿಲುಗಡೆ ವ್ಯವಸ್ಥೆ ಇಲ್ಲ. ಏಳುಸುತ್ತಿನ ಕೋಟೆ ಕೋಟೆಯ 2 ಸುತ್ತುಗಳು ನಗರದೊಳಗೆ ಸೇರಿ ನಾಶವಾಗಿದ್ದು, ಕೋಟೆ ಬಾಗಿಲುಗಳಷ್ಟೇ ಉಳಿದಿವೆ.
- ಕ್ರಿ.ಶ. 1224ರಲ್ಲಿ ನಿರ್ಮಾಣವಾದ ದಾವಣಗೆರೆ ಜಿಲ್ಲೆಯ ಹರಿಹರ ನಗರದ ಹರಿಹರೇಶ್ವರ ದೇವಸ್ಥಾನದ ರಕ್ಷಣೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾಲಯ ಹಾಗೂ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗಳು ವಿಫಲವಾಗಿವೆ.
- ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದ, ಶಿವಾಜಿ ಮಹಾರಾಜರ ತಂದೆ ಷಹಾಜಿ ರಾಜೆ ಭೋನ್ಸ್ಲೆ ಅವರ ಸಮಾಧಿ ಸ್ಥಳವು ಕೇಂದ್ರ ಪುರಾತತ್ವ ಇಲಾಖೆಗೆ ಸೇರಿದ್ದು, ಇದುವರೆಗೂ ಅಭಿವೃದ್ಧಿ ಕಂಡಿಲ್ಲ.

ಅತಿಕ್ರಮಣ: ಕೈಚೆಲ್ಲಿದ ಜಿಲ್ಲಾಡಳಿತ

ರಾಯಚೂರು ಜಿಲ್ಲೆಯಲ್ಲಿ ರಾಜ್ಯ ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಸೇರಿದ ಸ್ಮಾರಕ ಪ್ರದೇಶದ ಬಹುಭಾಗ ಅತಿಕ್ರಮಣಕ್ಕೆ ಒಳಗಾಗಿದೆ. ರಾಜಕಾರಣಿಗಳು ಹಾಗೂ ಅವರ ಬೆಂಬಲಿಗರು ಅತಿಕ್ರಮಣ ಮಾಡಿರುವುದರಿಂದ ಜಿಲ್ಲಾಡಳಿತ ಕೈಚೆಲ್ಲಿ ಕುಳಿತಿದೆ ಎಂಬ ಆರೋಪವಿದೆ.

ರಾಯಚೂರು ನಗರದಲ್ಲಿರುವ ಕೋಟೆ ಗೋಡೆ ಹಾಗೂ ಬುರುಜುಗಳು ಮಾತ್ರ ಇಲಾಖೆಯ ಹೆಸರಿನಲ್ಲಿವೆ. ಮಲಿಯಾಬಾದ್ ಕೋಟೆಯ 1,200 ಎಕರೆ ಪ್ರದೇಶ ಅತಿಕ್ರಮಣಗೊಂಡಿದೆ. ಮುದಗಲ್ ಕೋಟೆಯ ಬಹುಭಾಗ ಅತಿಕ್ರಮಣಕ್ಕೆ ಒಳಗಾಗಿದೆ. ಜಲದುರ್ಗ ಕೋಟೆ ಪಾಳು ಬಿದ್ದಿದೆ. ಸಣ್ಣಪುಟ್ಟ ಕೋಟೆಗಳ ಹೆಸರೂ ಉಳಿದಿಲ್ಲ.

ವ್ಯಾಪ್ತಿ ದೊಡ್ಡದು, ಆದ್ಯತೆಯಲ್ಲಿ ಸಂರಕ್ಷಣೆ

ಹಂಪಿ ಭಾಗದಲ್ಲಿ ರಾಜ್ಯ ಪುರಾತತ್ವ ಇಲಾಖೆಯ ಸುಪರ್ದಿಯಲ್ಲಿ 1,200ರಷ್ಟು ಸಂರಕ್ಷಿತ ಪ್ರದೇಶಗಳಿವೆ. ಜನಪ್ರಿಯ ಹಾಗೂ ಶಿಥಿಲಗೊಂಡವುಗಳ ಸಂರಕ್ಷಣೆಗೆ ಮೊದಲ ಆದ್ಯತೆ ನೀಡುತ್ತಿದ್ದೇವೆ. ಜಂಬುನಾಥ ದೇವಸ್ಥಾನದ ಬಳಿಯಲ್ಲೇ ದಶಕದ ಹಿಂದೆ ನಡೆಯುತ್ತಿದ್ದ ಗಣಿಗಾರಿಕೆಯು ಜನರ ಹೋರಾಟದಿಂದ ಸ್ಥಗಿತಗೊಂಡಿತ್ತು. ಮುಜರಾಯಿ ಇಲಾಖೆಯಿಂದ ಪೂಜೆ ಹಾಗೂ ಪುರಾತತ್ವ ಇಲಾಖೆಯಿಂದ ಸಂರಕ್ಷಣೆ ನಡೆಯುವ ಕಡೆ ಸೂಕ್ಷ್ಮವಾಗಿ ಪರಿಸ್ಥಿತಿ ನಿರ್ವಹಿಸಬೇಕು.

ಆರ್.ಶೇಜೇಶ್ವರ, ಉಪನಿರ್ದೇಶಕ, ರಾಜ್ಯ ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆ

ಸ್ಮಾರಕಗಳ ರಕ್ಷಣೆ ಹೇಗೆ?

ಮಹತ್ವದ ಸ್ಮಾರಕಗಳು ಇನ್ನೂ ಕೇಂದ್ರ, ರಾಜ್ಯ ಪುರಾತತ್ವ ಇಲಾಖೆಗಳ ಸುಪರ್ದಿಗೆ ಬಾರದಿದ್ದರೆ ತಕ್ಷಣ ಸುಪರ್ದಿಗೆ ತರಬೇಕು. ಮೂಲ ರಚನೆಗೆ ಧಕ್ಕೆಯಾಗದಂತೆ ದುರಸ್ತಿ ಮಾಡಬೇಕು. ಕಳೆ, ಸಸ್ಯಗಳು ಬೆಳೆಯದಂತೆ ನಿರ್ವಹಿಸಬೇಕು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬಾರದಂತೆ ನಿಯಂತ್ರಿಸಬೇಕು. ಆಧುನಿಕ ತಂತ್ರಜ್ಞಾನ ಬಳಸಿ ಹಾನಿ ಗುರುತಿಸಬೇಕು. ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಪ್ರೊ.ಎಸ್.ವೈ.ಸೋಮಶೇಖರ್, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಹಂಪಿ ಕನ್ನಡ ವಿಶ್ವವಿದ್ಯಾಲಯ

ಮೂಲಸೌಕರ್ಯ ಒದಗಿಸಬೇಕು

ಪ್ರಾಚೀನ ಸ್ಮಾರಕಗಳ ರಕ್ಷಣೆಗಿಂತ ಮೊದಲು ಅದರ ಸುತ್ತಲು ವಾಸಿಸುತ್ತಿರುವ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಪ್ರವಾಸಿಗರಿಗೆ ಮೂಲ ಸೌಕರ್ಯ ಒದಗಿಸಬೇಕು. ಉಡುಪಿ ಜಿಲ್ಲೆಯ ಅವಲಕ್ಕಿಪಾರೆ, ಬುದ್ಧನ ಜೆಡ್ಡು, ಗಾವಳಿಯಲ್ಲಿರುವ ಆದಿಮ ಕಲೆ ಇರುವ ಸ್ಥಳಗಳ ಹೆಚ್ಚಿನ ಅಧ್ಯಯನ ನಡೆಸಬೇಕು.

ಪ್ರೊ. ಟಿ. ಮುರುಗೇಶಿ, ಮೂಲ್ಕಿ ಸುಂದರ್‌ರಾಮ್ ಶೆಟ್ಟಿ ಕಾಲೇಜಿನ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ

ತೀವ್ರ ನಿರಾಸೆ

ಕಲಬುರಗಿ ಜಿಲ್ಲೆಯ ಪ್ರವಾಸಿ ತಾಣಗಳನ್ನು ನೋಡಿದರೆ ತೀವ್ರ ನಿರಾಸೆಯಾಗುತ್ತದೆ. ನಾಲ್ಕೈದು ವರ್ಷಗಳ ಹಿಂದೆ ವಿದೇಶಿ ಪ್ರವಾಸಿಗರು ಕಲಬುರಗಿ ತಾಣಗಳ ವೀಕ್ಷಣೆ ಸಲುವಾಗಿ ಇಲ್ಲಿಯೇ ವಾಸ್ತವ್ಯ ಮಾಡುತ್ತಿದ್ದರು. ಈಗ ಬೀದರ್, ವಿಜಯಪುರಕ್ಕೆ ತೆರಳುತ್ತಿದ್ದಾರೆ. ರಾಜ್ಯ ಪುರಾತತ್ವ ಇಲಾಖೆಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡಿ ದುರಸ್ತಿ ಮಾಡಿ ಸಂರಕ್ಷಿಸಬೇಕು.

ಪ್ರೊ. ಶಂಭುಲಿಂಗ ವಾಣಿ, ಇತಿಹಾಸತಜ್ಞ

ಅನುದಾನಕ್ಕೆ ಕೊರತೆ ಇಲ್ಲ

ಪುರಾತತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ದೊರಕುತ್ತಿರುವ ಅನುದಾನಕ್ಕೆ ಕೊರತೆ ಇಲ್ಲ. ಪ್ರತಿ ವರ್ಷ ₹ 15 ಕೋಟಿ ನಿರ್ವಹಣೆಗೆ ಬರುತ್ತಿದೆ. ಇತರೆ ಅನುದಾನಗಳನ್ನೂ ಸೇರಿಸಿಕೊಂಡು ಆದ್ಯತೆಯ ಮೇರೆಗೆ ಸ್ಮಾರಕಗಳನ್ನು ನಿರ್ವಹಿಸಲಾಗುತ್ತಿದೆ.

ಎ.ದೇವರಾಜು, ಪುರಾತತ್ವ ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ

ಸಂಡೂರಿನ ಕುಮಾರಸ್ವಾಮಿ ದೇವಾಲಯ

ಸಂಡೂರಿನಲ್ಲಿ ನಿಲ್ಲದ ಗಣಿಗಾರಿಕೆ ಆತಂಕ

1,200 ವರ್ಷಗಳಷ್ಟು ಹಳೆಯ, ಸಂಡೂರಿನ ಕುಮಾರಸ್ವಾಮಿ-ಪಾರ್ವತಿ ದೇಗುಲಗಳ ಸುತ್ತ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆದಿದ್ದು, ಅವುಗಳ ಪಾರಂಪರಿಕತೆಗೆ ಧಕ್ಕೆ ತರುವ ಆತಂಕ ನಿಂತಿಲ್ಲ. ದೇವಾಲಯದ ಉಳಿವಿಗಾಗಿ ಜನ ಸಂಗ್ರಾಮ ಪರಿಷತ್ ಸೇರಿ ಹಲವು ಸಂಘಟನೆಗಳು ಪ್ರತಿಭಟನೆ, ಪಾದಯಾತ್ರೆ ಮತ್ತು ನ್ಯಾಯಾಂಗ ಹೋರಾಟವನ್ನೂ ನಡೆಸಿವೆ.

ಹೈಕೋರ್ಟ್ 2023ರಲ್ಲಿ ನೀಡಿದ್ದ ಸೂಚನೆ ಮೇರೆಗೆ ಭಾರತೀಯ ಪುರಾತತ್ವ ಇಲಾಖೆಯು, ‘ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ’ಗೆ ದೇವಾಲಯದ ಸ್ಥಿತಿಗತಿಯ ಅಧ್ಯಯನ ನಡೆಸುವಂತೆ ಕೋರಿತ್ತು. ಅನುದಾನವನ್ನೂ ನೀಡಲಾಗಿತ್ತು. ಆದರೆ, ಅಧ್ಯಯನ ವರದಿ ಇನ್ನೂ ಲಭ್ಯವಿಲ್ಲ. ದೇಗುಲದ ಸದ್ಯದ ಸ್ಥಿರತೆ ಸ್ಥಿತಿಗತಿ ಏನು ಎಂಬುದು ಗೊತ್ತಾಗಿಲ್ಲ.

ಈ ಮಧ್ಯೆ, ‘ಅಧಿಕಾರಕ್ಕೆ ಬಂದರೆ ಸಂಡೂರಿನ ಕುಮಾರಸ್ವಾಮಿ ದೇವಾಲಯದ ಸುತ್ತಲ 2-3 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸುವೆ’ ಎಂದು ಹೇಳಿದ್ದ ಎಚ್.ಡಿ ಕುಮಾರಸ್ವಾಮಿ ಅವರು ಕೇಂದ್ರದ ಉಕ್ಕು ಸಚಿವರಾಗುತ್ತಲೇ, ದೇವದಾರಿ ಗಣಿ ಕಾರ್ಯಾಚರಣೆಗೆ ಸಹಿ ಹಾಕಿದರು. ಕುಮಾರಸ್ವಾಮಿ ದೇಗುಲವು ದೇವದಾರಿ ಗಣಿಯ 3 ಕಿ.ಮೀ ಪರಿಧಿಯಲ್ಲೇ ಇದೆ.

ಇದೇ ಗಣಿಗೆ ಅಂಟಿಕೊಂಡಿರುವ ನವಲೋಟಿ ಆದಿಮಾನವನ ಗುಹೆಯೂ ನಾಶವಾಗುವ ಭೀತಿಯಲ್ಲಿದೆ. ಅಲ್ಲಿ ಸಿಕ್ಕಿರುವ ಪರಿಕರಗಳನ್ನು ಪ್ರಾಗೈತಿಹಾಸ ತಜ್ಞ ಪ್ರೊ. ರವಿ ಕೋರಿಶೆಟ್ಟರ್ ಅವರು ಕಾರ್ಬನ್ ಡೇಟಿಂಗ್‌ಗೆ ಕಳುಹಿಸಿದ್ದಾರೆ. ಅದು 30 ಸಾವಿರ ವರ್ಷಗಳ ಹಿಂದೆ ಆದಿಮಾನವನ ನೆಲೆಯಾಗಿತ್ತು ಎಂದು ಅಂದಾಜಿಸಲಾಗುತ್ತಿದೆ. ಕಾರ್ಬನ್ ಡೇಟಿಂಗ್ ವರದಿಯೂ ಬರಬೇಕಿದೆ.

ಇನ್ನೊಂದೆಡೆ, ಸಂಡೂರಿನ ‘ನವಿಲುಸ್ವಾಮಿ’, ‘ಹರಿಶಂಕರ’, ‘ಗಂಡಿ ನರಸಿಂಹಸ್ವಾಮಿ’ ದೇಗುಲಗಳೂ ಸೇರಿ 13 ದೇಗುಲಗಳನ್ನು ರಾಜ್ಯ ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಗೆ ಒಳಪಡಿಸುವ ಪ್ರಸ್ತಾವಗಳೂ ದೂಳು ಹಿಡಿದಿವೆ.

ಇನ್ನು, ತೆಕ್ಕಲಕೋಟೆಯ ಗೌಡರ ಮೂಲೆ ಪ್ರದೇಶದಲ್ಲಿ ಇತ್ತೀಚೆಗೆ ಆದಿಮಾನವರ ನೆಲೆಗಳು ಪತ್ತೆಯಾಗಿದ್ದು, ಅವುಗಳ ರಕ್ಷಣೆಯೂ ಆಗಬೇಕಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ ಪತ್ರಿಕೆಯು ನೀಡಿದ ವಿದ್ಯಾರ್ಥಿ ವೇತನದಿಂದ ಪುಸ್ತಕಗಳು ಹಾಗೂ ಸಮವಸ್ತ್ರ ಖರೀದಿಸಿದೆ. ಉನ್ನತ ಶಿಕ್ಷಣದ ಶುಲ್ಕ ಪಾವತಿಸಲು ಈ ಹಣವನ್ನು ಬಳಸಿಕೊಂಡಿದ್ದೇನೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಸಾಮಗ್ರಿಗಳನ್ನು ಖರೀದಿಸಿದೆ. ಪತ್ರಿಕೆ ನೀಡಿದ ನೆರವಿಗೆ ಚಿರಋಣಿಯಾಗಿದ್ದೇನೆ.

ನಿರೀಕ್ಷಾ ಎಲ್.ಸಿ., ಅರಕೆರೆ

ಶುಲ್ಕ ಪಾವತಿಸಿದೆ

‘ಪ್ರಜಾವಾಣಿ’ ಪತ್ರಿಕೆಯು ನೀಡಿದ ಆರ್ಥಿಕ ನೆರವಿನಿಂದ ಕಾಲೇಜಿನ ಶುಲ್ಕ ಪಾವತಿಸಿದೆ. ಈಗ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಓದುತ್ತಿದ್ದು, ಜೆಇಇ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಪುಸ್ತಕಗಳ ಖರೀದಿಗೆ ಪತ್ರಿಕೆ ನೀಡಿದ ನೆರವು ಸಹಕಾರಿಯಾಯಿತು. ಬಸ್ ಪಾಸ್ ಪಡೆಯಲು ಸಹಾಯವಾಯಿತು.

ಪವನ್ ಆರ್., ಅಂದ್ರಹಳ್ಳಿ

ಸೋನಿಯಾ, ರಾಹುಲ್ ಗಾಂಧಿ ಭೇಟಿಯಾದ ಸತೀಶನ್

ನವದೆಹಲಿ ಪ್ರವಾಸದಲ್ಲಿರುವ ಕೇರಳ ಮುಖ್ಯಮಂತ್ರಿ ವಿ.ಡಿ. ಸತೀಶನ್ ಅವರು ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು

ಕೇರಳಂ ಮುಖ್ಯಮಂತ್ರಿ ಆದ ಬಳಿಕ ಮೊದಲ ಭೇಟಿ

ನವದೆಹಲಿ/ತಿರುವನಂತಪುರ (ಪಿಟಿಐ): ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಶನಿವಾರ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ರಾಜಧಾನಿಗೆ ಮೊದಲ ಭೇಟಿಯಾಗಿದೆ.

ಸತೀಶನ್ ಅವರು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್, ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಜೊತೆಗೂ ಮಾತುಕತೆ ನಡೆಸಿದರು.

ಶುಕ್ರವಾರ ರಾತ್ರಿಯೇ ನವದೆಹಲಿಗೆ ಬಂದಿದ್ದ ಸತೀಶನ್ ಅವರು ಕಾಂಗ್ರೆಸ್‌ನ ಹೈಕಮಾಂಡ್ ನಾಯಕರನ್ನು ಭೇಟಿಯಾಗಿ, ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಧನ್ಯವಾದ ಸಲ್ಲಿಸಿದರು.

ಭೇಟಿಯ ವೇಳೆ ಪಕ್ಷದ ಸಂಘಟನಾ ಚಟುವಟಿಕೆ ಹಾಗೂ ಹೊಸತಾಗಿ ರಚನೆಯಾಗಿರುವ ಯುಡಿಎಫ್ ಸರ್ಕಾರದ ಕಾರ್ಯವೈಖರಿಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ಮೂಲಗಳು ತಿಳಿಸಿವೆ. ಈ ವೇಳೆ ನೂತನ ಅಧ್ಯಕ್ಷ ಸ್ಥಾನದ ಆಯ್ಕೆಯ ಕುರಿತಂತೆ ಕೇರಳಂ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು (ಕೆಪಿಸಿಸಿ) ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗುವ ನಿರೀಕ್ಷೆಯಿದೆ. ಆದರೆ, ಇದುವರೆಗೂ ಅದು ಖಚಿತವಾಗಿಲ್ಲ.

ನವದೆಹಲಿಗೆ ಬಂದಿಳಿದ ನೂತನ ಮುಖ್ಯಮಂತ್ರಿ ಅವರನ್ನು ವಿಮಾನ ನಿಲ್ದಾಣದಲ್ಲಿಯೇ ನೂರಾರು ಕಾರ್ಯ ಕರ್ತರು ಆತ್ಮೀಯವಾಗಿ ಅಭಿನಂದಿಸಿದರು. ಕೇರಳಂ ವಿಧಾನಸಭೆಗೆ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ ಒಕ್ಕೂಟವು ಗೆಲುವು ಸಾಧಿಸಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 24-5-2001

- **ಮೋಸದಾಟ: ಐಸಿಸಿ ವರದಿ ಬಹಿರಂಗ, ಸಿಬಿಐಗೆ ಬೆಂಬಲ**

ಲಂಡನ್, ಮೇ 23– ಕ್ರಿಕೆಟ್ ಮೋಸದಾಟದ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಐಸಿಸಿ)ಯ ಭ್ರಷ್ಟಾಚಾರ ವಿರೋಧಿ ದಳವು ನಡೆಸಿದ ವಿಚಾರಣಾ ವರದಿಯನ್ನು ಅಧಿಕೃತವಾಗಿ ಇಂದು ಬಹಿರಂಗಗೊಳಿಸಲಾಗಿದೆ.

ಐಸಿಸಿ ಭ್ರಷ್ಟಾಚಾರ ವಿರೋಧಿ ದಳದ ಮುಖ್ಯಸ್ಥ ಸರ್ ಪೌಲ್ ಕಾಂಡೋನ್ ಸಲ್ಲಿಸಿದ 36 ಪುಟಗಳ ವರದಿಯಲ್ಲಿ ಭಾರತದಲ್ಲಿ ಮೋಸದಾಟದ ಕುರಿತು ಸಿಬಿಐ ನಡೆಸಿದ ವಿಚಾರಣೆಗೆ ಸಂಪೂರ್ಣ ಬೆಂಬಲ ಸೂಚಿಸಲಾಗಿದೆ.

75 ವರ್ಷಗಳ ಹಿಂದೆ

ಗುರುವಾರ, 24-5-1951

- **ರಾಜ್ಯಾಂಗ ತಿದ್ದುಪಡಿಯು ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ತರದು**

ನವದೆಹಲಿ, ಮೇ 23– ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ರಾಜ್ಯಾಂಗದ 19 (2) ವಿಧಿಗೆ ಸೂಚಿಸಲಾಗಿರುವ ತಿದ್ದುಪಡಿ ಕುರಿತು, ಅಖಿಲ ಭಾರತ ವೃತ್ತ ಪತ್ರಿಕಾ ಸಮ್ಮೇಳನಾಧ್ಯಕ್ಷ ಶ್ರೀ ಲಾಲಾದೇಶಬಂಧುಗುಪ್ತರಿಗೂ ಪ್ರಧಾನಿ ನೆಹರೂರವರಿಗೂ ನಡೆದ ಪತ್ರ ವ್ಯವಹಾರವಿಂದು ಪ್ರಕಟವಾಗಿದೆ.

ಈ ತಿದ್ದುಪಡಿಯಿಂದ ಪತ್ರಿಕೆಗೇನೂ ಧಕ್ಕೆ ತಟ್ಟದೆಂದು ಭರವಸೆಯೀಯಲು ಸರ್ಕಾರವು ತನ್ನ ಶಕ್ತ್ಯಾನುಸಾರ ಸಿದ್ಧವಿದೆ ಎಂದು ಪ್ರಧಾನಿ ನೆಹರೂ ಅವರು ಈ ಪತ್ರ ವ್ಯವಹಾರದಲ್ಲಿ ತಿಳಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಎರಡು ವಾರಗಳ ಹಿಂದೆ ಇದೇ ಕ್ರೀಡಾಂಗಣದಲ್ಲಿ ನಡೆದ ಬೆಂಗಳೂರು ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದ 24 ವರ್ಷದ ಪೀಟರ್ ಅವರು ತನ್ನ ತಪ್ಪುಗಳನ್ನು ತಿದ್ದಿಕೊಂಡು ವೃತ್ತಿಜೀವನದ ಮೊದಲ ಎಟಿಪಿ ಪ್ರಶಸ್ತಿಗೆ ಮುತ್ತಿಕ್ಕಿದರು. ಈ ಗೆಲುವಿನೊಂದಿಗೆ ಅವರು ಎಟಿಪಿ ಕ್ರಮಾಂಕದಲ್ಲಿ 335ನೇ ಸ್ಥಾನದಿಂದ 268ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಭಾರತದ ಅದಿಲ್ ಕಲ್ಯಾಣಪುರ–ಮುಕುಂದ ಶಶಿಕುಮಾರ್ ಜೋಡಿಯು ಡಬಲ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಫೈನಲ್ ಹಣಾಹಣಿಯಲ್ಲಿ ಈ ಜೋಡಿಯು (3) 6-7, 6-4, 10-3ರಿಂದ ಪೀಟರ್ ಬರ್ ಬಿಯ್ರುಕೋವ್– ಗ್ರಿಗೊರಿ ಲೊಮಾಕಿನ್ (ಕಜಾಕಸ್ತಾನ) ಅವರನ್ನು ಸೋಲಿಸಿತು. ಭಾರತದ ಆಟಗಾರರು 50 ಎಟಿಪಿ ಪಾಯಿಂಟ್ಸ್ ಮತ್ತು ₹2.85 ಲಕ್ಷ ಬಹುಮಾನ ಗೆದ್ದರು.

ಬೆಂಗಳೂರು ರೇಸ್

ಝುಕ್ಕಾರೊ ಗೆಲ್ಲುವ ನಿರೀಕ್ಷೆ

ಎಚ್‌ಎಚ್ ಜಯಚಾಮರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಝುಕ್ಕಾರೊ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟಡ್ ಪೋಕರ್ 4, ಐಬಾದತ್ 2, ಶಟ್ಟರ್ ಫ್ಲೈ 6
2ನೇ ರೇಸ್: ಅಟ್ಮಾನ್ 2, ಎವರಿನ್ 4, ನಿಂಬೂಸ್ ಸ್ಪೀಡ್ 3
3ನೇ ರೇಸ್: ದಿ ಮೇಕ್ ಶ್ಯೂರ್ 6, ಝೆಫರಿನ್ 1, ಅನ್ನಾಬೆಲ್ 5
4ನೇ ರೇಸ್: ಗ್ಲೋರಿಯಸ್ ಸ್ಟ್ರೈಡ್ಸ್ 2, ಸ್ಟಾರ್ ಆಫ್ ಇಂಡಿಯಾ 1, ಸ್ಟ್ಯಾಲಿನ್‌ಗ್ರಾಡ್ 6
5ನೇ ರೇಸ್: ಫೋರ್ಟಿಸ್ 6, ವಿನ್ ವಿನ್ 5, ಸ್ಮಾಲ್ ಡ್ರೀಮ್ಸ್ 4
6ನೇ ರೇಸ್: ಝುಕ್ಕಾರೊ 4, ಸೀಝ್ ಕರೇಜಿಯಸ್ 5, ಗಲಹಡ್ 7
7ನೇ ರೇಸ್: ಮಿಸ್ಟಿಕೋಸ್ 2, ಸದರ್ನ್ ಫೋರ್ಸ್ 1, ಎಬೊಟ್ಸೆ 4
8ನೇ ರೇಸ್: ಸೆಂಟ್ ಆಫ್ ರೈನ್ 7, ಜೇಡ್ ಮೌಂಟೇನ್ 2, ಇಂಪಿರಡರ್ 5

ಉತ್ತಮ ಬೆಟ್: ಗ್ಲೋರಿಯಸ್ ಸ್ಟ್ರೈಡ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಹವಾಮಾನ ಶೃಂಗಸಭೆ: ವಾಕಥಾನ್

ಪ್ರಜಾವಾಣಿ ವಾರ್ತೆ

ವೈಟ್‌ಫೀಲ್ಡ್‌ನ ಸಿಎಂಆರ್‌ಐಟಿ ಕ್ಯಾಂಪಸ್‌ನಲ್ಲಿ ನಡೆದ ವಾಕಥಾನ್‌ನಲ್ಲಿ ನಾಗರಿಕರು ಭಾಗಿಯಾಗಿದ್ದರು

ಬೆಂಗಳೂರು: ವಿಮೂವ್ ಪ್ರತಿಷ್ಠಾನವು ಜೂನ್ 4, 5ರಂದು ಆಯೋಜಿಸಲಿರುವ 'ಬೆಂಗಳೂರು ಹವಾಮಾನ ಶೃಂಗಸಭೆ–ಪರ್ಯಾಯ:26'ರ ಭಾಗವಾಗಿ ಶನಿವಾರ 'ಉತ್ತಮ ಬೆಂಗಳೂರಿಗಾಗಿ ಎಐ' ವಾಕಥಾನ್‌ಗೆ ಚಾಲನೆ ನೀಡಿತು.

ವಿಶ್ವ ಪರಿಸರ ದಿನದ ಅಂಗವಾಗಿ ಬೆಂಗಳೂರಿಗೆಂದೇ ಪ್ರತ್ಯೇಕ ಹವಾಮಾನ ಶೃಂಗಸಭೆ ನಡೆಸಲು ವಿಮೂವ್ ಪ್ರತಿಷ್ಠಾನವು ಮುಂದಾಗಿದೆ. ಇದಕ್ಕೆ ಪೂರ್ವ ತಯಾರಿಯಾಗಿ ನಗರದ ವೈಟ್‌ಫೀಲ್ಡ್‌ನ ಸಿಎಂಆರ್‌ಐಟಿ ಕ್ಯಾಂಪಸ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಎಐ ವಾಕಥಾನ್‌ಗೆ ಚಾಲನೆ ನೀಡಲಾಯಿತು.

ಇದರ ಭಾಗವಾಗಿ ಜನರು ತಾವು ನಡೆದ ಹಾದಿಯಲ್ಲಿ ಎದುರಾಗುವ ರಸ್ತೆ ಗುಂಡಿ, ಸಂಚಾರ ದಟ್ಟಣೆ, ಕಸ ವಿಲೇವಾರಿಯಲ್ಲಿನ ಸಮಸ್ಯೆಗಳ ಚಿತ್ರಗಳನ್ನು ಸೆರೆಹಿಡಿದು, ವಾಕಥಾನ್‌ನ ಪೋರ್ಟಲ್‌ಗೆ ಅಪ್‌ಲೋಡ್ ಮಾಡಿದರು.

'ನಡೆದಾಡಲು ಯೋಗ್ಯ ಬೆಂಗಳೂರು', 'ಕಸಮುಕ್ತ ಬೆಂಗಳೂರು', 'ಹವಾಮಾನ ಮಿತ್ರ– ಎಐ ಆಧರಿತ ಹವಾಮಾನ ಕಾರ್ಯಯೋಜನೆ' ಪರಿಕಲ್ಪನೆಗಳ ಅಡಿಯಲ್ಲಿ ವಾಕಥಾನ್ ಮತ್ತು ಹ್ಯಾಕಥಾನ್ ನಡೆಯಲಿದೆ.

ಇದರ ಭಾಗವಾಗಿ ನಗರದ ನಿವಾಸಿಗಳು ಕಳುಹಿಸುವ ಈ ಚಿತ್ರ ಮತ್ತು ಆ ಸಮಸ್ಯೆ ಬಗೆಹರಿಸಲು ಅವರು ಸೂಚಿಸುವ ಸಲಹೆಗಳನ್ನು ಜೂನ್ 30–31ರಂದು ಪರಿಶೀಲಿಸಲಾಗುತ್ತದೆ. ಈ ಎಲ್ಲ ದತ್ತಾಂಶಗಳನ್ನು ಇರಿಸಿಕೊಂಡು, ಕೃತಕ ಬುದ್ಧಿಮತ್ತೆ ಮೂಲಕ ಪರಿಹಾರಗಳನ್ನು ಸೃಜಿಸಲಾಗುತ್ತದೆ. ಜೂನ್ 4 ಮತ್ತು 5ರಂದು ನಡೆಯಲಿರುವ ಶೃಂಗಸಭೆಯಲ್ಲಿ ಈ ಪರಿಹಾರ ಕ್ರಮಗಳನ್ನು ಪರಾಮರ್ಶಿಸಲಾಗುತ್ತದೆ ಎಂದು ವಿಮೂವ್ ಪ್ರತಿಷ್ಠಾನವು ತಿಳಿಸಿದೆ.

ಹವಾಮಾನ ವೈಪರೀತ್ಯ ನಿಯಂತ್ರಣಕ್ಕಾಗಿ ದುಡಿಯುತ್ತಿರುವ ಸಂಘ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ. 10,000 ಜನರು ಶೃಂಗಸಭೆಯಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- ವಾಕಥಾನ್ ಪೋರ್ಟಲ್ ರಚನೆ
- ಸಮಸ್ಯೆಗಳನ್ನು ಪೋರ್ಟಲ್‌ಗೆ ಅಪಲೋಡ್ ಮಾಡಿ
- ಜೂನ್ 4, 5ರಂದು ನಡೆಯಲಿರುವ ಶೃಂಗಸಭೆ

ರಾಜ್ಯ ಸರ್ಕಾರದ ಪರಿಸರ ಇಲಾಖೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಸಿಎಂಆರ್‌ಐಟಿ ಜತೆಗೆ ಹಲವು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈ ಶೃಂಗಸಭೆ ಆಯೋಜಿಸಲಾಗಿದೆ.

ಜಾಲತಾಣಕ್ಕೆ ಚಾಲನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಬೆಂಗಳೂರು ಹವಾಮಾನ ಶೃಂಗಸಭೆ–ಪರ್ಯಾಯ:26'ರ ಜಾಲತಾಣಕ್ಕೆ ಈಚೆಗೆ ಚಾಲನೆ ನೀಡಿದ್ದರು. https://bengaluruclimatesummit.com/ ಜಾಲತಾಣದಲ್ಲಿ ಶೃಂಗಸಭೆ ಕುರಿತು ಹೆಚ್ಚಿನ ಮಾಹಿತಿ ಲಭ್ಯವಿದೆ.

ಯಲಹಂಕ: ವಿಶ್ವ ಜೇನು ದಿನಾಚರಣೆಯಲ್ಲಿ ಕುಲಪತಿ ಎಸ್‌.ವಿ.ಸುರೇಶ

'ಜೇನುಕೃಷಿ ಆದಾಯದ ಮೂಲವಾಗಲಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಜೇನು ಸಾಕಾಣಿಕೆ ಕೇವಲ ಉಪಕಸುಬಾಗಿ ಉಳಿಯದೆ ಉದ್ದಿಮೆಯನ್ನಾಗಿ ಪರಿವರ್ತಿಸಿಕೊಳ್ಳಬೇಕು. ರೈತರ ಪ್ರಮುಖ ಆದಾಯದ ಮೂಲವಾಗಬೇಕು ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಅಭಿಪ್ರಾಯಪಟ್ಟರು.

ಸುಸಂಘಟಿತ ಜೇನುನೊಣಗಳು ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ ಹಾಗೂ ಕೃಷಿ ವಿಶ್ವವಿದ್ಯಾಲಯದ ಜೇನುಕೃಷಿ ವಿಭಾಗದ ಸಹಯೋಗದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿದ್ದ ವಿಶ್ವ ಜೇನು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿಯನ್ನೇ ನಂಬಿಕೊಂಡು ಬದುಕು ಸಾಗಿಸುವುದು ಇಂದಿನ ಪರಿಸ್ಥಿತಿಯಲ್ಲಿ ಸವಾಲಿನ ವಿಷಯ. ಹವಾಮಾನ ಬದಲಾವಣೆ ಮತ್ತು ಮಾರುಕಟ್ಟೆ ಅಸ್ಥಿರತೆಯಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಆದ್ದರಿಂದ ಸಮಗ್ರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಜೇನು ಸಾಕಾಣಿಕೆ ಸೇರಿದಂತೆ ಉಪಕಸುಬುಗಳನ್ನು ಆದಾಯದ ಮೂಲಗಳಾಗಿ ರೂಪಿಸಿಕೊಳ್ಳಬೇಕು ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷ ಎ.ಎಚ್. ರಾಜಾಸಾಬ್ ಮಾತನಾಡಿ, 'ಜೇನುನೊಣಗಳ ಸಂತತಿ ನಾಶವಾದರೆ ಮಾನವಕುಲವೇ ಅಪಾಯಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಬಹುದು' ಎಂದರು.

'ಜೇನಿನ ಕಲಬೆರಕೆಯ ಬಗ್ಗೆ ಎಚ್ಚರಿಕೆ ವಹಿಸುವ ಅಗತ್ಯವಿದೆ. ಜೇನುಹುಳು ಮತ್ತು ಸಸ್ಯಗಳಿಗೆ ಅವಿನಾಭಾವ ಸಂಬಂಧವಿದ್ದು, ಪರಾಗಸ್ಪರ್ಶ ಕ್ರಿಯೆಯಲ್ಲಿ ಜೇನುನೊಣಗಳ ಪಾತ್ರ ಮಹತ್ವದ್ದಾಗಿದೆ. ಜೇನುಸಾಕಾಣಿಕೆ ಮೂಲಕ ರೈತರು ಆಹಾರ ಉತ್ಪಾದನೆಯನ್ನು ದ್ವಿಗುಣಗೊಳಿಸಬಹುದು' ಎಂದು ಹೇಳಿದರು.

ಅಖಿಲ ಭಾರತ ಸುಸಂಘಟಿತ ಜೇನುನೊಣಗಳು ಮತ್ತು ಪರಾಗಸ್ಪರ್ಶಿಗಳ ಪ್ರಾಯೋಜನೆಯ ರಾಷ್ಟ್ರೀಯ ಸಂಯೋಜಕ ಸಚಿನ್.ಎಸ್ ಸುರೋಶೆ ಮಾತನಾಡಿ, 'ಕರ್ನಾಟಕದಲ್ಲಿ ಜೇನುಕೃಷಿಗೆ ಉತ್ತಮ ಅವಕಾಶಗಳಿವೆ. ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ ವಿವಿಧ ಜಾತಿಯ ಜೇನು ಪ್ರಭೇದಗಳನ್ನು ಸಾಕಲು ಅನುಕೂಲಕರ ವಾತಾವರಣವಿದ್ದು, ಅಗತ್ಯ ತಾಂತ್ರಿಕತೆ ಅಳವಡಿಸಿಕೊಂಡು ಸಿಹಿಕ್ರಾಂತಿ ಸಾಧಿಸಬಹುದು' ಎಂದು ತಿಳಿಸಿದರು.

ಜೇನು ಕೃಷಿಕರಾದ ವಿ.ಆರ್‌.ಚಂದ್ರಶೇಖರ, ಸುರೇಶ ಕರ್ಕೇರ ಹಾಗೂ ಜಯಶಂಕರ ಅವರನ್ನು ಸನ್ಮಾನಿಸಲಾಯಿತು. ಎಸ್‌.ವಿ.ಸುರೇಶ, ಎ.ಎಚ್‌.ರಾಜಾಸಾಬ್, ಸಚಿನ್‌.ಎಸ್ ಸುರೋಶೆ ಭಾಗವಹಿಸಿದ್ದರು.

ಜೇನು ಕೃಷಿಕರಾದ ಜಯಶಂಕರ, ಸುರೇಶ ಕರ್ಕೇರ, ವಿ.ಆರ್. ಚಂದ್ರಶೇಖರ ಅವರನ್ನು ಸನ್ಮಾನಿಸಲಾಯಿತು.

ಕೃಷಿ ಮಹಾವಿದ್ಯಾಲಯದ ಡೀನ್(ಕೃಷಿ) ಎನ್.ಬಿ. ಪ್ರಕಾಶ್, ಜೇನುಕೃಷಿ ವಿಭಾಗದ ಪ್ರಾಧ್ಯಾಪಕರಾದ ಬಿ. ಶಿವಣ್ಣ, ಕೆ.ಎಸ್. ಜಗದೀಶ್, ಜೇನು ಕೃಷಿ ವಿಜ್ಞಾನಿ ಕೆ.ಟಿ. ವಿಜಯಕುಮಾರ್ ಉಪಸ್ಥಿತರಿದ್ದರು.

ಜೇನುಕೃಷಿ ಪರಿಕರಗಳ ಮಳಿಗೆಗಳು, ವಿವಿಧ ಬಗೆಯ ಜೇನುತುಪ್ಪ ಮಾದರಿಗಳು ಹಾಗೂ ಜೇನು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ಮಳಿಗೆಗಳಿದ್ದವು.

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಸಿ.ಎಸ್ ಷಡಾಕ್ಷರಿ, ಎಲ್‌.ಭೈರಪ್ಪ, ಟಿ.ಎಚ್‌.ಎಂ ಕುಮಾರ್ ಚಾಲನೆ ನೀಡಿದರು. ವಿ.ವಿ ಶಿವರುದ್ರಯ್ಯ, ಸುರೇಶ ಸಿ. ಶೆಡಶ್ಯಾಳ, ಗಿರಿಗೌಡ ಎಚ್‌. ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

'ಒಪಿಎಸ್ ಜಾರಿ ಮಾಡದಿದ್ದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ಪಿಂಚಣಿ ಪದ್ಧತಿಯನ್ನು (ಎನ್‌ಪಿಎಸ್) ರದ್ದು ಮಾಡಿ ಹಳೇ ಪಿಂಚಣಿ ಪದ್ಧತಿಯನ್ನು (ಒಪಿಎಸ್) ಜಾರಿ ಮಾಡದೇ ಇದ್ದರೆ ಹೋರಾಟ ಅನಿವಾರ್ಯ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದರು.

ಸರ್ಕಾರಿ ನೌಕರರ ಸಂಘದ ರಾಜ್ಯಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

'ಬೇರೆ ಬೇರೆ ದೇಶಗಳ ನಡುವೆ ಯುದ್ಧ ನಡೆದ ಬಳಿಕ ಷೇರು ಮಾರುಕಟ್ಟೆ ಕುಸಿದು ಹೋಗಿದ್ದು, ಅದರ ಕೆಟ್ಟ ಪರಿಣಾಮ ನೌಕರರ ಮೇಲಾಗಿದೆ. ಹೋರಾಟದ ಹಾದಿ ಹಿಡಿಯದೇ ಒಪಿಎಸ್ ಜಾರಿಯಾಗುತ್ತದಾ ಎಂಬುದು ಗೊತ್ತಿಲ್ಲ. ಹೋರಾಟ ಬೇಡ, ನಿಮ್ಮ ಜೊತೆಗೆ ನಾವಿದ್ದೇವೆ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಈ ಭರವಸೆ ಈಡೇರಿಸಲು ಒತ್ತಡ ಹಾಕಲಾಗುವುದು. ಆಗದೇ ಇದ್ದರೆ ಹೋರಾಟವೇ ದಾರಿ' ಎಂದು ಹೇಳಿದರು.

'6ನೇ ಮತ್ತು 7ನೇ ಹಣಕಾಸು ಆಯೋಗದ ವರದಿಯನ್ನು ಸರ್ಕಾರ ಜಾರಿ ಮಾಡಿದೆ. 7ನೇ ಹಣಕಾಸು ಆಯೋಗದ ಎರಡನೇ ವರದಿಯನ್ನು ಕೂಡ ಅನುಷ್ಠಾನಗೊಳಿಸಬೇಕು. ಆರೋಗ್ಯ ಯೋಜನೆಯಲ್ಲಿ ಗೊಂದಲಗಳಿವೆ. ಅವುಗಳನ್ನು ಮುಖ್ಯಮಂತ್ರಿ ಸರಿಪಡಿಸಲಿದ್ದಾರೆ. ಚಿಕಿತ್ಸೆಗೆ ದರವನ್ನು ದುಪ್ಪಟ್ಟು ಮಾಡಿ ನಿಗದಿ ಮಾಡಿರುವುದರಿಂದ ಹೆಚ್ಚಿನ ಆಸ್ಪತ್ರೆಗಳು ಈ ಯೋಜನೆಯಡಿ ಒಳಗೊಳ್ಳಲಿವೆ' ಎಂದರು.

'ಸಂಘಟನೆಗಳಲ್ಲಿ ಗೊಂದಲ ಇರಬಹುದು. ಆದರೆ, ನೌಕರರ ವಿಚಾರ ಬಂದರೆ ಎಲ್ಲರನ್ನು ಕರೆದುಕೊಂಡು ಒಟ್ಟಿಗೆ ಸಾಗಲಿದ್ದೇವೆ' ಎಂದು ಹೇಳಿದರು.

'ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನೌಕರರ ನಡುವೆ ಬಾಂಧವ್ಯ ಬೆಸೆದಿದೆ. 175 ವಿಭಾಗದಲ್ಲಿ ಸ್ಪರ್ಧೆಗಳು ನಡೆಯುತ್ತಿವೆ. 13 ಸಾವಿರ ನೌಕರರು ಭಾಗವಹಿಸಿದ್ದಾರೆ' ಎಂದು ಮಾಹಿತಿ ನೀಡಿದರು.

'ಸಮಾಜ ವಿಜ್ಞಾನ ಅಧ್ಯಯನದ ಸ್ವರೂಪ ಬದಲಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಿಜಿಟಲ್ ಯುಗದ ಹೊಸ ಸವಾಲುಗಳಿಗೆ ಮುಖಾಮುಖಿಯಾಗಿ ಸಮಾಜ ವಿಜ್ಞಾನ ಅಧ್ಯಯನ ಮತ್ತು ಸಂಶೋಧನೆಗೆ ಸೂಕ್ತ ಕಾಯಕಲ್ಪ ಒದಗಿಸುವ ಅಗತ್ಯವಿದೆ' ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದರು.

ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗವು ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಉನ್ನತ ಶಿಕ್ಷಣ ಹಂತದಲ್ಲಿ ಮಾನವಿಕ ವಿಜ್ಞಾನ ವಿಷಯಗಳ ಪಠ್ಯಕ್ರಮವನ್ನು ಆಮೂಲಾಗ್ರವಾಗಿ ಪರಿಷ್ಕರಿಸಿ, ತಂತ್ರಜ್ಞಾನದ ಕಲಿಕೆ ಜೊತೆಗೆ ಉದ್ಯೋಗ ಲಭ್ಯತೆಯ ಆಯಾಮ ನೀಡಬೇಕು. ಸಮಾಜಶಾಸ್ತ್ರ ಕಲಿಕೆ ಮತ್ತು ಬೋಧನೆಯ ಸಾಂಪ್ರದಾಯಿಕ ವಿಧಾನಗಳಿಗೆ ತಂತ್ರಜ್ಞಾನ ಕೌಶಲಗಳ ಮೂಲಕ ಸಾಣೆ ಹಿಡಿದು ಹೊಸ ಬದಲಾವಣೆಗೆ ತೆರೆದುಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ನಗರದಲ್ಲಿ ಇಂದು

ಸ್ಯಾಂಕಿ ಕೆರೆ ಉಳಿಸಿ: ಆಯೋಜನೆ: ವೈಸ್ ಆಫ್ ಸದಾಶಿವನಗರ, ಸ್ಥಳ: ಸ್ಯಾಂಕಿ ಟ್ಯಾಂಕಿ ಕೆರೆ, ಮುಖ್ಯಗೇಟ್, ಬಾಷ್ಯಂ ವೃತ್ತ, ಸದಾಶಿವನಗರ, ಬೆಳಿಗ್ಗೆ 7.30

'ಚಂದನವನ ಅಂದು, ಇಂದು, ಮುಂದು' ವಿಚಾರಸಂಕಿರಣ: ಉದ್ಘಾಟನೆ: ರಮೇಶ್ ಅರವಿಂದ್, ಅತಿಥಿ: ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ಜಯಮಾಲ, 'ಕನ್ನಡ ಚಲನಚಿತ್ರ ಸೃಷ್ಟಿ ಸ್ವರೂಪದ ರೂಪಕಗಳು' ವಿಚಾರಗೋಷ್ಠಿ: ಪಿ. ಶೇಷಾದ್ರಿ, 'ಚಲನಚಿತ್ರ ಮಂದಿರಗಳ ಸ್ಥಿತ್ಯಂತರದ–ವರ್ತಮಾನದ ಸವಾಲುಗಳು' ವಿಚಾರಗೋಷ್ಠಿ: ಕೆ.ವಿ. ಚಂದ್ರಶೇಖರ, 'ಚಲನಚಿತ್ರ ಹಾಗೂ ಎಐ ತಂತ್ರಜ್ಞಾನದ ಸಾಧಕ–ಬಾಧಕಗಳು' ವಿಚಾರಗೋಷ್ಠಿ: ಎ.ಎಚ್. ಸಾಗರ್, ಅಧ್ಯಕ್ಷತೆ: ಎಚ್.ಆರ್. ಭಾರ್ಗವ, ಆಯೋಜನೆ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ, ಚಾಮರಾಜಪೇಟೆ, ಬೆಳಿಗ್ಗೆ 9.30

ಘಟ ವಿದ್ವಾನ್ ಕೆ.ಎನ್. ಕೃಷ್ಣಮೂರ್ತಿ ಅವರ ಜನ್ಮಶತಮಾನೋತ್ಸವ: ಸಂಗೀತ ಕಛೇರಿ: ಗಾಯನ: ಶೀತಲ್ ಎನ್., ಪಿಟೀಲು: ಚಂದ್ರಲಾ ಎಸ್. ಕಟ್ಟೆ, ಮೃದಂಗ: ಕೆ. ವಿಷ್ಣುವರ್ಧನ್, ಘಟ: ಸ್ಕಂದ ಮಂಜುನಾಥ್, ಜನ್ಮಶತಮಾನೋತ್ಸವ ಪುರಸ್ಕಾರ ಸ್ವೀಕರಿಸುವವರು: ಟಿ.ಆರ್. ರಾಜಮಣಿ, ಉಪಸ್ಥಿತಿ: ಎಲ್.ಎಸ್. ಶ್ಯಾಮಸುಂದರ ಶರ್ಮಾ, ಆನೂರ್ ಅನಂತಕೃಷ್ಣ ಶರ್ಮಾ, ಆಯೋಜನೆ: ವಿದ್ವಾನ್ ಶ್ರೀ ಕೆ.ಎನ್.ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9.30ರಿಂದ

ಪ್ರಮಾಣ ಪತ್ರ ವಿತರಣೆ, ಮೂರು ಕಿರುಚಿತ್ರ ಬಿಡುಗಡೆ, 'ನಟನೆಯ ಹಾದಿಯ ಸವಾಲುಗಳು' ಉಪನ್ಯಾಸ: ಮಂಡ್ಯ ರಮೇಶ್, ಆಯೋಜನೆ ಮತ್ತು ಸ್ಥಳ: ಟೆಂಟ್ ಸಿನಿಮಾ, ಲಿರಿಕ್ಸ್, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 10

ಅವಳ ಹೆಜ್ಜೆ ಕಿರುಚಿತ್ರೋತ್ಸವ–2026: ಅತಿಥಿಗಳು: ನೀತು ಶೆಟ್ಟಿ, ಗ್ರೀಷ್ಮಾ ಶ್ರೀಧರ್, ಸಂಗೀತಾ ನಂಜುಂಡಸ್ವಾಮಿ, ಸಂಜೋತಾ ಭಂಡಾರಿ, ಮಾಳವಿಕಾ ಗುಬ್ಬಿವಾಣಿ, ಶಾಂತಲಾ ದಾಮ್ಲೆ, ಆಯೋಜನೆ: ಗುಬ್ಬಿವಾಣಿ ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಪೂರ್ವಿ ಎಸ್. ಕಶ್ಯಪ್, ಉಪಸ್ಥಿತಿ: ಪಿ. ಪ್ರವೀಣ್ ಕುಮಾರ್, ದೀಪಾ ಶ್ರೀಧರ್, ಎಸ್. ನಂಜುಂಡರಾವ್, ಸ್ಥಳ: ಮೀನಾಕ್ಷಿ ರಂಗಮಂಚ ಸಭಾಂಗಣ, ದೊಡ್ಡಕಲ್ಲಸಂದ್ರ, ಸಂಜೆ 6

ಪೂರ್ವಿ ಎಸ್. ಕಶ್ಯಪ್

'ಕನಕೋದ್ಯಮಿ' ಕನಕೋದ್ಯಮಿಗಳ ಸಮ್ಮಿಲನ ಹಾಗೂ ಉದ್ಯಮಿಗಳಿಗೆ ಅವಕಾಶಗಳ ಅರಿವು ಕಾರ್ಯಕ್ರಮ: ಸಾನ್ನಿಧ್ಯ: ಯೋಗೇಶ್ವರಾನಂದ ಸ್ವಾಮೀಜಿ, ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಎಚ್.ಎಂ. ರೇವಣ್ಣ, ಉಪಸ್ಥಿತಿ: ಬಂಡೆಪ್ಪ ಕಾಶಂಪೂರ್, ಅಧ್ಯಕ್ಷತೆ: ಸನೀಲ್ ಜಯರಾಜ್, ಅತಿಥಿಗಳು: ಎಂ.ಬಿ. ನಾರಾಯಣಸ್ವಾಮಿ, ಎಂ.ಆರ್. ಹುಲಿನಾಯ್ಕರ್, ಎಂ. ಈರಣ್ಣ, ರುದ್ರಣ್ಣ ಗುಳಗುಳಿ, ಟಿ.ಪಿ. ಬೆಳಗಾವಿ, ಬಿ.ಜಿ. ವಿನಯ್‌ಕುಮಾರ್, ಆರ್. ಶಿವಕುಮಾರ್, ಲೀಲಾ, 'ಕೌಶಲಾಭಿವೃದ್ಧಿ ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರದ ಉತ್ತೇಜನಗಳು' ಉಪನ್ಯಾಸ: ಸಿದ್ಧಲಿಂಗಪ್ಪ ಪೂಜಾರಿ, 'ಉದ್ಯಮಶೀಲತಾ ಅಭಿವೃದ್ಧಿ' ಉಪನ್ಯಾಸ: ಗ್ಯಾನಪ್ಪ ಯು. ಹುಡೇದ್, ಆಯೋಜನೆ: ಹಾಲುಮತ ಉದ್ಯಮಿಗಳ ಸಂಘ, ಸ್ಥಳ: ಕನಕದಾಸ ಸಮುದಾಯ ಭವನ, ಸರ್.ಎಂ. ವಿಶ್ವೇಶ್ವರಯ್ಯ ಬಡಾವಣೆ, ಜ್ಞಾನಗಂಗ ನಗರ, ಬೆಳಿಗ್ಗೆ 10

ಬೆಂಗಳೂರು ಸಾಹಿತ್ಯೋತ್ಸವದ ಅಂಗವಾಗಿ 'ಡೆಡ್ ರೈಟ್' ಅಪರಾಧ ಸಾಹಿತ್ಯ ಉತ್ಸವ: ಬೆಳಿಗ್ಗೆ 10.30ಕ್ಕೆ 'ರಾಗಂ, ತನಮ್, ಪಲ್ಲವಿ–ಲಲ್ಲಿ ಆನ್ ದಿ ಕೇಸ್' ಚರ್ಚೆ: ಕಲ್ಪನಾ ಸ್ವಾಮಿನಾಥನ್, ಜೆರ್ರಿ ಪಿಂಟೊ, 11.15ಕ್ಕೆ 'ಕ್ಯಾಪಿಟಲ್ ಕ್ರೈಂ–ಡೆಡ್ ಇನ್ ದೆಹಲಿ' ಚರ್ಚೆ: ಸಂಯುಕ್ತಾ ಬಿ., ಶೈಲೆಂದ್ರ ಝಾ, ಶುಭ್ರಾ ಕೃಷ್ಣ, ಕಾರ್ತಿಕ್ ವೆಂಕಟೇಶ್, ಮಧ್ಯಾಹ್ನ 12.15ಕ್ಕೆ 'ಖಾಕಿ ಫೈಲ್ಸ್–ಇನ್‌ಸೈಡ್ ಸ್ಟೋರಿಸ್ ಆಫ್ ಪೊಲೀಸ್ ಮಿಷನ್' ಚರ್ಚೆ: ನೀರಜ್ ಕುಮಾರ್, ಶಾರದ ಯು., 1.30ಕ್ಕೆ 'ದಿ ಕೇಸ್ ಆಫ್ ದಿ ಯಂಗ್ ಡೆಟೆಕ್ಟಿವ್' ಚರ್ಚೆ: ಬಿಜಲ್ ವಚ್ಚರಾಜನಿ, ಶ್ವೇತಾ ತನೇಜಾ, ರೀನಾ ಪುರಿ, ಸುದೇಷ್ಣಾ ಎಸ್. ಘೋಷ್, 2.15ಕ್ಕೆ 'ಎಪಿಕ್ ಕ್ರೈಮ್ಸ್–ಹೌ ಮೈಥಾಲಜಿ ಕೀಪ್ಸ್ ದಿ ಸ್ಕೋರ್' ಚರ್ಚೆ: ಮಾಧವಿ ಮಹದೇವನ್, ರೀನಾ ಪುರಿ, ಮಣಿ ರಾವ್, 3.15ಕ್ಕೆ 'ದಿ ದಾವೂದ್ ಸಾಗ ಕಂಟಿನ್ಯೂಸ್' ಚರ್ಚೆ: ಹುಸೈನ್ ಜೈದಿ, ಶೈಲೇಂದ್ರ ಝಾ, 4.15ಕ್ಕೆ 'ದಿ ಐಡಿಲ್ ಥೀಫ್–ಎ ಸ್ಟೋರಿ ಆಫ್ ಆರ್ಟ್, ಕ್ರೈಮ್ ಆ್ಯಂಡ್ ಹೋಮ್‌ಕಮಿಂಗ್' ಚರ್ಚೆ: ಎಸ್. ವಿಜಯ್ ಕುಮಾರ್, 5.15ಕ್ಕೆ 'ಕ್ರೈಮ್ ಕ್ಲ್ಯೂಸ್–ರೈಟಿಂಗ್ ಎ ಬೆಸ್ಟ್‌ಸೆಲ್ಲರ್' ಚರ್ಚೆ: ಅರುಣ್ ರಮಣ್, ಕನಿಷ್ಕಾ ಗುಪ್ತ, ಕಾರ್ತಿಕ್ ವೆಂಕಟೇಶ್, ಎಲ್. ಡಾರ್ಲಿಂಗ್ಟನ್, ದೀಪ್ತಿ ತಲ್ವಾರ್, ಆಯೋಜನೆ: ಬೆಂಗಳೂರು ಸಾಹಿತ್ಯೋತ್ಸವ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು.

ಸಂಗೀತ ಸೌರಭ–2026, ಪ್ರೀತಿ ಚಿಲುಮೆ ಭಾವಗಾನ ಸುಧೆ, 'ಕಲಾ ಸೌರಭ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎಚ್.ಎನ್. ಆರತಿ, ಅತಿಥಿಗಳು: ಎಸ್.ಎ. ಚಿನ್ನೇಗೌಡ, ಶ್ರೀಧರ್ ಸಂಭ್ರಮ್, ಅಧ್ಯಕ್ಷತೆ: ಮನು ಬಳಿಗಾರ್, ಪ್ರಶಸ್ತಿ ಪ್ರದಾನ: ಕೇಸರಿ ಹರವು, ಚಂದ್ರಿಕಾ ಬೊಳ್ಳಾಜೆ, ಆಯೋಜನೆ: ಸೌರಭ ಫೌಂಡೇಷನ್, ಸ್ಥಳ: ಸಿ. ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10

ಸಂಜಯ್ ಗುಬ್ಬಿ ಅವರ 'ಕಾಡಿನ ಗೆಳೆಯರ ಕಾಡುವ ಕಥೆಗಳು', 'ಕಾಡಿನೊಳಗೊಂದು ಮನೆಯ ಮಾಡಿ' ಪುಸ್ತಕಗಳ ಬಿಡುಗಡೆ: ನಾಗೇಶ ಹೆಗಡೆ, ಅತಿಥಿ: ಕಟ್ಟೆ ಗುರುರಾಜ್, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಸುಚಿತ್ರ ಸಭಾಂಗಣ, ಒಂಬತ್ತನೇ ಮುಖ್ಯರಸ್ತೆ, ಎರಡನೇ ಹಂತ, ಬನಶಂಕರಿ, ಬೆಳಿಗ್ಗೆ 10.30

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಅರವಂಟಿಗೆ ಸೇವೆ, ರಥೋತ್ಸವ, ಆಯೋಜನೆ ಮತ್ತು ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ, ಕೋಟೆ, ಬೆಳಿಗ್ಗೆ 10.30

ವಚನ ಅಭಿನಂದನೆ, ವಚನಗಳು ಮತ್ತು ದಾಂಪತ್ಯ ಗೀತೆಗಳ ಗಾಯನ: ಉದ್ಘಾಟನೆ: ಪ್ರಭುದೇವ ಚಿಗಟೇರಿ, ಅಧ್ಯಕ್ಷತೆ: ಮುನಿರಾಜಪ್ಪ, ಅಭಿನಂದನೆ ಸ್ವೀಕರಿಸುವವರು: ರತ್ನ, ರುದ್ರಪ್ಪ ದೇಸಾಯಿ, ಮಹೇಶ ಬೆಲ್ಲದ, ಅತಿಥಿಗಳು: ಎಸ್. ರಾಜು, ಗೌರಿಶಂಕರ್ ಸೋಂಪುರ, ಸತೀಶ್ ಮೂಡಿ, ಪ್ರಾಸ್ತಾವಿಕ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಡಾ.ಎಂ. ಚಿದಾನಂದಮೂರ್ತಿ ಸಭಾಂಗಣ, ಪಾಲಿಕೆ ಸೌಧ, ವಿಜಯನಗರ, ಮಧ್ಯಾಹ್ನ 12

'ಕನ್ನಡ ಡಿಂಡಿಮದ ಸಾಂಸ್ಕೃತಿಕ ಸಂಭ್ರಮ' ಪುಸ್ತಕ ಬಿಡುಗಡೆ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಡಿ. ದೇವರಾಜು, ಅಧ್ಯಕ್ಷತೆ: ಶೈಲೇಶ್ ಪಟ್ಟವರ್ಧನ್, ಅತಿಥಿಗಳು: ಆರ್.ಜೆ. ದೇಸಾಯಿ, ಸುಪ್ರೀತಾ ಕೆ.ಆರ್., ಮೌಲಾಲಿ ಕೆ. ಅಲಗೂರು, ಮಹೇಶ್‌ಗೌಡ, ಆಯೋಜನೆ: ಶ್ರೀಗುರು ಪಂಚಾಕ್ಷರಿ ಪುಟ್ಟರಾಜು ಸಂಗೀತ ಶಾಲೆ, ಗೀತಾ ಸಂಗೀತ ಅಕಾಡೆಮಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ವಿ.ಎಸ್. ಕುಮಾರ್ ಅವರ 'ಬಂದು ಹೋಗುವ ನಡುವೆ' ಪುಸ್ತಕ ಬಿಡುಗಡೆ: ಅತಿಥಿಗಳು: ಬಿ. ಶ್ರೀನಿವಾಸ್ ರೆಡ್ಡಿ, ಶಶಿಧರ್ ಕೋಟೆ, ಎಚ್.ಬಿ. ವಿಜಯ್ ಕುಮಾರ್, ವಿ.ವಿ. ಗೋಪಾಲ್, ಸುಭಾಷ್ ಎಸ್. ನಾಯಕ್ವಾಡ್, ಸೇತೂರಾಂ ಶರ್ಮ, ಡಿ.ಎಸ್. ನಾಗರಾಜ್, ಆಯೋಜನೆ ಮತ್ತು ಸ್ಥಳ: ಗ್ರಂಥದ ಗುಡಿ, ಕುಮಾರಸ್ವಾಮಿ ಬಡಾವಣೆ, ಸಂಜೆ 5.30

'ಕೂಡಿ ಹಾಡೋಣ ಬನ್ನಿ': ವಾಸುಕಿ ವೈಭವ್, ಆಯೋಜನೆ ಮತ್ತು ಸ್ಥಳ: ರಾಗಿಕಣ, ಶ್ರೀರಾಮಕೃಷ್ಣ ಸನ್ಮಾರ್ಗ ಶಿಕ್ಷಣ ಕೇಂದ್ರ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಮಧ್ಯಾಹ್ನ 12

ಬುದ್ಧ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, 22ನೇ ಸಾಂಸ್ಕೃತಿಕ ಸಿಂಚನ: ಉದ್ಘಾಟನೆ: ರಮಾಕಾಂತ್ ಆರ್ಯನ್, ಸಲೀಂ ಅಹ್ಮದ್, ಪ್ರಮೀಳಾ ನೇಸರ್ಗಿ, ಅಧ್ಯಕ್ಷತೆ: ಗಂಡಸಿ ಸದಾನಂದಸ್ವಾಮಿ, ಅತಿಥಿಗಳು: ಎಚ್. ಮಂಜುನಾಥ ಬಾಬು, ಸುಬ್ರಮಣ್ಯ ಎಸ್. ಹಂಡಿಗೆ, ವಿ. ಭರಣಿ ರಾಜು, ಶಿವರಾಜ್ ಮೌರ್ಯ, ಚಂದ್ರಿಕಾ ಬಿ.ವಿ., ಆಯೋಜನೆ: ಇದು ನಿಮ್ಮ ವಾಹಿನಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಉದಯಭಾನು ಸಾಂಸ್ಕೃತಿಕ ಸಂಭ್ರಮ–2026: ವೀಣಾ ವಾದನ: ಆರ್.ಕೆ. ಶಂಕರ್ ಮತ್ತು ತಂಡ, ಉಪಸ್ಥಿತಿ: ಕಿಕ್ಕೇರಿ ಕೃಷ್ಣಮೂರ್ತಿ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸೂರ್ಯನಗರ: ಕ್ರಿಕೆಟ್ ಕ್ರೀಡಾಂಗಣಕ್ಕೆ ಅಡಿಗಲ್ಲು

ದೇಶದ ಎರಡನೇ ಅತಿ ದೊಡ್ಡ ಕ್ರೀಡಾಂಗಣ ಕಾಮಗಾರಿಗೆ ಚಾಲನೆ ನೀಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಇಂಡ್ಲವಾಡಿ ಗ್ರಾಮದಲ್ಲಿ ದೇಶದ ಎರಡನೇ ಅತಿ ದೊಡ್ಡ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಶಂಕುಸ್ಥಾಪನೆ ನೆರವೇರಿಸಿದರು.

ಕರ್ನಾಟಕ ಗೃಹ ಮಂಡಳಿ ಮತ್ತು ವಸತಿ ಇಲಾಖೆ ಜಂಟಿಯಾಗಿ ಸೂರ್ಯನಗರ 4ನೇ ಹಂತದ ಕೆ.ಎಚ್.ಬಿ ಸೂರ್ಯ ಕ್ರೀಡಾ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರು ಭೂಮಿ ಪೂಜೆ ನೆರವೇರಿಸಿ, ಕ್ರಿಕೆಟ್ ಆಡಿದರು.

ಸೂರ್ಯನಗರದಲ್ಲಿ ಒಟ್ಟು 75 ಎಕರೆ ವಿಸ್ತೀರ್ಣದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗುತ್ತಿದೆ. ಹಗಲು– ರಾತ್ರಿ ಪಂದ್ಯಗಳಿಗೆ ಅವಕಾಶ ಇರಲಿದ್ದು, ನಾಲ್ಕು ತಂಡಗಳಿಗೆ ಆಟಗಾರರ ಲಾಕರ್ ರೂಮ್ ಮತ್ತು ಸೌಲಭ್ಯಗಳು, ಒಳಾಂಗಣ ಮತ್ತು ಹೊರಾಂಗಣ ಅಭ್ಯಾಸ ಮೈದಾನ, ನೆಟ್‌ಗಳು, ವಿಐಪಿ ಲಾಂಜ್‌ಗಳು, ಕಾರ್ಪೊರೇಟ್ ಬಾಕ್ಸ್‌ಗಳು, ಪ್ರೇಕ್ಷಕರಿಗೆ ಸೌಲಭ್ಯಗಳು ಇರಲಿವೆ.

ಗೃಹಮಂಡಳಿಯ ಉಳಿಕೆ (ಸ್ಟ್ರೇ) ನಿವೇಶನಗಳನ್ನು ಹರಾಜು ಮಾಡಿ ಸಂಗ್ರಹಿಸಲಾದ ₹ 20 ಸಾವಿರ ಕೋಟಿ ಹಣದಿಂದಲೇ ಈ ಕ್ರೀಡಾಂಗಣವನ್ನು ನಿರ್ಮಿಸಲಾಗುತ್ತಿದೆ. ಇದುವರೆಗೂ ಮನೆ ಮತ್ತು ನಿವೇಶನಗಳನ್ನು ನೀಡುತ್ತಿದ್ದ ಗೃಹ ಮಂಡಳಿ ಹಾಗೂ ವಸತಿ ಇಲಾಖೆಯು ಮೊದಲ ಬಾರಿಗೆ ಕ್ರೀಡಾಂಗಣ ನಿರ್ಮಾಣದಂತಹ ಬೃಹತ್ ಯೋಜನೆಗೆ ಮುಂದಾಗಿರುವುದು ವಿಶೇಷ.

ಈ ವೇಳೆ ಮಾತನಾಡಿದ ಸಿದ್ದರಾಮಯ್ಯ, ‘ರಾಜಧಾನಿ ಬೆಂಗಳೂರಿನಲ್ಲಿ ಒಂದು ಬೃಹತ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದ ಕೊರತೆಯನ್ನು ಸೂರ್ಯ ನಗರದಲ್ಲಿ ನಿರ್ಮಾಣವಾಗಲಿರುವ ಕ್ರಿಕೆಟ್ ಕ್ರೀಡಾಂಗಣ ನೀಗಿಸಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 2025ರಲ್ಲಿ ನಡೆದ ದುರಂತದ ನಂತರ ಮತ್ತೊಂದು ಕ್ರೀಡಾಂಗಣದ ಅಗತ್ಯವನ್ನು ಮನಗಂಡು, ನೂತನ ಕ್ರೀಡಾಂಗಣ ನಿರ್ಮಾಣಕ್ಕೆ ಅನುಮತಿ ನೀಡಲಾಯಿತು. ಮುಂದಿನ ದಿನಗಳಲ್ಲಿ ಕ್ರೀಡಾ ಗ್ರಾಮ ನಿರ್ಮಿಸಲಾಗುವುದು’ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ನೇಗಿಲು ಉಳದೇ ಯಾವ ಭೂಮಿಯೂ ಫಲ ಕೊಡುವುದಿಲ್ಲ. ಹಾಗೆಯೇ ಕಷ್ಟ ಪಡದೇ ಯಾವುದೇ ಸಾಧನೆ ಮಾಡಲಾಗುವುದಿಲ್ಲ. ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸ್ಟೇಡಿಯಂ ನಿರ್ಮಿಸಲಾಗುತ್ತಿದೆ. ದಾರಿ ಇದ್ದ ಕಡೆ ನಡೆಯಬೇಕು, ದಾರಿ ಇಲ್ಲದ ಕಡೆ ದಾರಿ ಮಾಡಿಕೊಂಡು ನಡೆಯಬೇಕು. ಬೆಂಗಳೂರಿನ ಜನರಿಗೆ ಶಾಶ್ವತವಾದ ಸಾಕ್ಷಿಗುಡ್ಡೆಯನ್ನು ಈ ಮೂಲಕ ನಾವು ಬಿಟ್ಟುಹೋಗುತ್ತಿದ್ದೇವೆ’ ಎಂದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್, ಗೃಹ ಸಚಿವ ಜಿ. ಪರಮೇಶ್ವರ, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಗೃಹ ಮಂಡಳಿ ಆಯುಕ್ತ ಕೆ.ಎ. ದಯಾನಂದ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ, ಕರ್ನಾಟಕ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್, ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ, ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ್ ಅಬ್ಬಯ್ಯ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಮುಖ್ಯಮಂತ್ರಿಯವರ ‘ನಮ್ಮ ಮನೆ ’ಯೋಜನೆಗೆ ಚಾಲನೆ
- ಸೂರ್ಯ ಶೈನ್ ಮತ್ತು ಸೂರ್ಯ ಡಿವೈನ್ ವಸತಿ ಸಮುಚ್ಚಯ ಕಾಮಗಾರಿಗೆ ಶಂಕುಸ್ಥಾಪನೆ

ಅಂಕಿ ಅಂಶಗಳು

75 ಎಕರೆ
ಕ್ರೀಡಾಂಗಣಕ್ಕೆ ಬಳಸುವ ಜಮೀನು

₹943.46 ಕೋಟಿ
ಕ್ರೀಡಾಂಗಣ ನಿರ್ಮಾಣ ವೆಚ್ಚ

80 ಸಾವಿರ ಆಸನ ಸಾಮರ್ಥ್ಯ

ಸಿ.ಎಂ. ಬ್ಯಾಟಿಂಗ್‌... ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಕ್ರಿಕೆಟ್ ಆಟ ಆಡಿದರು. ಕೆ.ಎಂ. ಶಿವಲಿಂಗೇಗೌಡ, ಜಮೀರ್ ಅಹ್ಮದ್ ಖಾನ್, ಶಿವಣ್ಣ, ಎಚ್‌.ಎಂ.ರೇವಣ್ಣ, ಜಿ. ಪರಮೇಶ್ವರ ಇದ್ದಾರೆ

2 ಹಂತ: ಕ್ರೀಡಾ ಹಾಗೂ ಪೂರಕ ಮೂಲಸೌಕರ್ಯ

- ಒಳಾಂಗಣ ಕ್ರೀಡಾ ಸಂಕೀರ್ಣ (11 ಕ್ರೀಡೆ): ಬ್ಯಾಡ್ಮಿಂಟನ್, ಬಾಸ್ಕೆಟ್‌ಬಾಲ್, ವಾಲಿಬಾಲ್, ಹ್ಯಾಂಡ್‌ಬಾಲ್, ಟೇಬಲ್ ಟೆನ್ನಿಸ್, ಫೆನ್ಸಿಂಗ್, ವೇಟ್‌ಲಿಫ್ಟಿಂಗ್, ಕಬಡ್ಡಿ, ಕೊಕ್ಕೊ, ಸ್ಕ್ವ್ಯಾಷ್, ಜುಡೋ, ಕುಸ್ತಿ
- ಹೊರಾಂಗಣ ಕ್ರೀಡಾ ಸೌಲಭ್ಯ (8 ಕ್ರೀಡೆ): ಅಥ್ಲೆಟಿಕ್ ಟ್ರ್ಯಾಕ್, ಟೆನ್ನಿಸ್, ಬ್ಯಾಸ್ಕೆಟ್ ಬಾಲ್, ವಾಲಿಬಾಲ್, ಹ್ಯಾಂಡ್‌ಬಾಲ್, ಪಾಡೆಲ್, ಪಿಕಲ್ ಬಾಲ್ ಸೇರಿ ವಿವಿಧ ಕ್ರೀಡಾ ಕೋರ್ಟ್‌ಗಳು
- **ಜಲಕ್ರೀಡಾ ಸಂಕೀರ್ಣ :** ಒಲಿಂಪಿಕ್ ಮಾದರಿಯ ಈಜುಕೊಳ, ಡೈವಿಂಗ್ ಪೂಲ್, ಅಭ್ಯಾಸ ಪೂಲ್
- ಬಹುಮಹಡಿ ವಾಹನ ನಿಲುಗಡೆ ವ್ಯವಸ್ಥೆ (500 ವಾಹನಗಳು)
- ವಾಣಿಜ್ಯ, ಚಿಲ್ಲರೆ ವ್ಯಾಪಾರ ಸಂಕೀರ್ಣ, ಕ್ರೀಡಾ ಅಂಗಡಿ ಮತ್ತು ಉಪಾಹಾರ ಗೃಹ
- ಆಟಗಾರರು, ಕೋಚ್‌ಗಳು ಮತ್ತು ಸಿಬ್ಬಂದಿಗಾಗಿ ವಸತಿ ಸೌಲಭ್ಯ
- ರಸ್ತೆ, ಹೆಲಿಪ್ಯಾಡ್, ಸಾರ್ವಜನಿಕ ಪ್ಲಾಜಾ, ಹಸಿರು ಪ್ರದೇಶ ಹಾಗೂ ಪಾರ್ಕಿಂಗ್ ಸೇರಿ ನಿವೇಶನ ಅಭಿವೃದ್ಧಿ

ಕ್ರೀಡಾಂಗಣ ನಿರ್ಮಾಣವಾದ ಬಳಿಕ ಪ್ರವಾಸೋದ್ಯಮ, ಸುತ್ತಮುತ್ತಲ ಗ್ರಾಮಗಳಲ್ಲಿ ಆರ್ಥಿಕ ಚಟುವಟಿಕೆಗಳು ಬಲಗೊಳ್ಳುವ ಜೊತೆಗೆ ವಿಪುಲ ಉದ್ಯೋಗ ಸೃಷ್ಟಿಯಾಗಲಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸುದ್ದಿ 2 ನಿಮಿಷ

‘ಸರ್ಕಾರದ ಪಾಪದ ಕೆಲಸಕ್ಕೆ ಜನರಿಂದಲೇ ತಕ್ಕ ಉತ್ತರ’

ಮಂಗಳೂರು: ‘ರಾಜ್ಯದಲ್ಲಿ ಸರ್ಕಾರ ಅಸ್ತಿತ್ವದಲ್ಲಿ ಇದೆಯಾ? ಸರ್ಕಾರ ಮಾಡಬಾರದ ಪಾಪದ ಕೆಲಸ ಮಾಡಿದೆ, ಇದಕ್ಕೆ ಪ್ರಾಯಶ್ಚಿತ್ತವೂ ಆಗಲಿದೆ. ಸಂದರ್ಭ ಬಂದಾಗ ಜನ ತಕ್ಕ ಉತ್ತರ ನೀಡುತ್ತಾರೆ’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

55 ಮಂದಿ ಮೇಲಿನ ಪ್ರಕರಣವನ್ನು ರಾಜ್ಯ ಸರ್ಕಾರ ವಾಪಸ್ ಪಡೆದ ಕುರಿತ ಪ್ರಶ್ನೆಗೆ ಶನಿವಾರ ಇಲ್ಲಿ ಉತ್ತರಿಸಿದ ಅವರು, ‘ವ್ಯಕ್ತಿಗಿಂತ ಪಕ್ಷ ದೊಡ್ಡದು. ಪಕ್ಷಕ್ಕಿಂತ ದೇಶ ದೊಡ್ಡದು’ ಎಂದರು.

‘ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ವಿಚಾರ ಗೊತ್ತಿಲ್ಲ. ಕೆಲವು ಸುಧಾರಣೆಗಳನ್ನು ತರಲು ಸಲಹೆ ಕೇಳಿದ್ದರು, 48 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ನೀಡಿದ್ದೇನೆ’ ಎಂದರು.

‘ಕಾಕ್ರೋಚ್ ಜನತಾ ಪಾರ್ಟಿ’ ಕುರಿತ ಪ್ರಶ್ನೆಗೆ, ‘ಇವೆಲ್ಲ ಅಣಬೆಗಳಂತೆ ಹುಟ್ಟುತ್ತವೆ, ಮತ್ತೆ ಮಾಯವಾಗುತ್ತವೆ. ಸುಳ್ಳನ್ನು ಸತ್ಯವಾಗಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದರು.

51 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ಸಮ್ಮತಿ

ಬೆಂಗಳೂರು: ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 51 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಪ್ರಾಥಮಿಕ ಶಾಲೆಗಳಿಗೆ 40 ಸಾವಿರ ಮತ್ತು ಪ್ರೌಢ ಶಾಲೆಗಳಿಗೆ 11 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ತಕ್ಷಣ ಪ್ರಕ್ರಿಯೆ ಆರಂಭಿಸಬೇಕು. ಶಾಲಾ ಆರಂಭದ ವೇಳೆಗೆ ನೇಮಕಾತಿ ಪೂರ್ಣಗೊಳಿಸಬೇಕು. ಖಾಲಿ ಇರುವ ಹುದ್ದೆಗಳಿಗೆ ಕಾಯಂ ಶಿಕ್ಷಕರು ನೇಮಕ ಆಗುವವರೆಗೆ ಅಥವಾ ಪ್ರಸಕ್ತ ಶೈಕ್ಷಣಿಕ ವರ್ಷದ (2026-27) ಅಂತ್ಯದವರೆಗೆ ಮಾತ್ರ ಅನ್ವಯಿಸುತ್ತದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ರಾಜ್ಯದ ಸರ್ಕಾರಿ ಶಾಲೆಗಳು ಜೂನ್ 1ರಿಂದ ಆರಂಭವಾಗುತ್ತಿದ್ದು, ಬೋಧನಾ ಕಾರ್ಯಗಳು ಸುಗಮವಾಗಿ ನಡೆಯಲು, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಖಾತ್ರಿಪಡಿಸಲು ಅತಿಥಿ ಶಿಕ್ಷಕರ ಲಭ್ಯತೆ ಸಹಕಾರಿಯಾಗಲಿದೆ ಎಂದು ಇಲಾಖೆ ಹೇಳಿದೆ.

ಪಿಯು ಕಾಲೇಜುಗಳಿಗೆ 6,086 ‘ಅತಿಥಿ’ಗಳು: ಪದವಿಪೂರ್ವ ಕಾಲೇಜುಗಳಿಗೆ 6,086 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಅನುಮತಿ ನೀಡಿದೆ. ಅತಿಥಿ ಉಪನ್ಯಾಸಕರ ವೇತನ ವೆಚ್ಚವಾಗಿ ₹ 85.20 ಕೋಟಿ ನೀಡಲಾಗಿದೆ.

ಕಾರ್ಮಿಕರ ಕನಿಷ್ಠ ವೇತನ ಶೇ 60 ಏರಿಕೆ

ರಾಜ್ಯದ 81 ಉದ್ಯೋಗ ವಲಯದ ಕಾರ್ಮಿಕರಿಗೆ ಅನುಕೂಲ; ಸಚಿವ ಸಂತೋಷ್ ಲಾಡ್

ಪ್ರಜಾವಾಣಿ ವಾರ್ತೆ


ಸಂತೋಷ್ ಲಾಡ್

ಬೆಂಗಳೂರು: ಕಾರ್ಮಿಕರ ಕನಿಷ್ಠ ವೇತನವನ್ನು ಸರಾಸರಿ ಶೇ 60ರಷ್ಟು ಹೆಚ್ಚಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದರಿಂದ ರಾಜ್ಯದ 81 ಉದ್ಯೋಗ ವಲಯದ ಕಾರ್ಮಿಕರಿಗೆ ಅನುಕೂಲವಾಗಲಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಅನ್ವಯ ವೇತನ ಪರಿಷ್ಕರಣೆ ಮಾಡಲಾಗಿದೆ. ಈ ಅಧಿಸೂಚನೆಯು ರಾಜ್ಯದ ಅಸಂಘಟಿತ ಮತ್ತು ನಿರ್ದಿಷ್ಟ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸಲಿದೆ. ಇದೇ ಮೊದಲ ಬಾರಿಗೆ ಎಲ್ಲ ನಿಗದಿತ ಉದ್ಯೋಗಗಳನ್ನು ಒಂದೇ ಅಧಿಸೂಚನೆಯಡಿ ತರಲಾಗಿದೆ. ಈ ಹಿಂದೆ ಇದ್ದ ನಾಲ್ಕು ವಲಯಗಳ ವರ್ಗೀಕರಣವನ್ನು ಮೂರು ವಲಯಗಳಿಗೆ ಪರಿಷ್ಕರಿಸಲಾಗಿದೆ.

ನೂತನ ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳ ಅಧಿಸೂಚನೆಯು ಖಾಸಗಿ ಶಾಲೆ-ಕಾಲೇಜು ಬೋಧಕೇತರ ಸಿಬ್ಬಂದಿ, ಇ-ಕಾಮರ್ಸ್ ವಲಯದ ನೌಕರರು ಮತ್ತು ಕೊರಿಯರ್ ಸಂಸ್ಥೆಗಳ ನೌಕರರು ಮತ್ತು ಧಾರ್ಮಿಕ ಸಂಸ್ಥೆಗಳಲ್ಲಿ ದುಡಿಯುವ ಸಿಬ್ಬಂದಿಗೆ ಅನುಕೂಲವಾಗಲಿದೆ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

2016-2017ರಲ್ಲಿ ಕನಿಷ್ಠ ವೇತನ ಪರಿಷ್ಕರಣೆ ಆಗಿತ್ತು. ಆನಂತರ ಪರಿಷ್ಕರಣೆ ಆಗಿರಲಿಲ್ಲ. ಅಗತ್ಯ ವಸ್ತುಗಳು ಬೆಲೆ ಏರಿಕೆಯಾಗಿ ಕಾರ್ಮಿಕರು ಜೀವನ ನಡೆಸುವುದು ಕಷ್ಟವಾಗಿತ್ತು. ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಎಂದು ವಿವಿಧ ಸಂಘಟನೆಗಳು, ಕಾರ್ಮಿಕರ ಒಕ್ಕೂಟಗಳು ನಿರಂತರ ಒತ್ತಾಯ ಮಾಡುತ್ತಲೇ ಬಂದಿದ್ದವು. ಆದರೆ, ವೇತನ ಹೆಚ್ಚಿಸಲು ಕೈಗಾರಿಕೆಗಳು, ಎಂಎಸ್‌ಎಂಇ ವಲಯದಿಂದ ವಿರೋಧ ವ್ಯಕ್ತವಾಗಿತ್ತು.

ಪರಿಷ್ಕೃತ ಕನಿಷ್ಠ ವೇತನದ ಕರಡು ಅಧಿಸೂಚನೆಯನ್ನು ಕಳೆದ ವರ್ಷ ಏಪ್ರಿಲ್ 11 ರಂದು ಹೊರಡಿಸಲಾಗಿತ್ತು. ಇದೀಗ ಪರಿಷ್ಕರಣೆ ಜಾರಿಗೆ ಬಂದಿದೆ.

ಮೂರನೇ ರಾಜ್ಯ: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಳದ ಅಧಿಸೂಚನೆಯನ್ನು ಹೊರಡಿಸಿದ ಮೂರನೇ ರಾಜ್ಯ ಕರ್ನಾಟಕವಾಗಿದೆ. ಉತ್ತರ ಪ್ರದೇಶ ಮತ್ತು ಹರಿಯಾಣದಲ್ಲಿ ಈ ಮೊದಲು ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸ್ತುತ ಪರಿಷ್ಕರಣೆಯು 1991ರ ರೆಪ್ಟಕೋಸ್ ಬ್ರೆಟ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿಗದಿಪಡಿಸಿರುವ ಮಾರ್ಗಸೂಚಿಗಳ ಪ್ರಕಾರ ಮಾಡಲಾಗಿದೆ. ಮನೆಗಳಲ್ಲಿ ನಿತ್ಯದ ವೆಚ್ಚದ ಲೆಕ್ಕಾಚಾರದ ಮೇಲೆ ಜಾರಿ ಮಾಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಒಂದು ಕೋಟಿಗೂ ಅಧಿಕ ಕಾರ್ಮಿಕರಿಗೆ ಅನುಕೂಲ
- ಎಲ್ಲ ನಿಗದಿತ ಉದ್ಯೋಗಗಳು ಒಂದೇ ಅಧಿಸೂಚನೆಯ ವ್ಯಾಪ್ತಿಗೆ
- ಇ-ಕಾಮರ್ಸ್, ಧಾರ್ಮಿಕ ಸಂಸ್ಥೆ ನೌಕರರಿಗೂ ಅನುಕೂಲ

ಏರಿಕೆಯ ಲೆಕ್ಕಾಚಾರ

ವಲಯ 3ರ ಕೌಶಲರಹಿತ ಕಾರ್ಮಿಕರಿಗೆ ವೇತನ ₹ 19,300 ಇರಲಿದೆ. ಹೆಚ್ಚು ಕೌಶಲಪೂರ್ಣ ಕಾರ್ಮಿಕರು ಇರುವ ವಲಯ 1ಕ್ಕೆ ₹ 31,100 ರವರೆಗೆ ಏರಿಕೆ ಮಾಡಲಾಗಿದೆ. ಎರಡು ವರ್ಷಗಳ ₹ 1,030 ಮೊತ್ತದ ವೇರಿಯಬಲ್ ಡಿಯರ್‌ನೆಸ್ ಭತ್ಯೆಯನ್ನು (ವಿಡಿಎ) ಕನಿಷ್ಠ ವೇತನದಲ್ಲಿ ಸೇರಿಸಲಾಗಿದೆ.

ಕನಿಷ್ಠ ವೇತನ ಲೆಕ್ಕಾಚಾರ ಮಾಡಲು ರಾಜ್ಯವನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ. ಗ್ರೇಟರ್ ಬೆಂಗಳೂರು ಪ್ರದೇಶವು ವಲಯ 1 ರ ಅಡಿಯಲ್ಲಿ ಬರಲಿದೆ. ವಲಯ 2 ರಲ್ಲಿ ಜಿಲ್ಲಾ ಕೇಂದ್ರಗಳು ಬರಲಿವೆ. ಉಳಿದ ಪ್ರದೇಶಗಳನ್ನು ವಲಯ 3 ರ ಅಡಿಯಲ್ಲಿ ವರ್ಗೀಕರಿಸಲಾಗಿದೆ.

‘ಕಾರ್ಮಿಕರಿಗೆ ಸಹಾಯ ಮಾಡಿದ ಸಮಾಧಾನ’

‘ಇಎಸ್‌ಐ ಮತ್ತು ಇಪಿಎಫ್‌ಗಳಿಗೆ ಪಾವತಿಯಾದ ನಂತರ ಕಾರ್ಮಿಕರಿಗೆ ಕಡಿಮೆ ವೇತನ ಉಳಿಯುತ್ತಿತ್ತು. ಕೆಲವರು ಬಿಪಿಎಲ್ ವ್ಯಾಪ್ತಿಯಿಂದಲೂ ಹೊರಗಿದ್ದರು. ಅಂತಹವರಿಗೆಲ್ಲ ಈ ಕನಿಷ್ಠ ವೇತನ ಹೆಚ್ಚಳದಿಂದ ಸಹಾಯವಾಗಲಿದೆ. ಇದೊಂದು ಕ್ರಾಂತಿಕಾರಕ ಕ್ರಮವಾಗಿದ್ದು, ದೇಶ ಕಟ್ಟುವ ಕಾರ್ಮಿಕರ ಬದುಕಿಗೆ ಸಹಾಯವಾಗುವ ಕ್ರಮವನ್ನು ಜಾರಿ ಮಾಡಿದ ಸಮಾಧಾನ ನಮ್ಮ ಸರ್ಕಾರದ್ದು’ ಎಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ತಿಳಿಸಿದ್ದಾರೆ.

ಸರ್ಕಾರದ ಕ್ರಮದಿಂದ ಸಣ್ಣ, ಮಧ್ಯಮ ಕೈಗಾರಿಕೆಗಳಿಗೆ ಹೊರೆ: ಎಫ್‌ಕೆಸಿಸಿಐ

ಪ್ರಜಾವಾಣಿ ವಾರ್ತೆ

ಉಮಾ ರೆಡ್ಡಿ

ಬೆಂಗಳೂರು: ಕಾರ್ಮಿಕರ ಕನಿಷ್ಠ ವೇತನ ಹೆಚ್ಚಿಸಬೇಕು ಎಂಬುದು ಸಹಜವಾದ ಆಗ್ರಹ ಹೌದಾದರೂ, ಈಗಿನ ಸಂದರ್ಭದಲ್ಲಿ ವೇತನ ಹೆಚ್ಚಳವು ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಹೊರೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದರು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಯುದ್ಧದ ಕಾರಣದಿಂದಾಗಿ ಎಲ್ಲ ವಲಯಗಳಲ್ಲಿ ಬೆಲೆ ಏರಿಕೆ ಆಗುತ್ತಿದೆ. ಸರ್ಕಾರದ ಈಗಿನ ಕ್ರಮವು ಉದ್ಯಮಗಳಿಗೆ ಹೆಚ್ಚುವರಿ ಹೊರೆಯಂತೆ ಆಗುತ್ತದೆ. ಅತಿಸಣ್ಣ ಮತ್ತು ಸಣ್ಣ ಗಾತ್ರದ ಉದ್ದಿಮೆಗಳು ಈ ಹೊರೆಯನ್ನು ತಾಳುವುದು ಕಷ್ಟ’ ಎಂದರು.

ಅತಿಸಣ್ಣ ಮತ್ತು ಸಣ್ಣ ಉದ್ದಿಮೆಗಳು ತರಬೇತಿ ಕೇಂದ್ರ ಇದ್ದಂತೆ. ಕನಿಷ್ಠ ವೇತನ ಹೆಚ್ಚಳದ ಕಾರಣದಿಂದಾಗಿ ಅವು ನೇಮಕಾತಿ ಕಡಿಮೆ ಮಾಡಿದರೆ ನಿರುದ್ಯೋಗ ಪ್ರಮಾಣ ಹೆಚ್ಚಬಹುದು. ಈ ವಲಯದ ಉದ್ದಿಮೆಗಳ ನೆರವಿಗೆ ಸರ್ಕಾರ ಬರಬೇಕು ಎಂದು ಆಗ್ರಹಿಸಿದರು.

ಚಿಟಿಕೆ ಸುದ್ದಿ

ಕಚೇರಿಯಲ್ಲಿ ಪಾರ್ಟಿ: ಎಇಇ ಸೇರಿ ಮೂವರ ಅಮಾನತು

ಲಿಂಗಸುಗೂರು (ರಾಯಚೂರು ಜಿಲ್ಲೆ): ಪಟ್ಟಣದ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಚೇರಿಯಲ್ಲಿ ರಾತ್ರಿ ವೇಳೆ ಮದ್ಯಪಾನ, ಬಾಡೂಟದ ಪಾರ್ಟಿ ಮಾಡಿದ್ದಾರೆ ಎಂಬ ಆರೋಪದಡಿ ಎಇಇ ಸೇರಿ ಮೂವರು ಸಿಬ್ಬಂದಿಯನ್ನು ಅಮಾನತುಗೊಳಿಸಿ ಆರ್‌ಡಿಪಿಆರ್ ಇಲಾಖೆ ಆದೇಶ ಹೊರಡಿಸಿದೆ.

ಮೇ 8ರಂದು ರಾತ್ರಿ ಕಚೇರಿಯ ಮೀಟಿಂಗ್ ಟೇಬಲ್ ಮೇಲೆ ನಿವೃತ್ತ ನೌಕರರೊಂದಿಗೆ ಸೇರಿ ಮದ್ಯಪಾನ ಮಾಡಿ ಬಾಡೂಟ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಸರ್ಕಾರಿ ಕಚೇರಿಯನ್ನು ವೈಯಕ್ತಿಕ ಉದ್ದೇಶಗಳಿಗೆ ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಆರೋಪದಡಿ ಎಇಇ ಹನುಮಂತಪ್ಪ ಅದಾವಾನಿ, ಪ್ರಥಮ ದರ್ಜೆ ಸಹಾಯಕ ರಾಮಣ್ಣ ಪೂಜಾರಿ ಹಾಗೂ ಕಾವಲುಗಾರ ಹನುಮಂತ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಹೆಜ್ಜೇನು ದಾಳಿಗೆ ರೈತ ಸಾವು

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ತಂಬ್ರಹಳ್ಳಿ ಹೊರವಲಯದ ಜಮೀನಿನಲ್ಲಿ ಹೆಜ್ಜೇನು ದಾಳಿಗೆ ರೈತ ತಳವಾರ ಹನುಮಂತಪ್ಪ (70) ಮೃತಪಟ್ಟಿದ್ದಾರೆ.

ತಳವಾರ ಹನುಮಂತಪ್ಪ

‘ಮೇ 19ರಂದು ಜಮೀನಿನಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾಗ ಹೆಜ್ಜೇನುಗಳು ದಾಳಿ ಮಾಡಿದ್ದವು. ಅವರಿಗೆ ಕೊಪ್ಪಳ, ಧಾರವಾಡದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಅವರು ಶುಕ್ರವಾರ ರಾತ್ರಿ ಮೃತಪಟ್ಟರು’ ಎಂದು ಕುಟುಂಬದವರು ತಿಳಿಸಿದ್ದಾರೆ.

ಅಪಘಾತ: 5 ಸಾವು

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ಲಾಡ್ಲಾಪುರ–ಹಲಕರ್ಟಿ ಮಧ್ಯೆ ಶನಿವಾರ ಬೆಳಗಿನ ಜಾವ ಟ್ಯಾಂಕರ್ ಮತ್ತು ಕ್ರೂಸರ್ ಮಧ್ಯೆ ಡಿಕ್ಕಿಯಾಗಿ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಾಡಿ ಸಮೀಪದ ಇಂಗಳಗಿ ಗ್ರಾಮದ ಮೆಹಬೂಬ್ ಅಲಿ (42), ತೊಲಾ ಬಾಷಾ (30), ಹುಸೇನ್ ಶಹಾಪುರ (47), ರಸೂಲಬಿ (43), ಫಾತಿಮಾ (40) ಮೃತಪಟ್ಟವರು. ಎಲ್ಲರೂ ಸಂಬಂಧಿಕರು.

ಕ್ರೂಸರ್‌ನಲ್ಲಿದ್ದ ಐವರ ದೇಹಗಳು ಛಿದ್ರಗೊಂಡಿವೆ. ಯಾದಗಿರಿಯಿಂದ ಇಂಗಳಗಿಗೆ ತೆರಳುತ್ತಿದ್ದ ಕ್ರೂಸರ್ ಮತ್ತು ವಾಡಿಯಿಂದ ಯಾದಗಿರಿಗೆ ತೆರಳುತ್ತಿದ್ದ ಲಾರಿ ಮಧ್ಯೆ ಡಿಕ್ಕಿ ಸಂಭವಿಸಿದೆ.

ವಂದೇಭಾರತ್ 3ಂಗಳಲ್ಲಿ ಆರಂಭ’

ಮಂಗಳೂರು: ‘ಮಂಗಳೂರು–ಬೆಂಗಳೂರು ನಡುವೆ ‘ವಂದೇ ಭಾರತ್’ ರೈಲು ಸಂಚಾರ ತಿಂಗಳ ಒಳಗೆ ಪ್ರಾರಂಭವಾಗಲಿದೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

‘ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹಳಿಗಳು ಮೂರು ವಿಭಾಗಗಳಲ್ಲಿ ಹಂಚಿಕೆಯಾಗಿವೆ. ಪ್ರತ್ಯೇಕ ಮಂಗಳೂರು ವಿಭಾಗ ಮಾಡುವ ಚಿಂತನೆಯಿದೆ. ಸುಬ್ರಹ್ಮಣ್ಯ–ಸಕಲೇಶಪುರ ನಡುವಿನ 55 ಕಿ.ಮೀ ಮಾರ್ಗದ ವಿದ್ಯುದೀಕರಣ ಪೂರ್ಣಗೊಂಡಿದೆ’ ಎಂದರು.

‘ಕೇಂದ್ರೀಯ ವಿದ್ಯಾಲಯದಲ್ಲಿ ಕೇಸರಿ ಶಾಲು ಹಾಕಿಸಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನೀಟ್ ಅಕ್ರಮದಿಂದ ನುಣುಚಿಕೊಳ್ಳಲು ಬಿಜೆಪಿ ಹಿಜಾಬ್ ವಿಚಾರವನ್ನು ಮುನ್ನೆಲೆಗೆ ತಂದಿದೆ. ಕೇಂದ್ರೀಯ ವಿದ್ಯಾಲಯದಲ್ಲಿರುವ ನಿಯಮವೇ ನಮ್ಮ ಶಾಲೆಗಳಲ್ಲೂ ಇದೆ. ಅಲ್ಲಿ ಮೊದಲು ಕೇಸರಿ ಶಾಲು ಕೊಟ್ಟು ಮತ್ತೆ ನಮ್ಮ ಬಳಿಗೆ ಬರಲಿ’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸವಾಲು ಹಾಕಿದರು.

ಇಲ್ಲಿ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸಮವಸ್ತ್ರ ವಿಷಯದಲ್ಲಿ ಕೇಂದ್ರೀಯ ವಿದ್ಯಾಲಯಕ್ಕೆ, ಮಹಾರಾಷ್ಟ್ರಕ್ಕೆ, ಕರ್ನಾಟಕಕ್ಕೆ ಪ್ರತ್ಯೇಕ ನಿಯಮ ಇದೆಯೇ? ರಾಜ್ಯದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ 95ರಷ್ಟು ಹಿಂದೂಗಳಿದ್ದಾರೆ. ಟೀಕಿಸುವವರೆಲ್ಲರೂ ಆ ಮಕ್ಕಳ ಕಾಲಕೆಳಗೆ ನುಗ್ಗಲಿ, ಆಗ ಬುದ್ಧಿ ಬರುತ್ತದೆ’ ಎಂದರು.

‘ನಾನು ಮೂರು ಪರೀಕ್ಷೆ ನಡೆಸಿದ್ದೇನೆ. ಯಾವ ಪ್ರಶ್ನೆಪತ್ರಿಕೆಯೂ ಸೋರಿಕೆ ಆಗಿಲ್ಲ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕಲಿತಿಲ್ಲ ಎಂದರೆ ನನ್ನ ಬಳಿಗೆ ಬರಲಿ, ಪರೀಕ್ಷೆಗಳನ್ನು ಹೇಗೆ ನಡೆಸಬೇಕು ಎಂದು ಹೇಳಿಕೊಡುವೆ’ ಎಂದರು.

‘ನನ್ನ ವಿದ್ಯಾರ್ಹತೆ ಕುರಿತು ಮಾತನಾಡುವವರು ಪ್ರಧಾನಿ ನರೇಂದ್ರ ಮೋದಿ ಅವರ ನಕಲು ಅಂಕಪಟ್ಟಿಯನ್ನಾದರೂ ತಂದು ತೋರಿಸಲಿ’ ಎಂದು ಸವಾಲು ಹಾಕಿದರು.

‘ಜೂನ್ ತಿಂಗಳಲ್ಲಿ ಸಚಿವ ಸಂಪುಟ ಸಭೆ ಎದುರು ರಾಜ್ಯ ಶಿಕ್ಷಣ ನೀತಿ ಚರ್ಚೆಗೆ ಬರಲಿದೆ. ಉಪಸಮಿತಿ ಸಲಹೆಯಂತೆ ನಿರ್ಧಾರವಾಗುತ್ತದೆ. ಬಿಜೆಪಿಯ ಸಿದ್ಧಾಂತಗಳನ್ನು ಪಠ್ಯದಲ್ಲಿ ಸೇರಿಸಲು ಬಿಡುವುದಿಲ್ಲ. ಹೀಗಾಗಿ ಪುಸ್ತಕ ಪರಿಷ್ಕರಿಸಲಾಯಿತು’ ಎಂದು ಸಮರ್ಥಿಸಿಕೊಂಡರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ದೇವನೂರ ಮಹಾದೇವ ಸಲಹೆ

‘ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೃಪಾಂಕ’

ಪ್ರಜಾವಾಣಿ ವಾರ್ತೆ

ಮೈಸೂರು: ‘ನಶಿಸುತ್ತಿರುವ ಪ್ರಾಣಿ, ಪಕ್ಷಿಗಳ ಗುಂಪಿಗೆ ಕನ್ನಡ ಮಾಧ್ಯಮ ಶಾಲೆಗಳು ಸೇರುತ್ತಿವೆ. ಗ್ರಾಮೀಣ ಹಾಗೂ ಗಡಿಭಾಗಗಳಲ್ಲಿ ಇರುವ ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದಿದವರಿಗೆ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಗ್ರಾಮೀಣ ಕೃಪಾಂಕ ನೀಡಬೇಕು’ ಎಂದು ಲೇಖಕ ದೇವನೂರ ಮಹಾದೇವ ಕೋರಿದರು.

ಇಲ್ಲಿನ ತಮ್ಮ ಮನೆಗೆ ಶನಿವಾರ ಬಂದು ಭೇಟಿಯಾದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಮಾತನಾಡಿ, ‘ಇಂತಹ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿಕೊಳ್ಳಬೇಕೆಂದರೆ ಕೃಪಾಂಕ ಒಂದೇ ದಾರಿ. ಅದರೊಂದಿಗೆ ಈ ಶಾಲೆಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲಗಳನ್ನೂ ಕಲ್ಪಿಸಬೇಕು’ ಎಂದು ಅಭಿಪ್ರಾಯಪಟ್ಟರು.

‘ಕೆಪಿಎಸ್‌ಗಳಲ್ಲಿ ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳಿಗೆ ಸರಳ ವಿಧಾನದಲ್ಲಿ ಸ್ಪೋಕನ್ ಇಂಗ್ಲಿಷ್ ಹೇಳಿಕೊಟ್ಟು ಧೈರ್ಯ ತುಂಬಬೇಕು. ಅದಕ್ಕಾಗಿ ಪರಿಣತರನ್ನು ನೇಮಿಸಬೇಕು. ಇಂಗ್ಲಿಷ್ ಮಾತನಾಡಲು ಕಲಿತ ನಂತರವೇ ವ್ಯಾಕರಣ ಬೋಧಿಸಬೇಕು. ಕನ್ನಡ ಮಾತನಾಡಲು ಗೊತ್ತಿದ್ದರೂ ಅನೇಕರಲ್ಲಿ ವ್ಯಾಕರಣ ಸಮಸ್ಯೆ ಇದೆ. ಹೀಗಾಗಿ ವಿಶೇಷ ಪರಿಕರ ಬಳಸಿ ಕಲಿಸಿ’ ಎಂದು ಸಲಹೆ ನೀಡಿದರು.

ಲೇಖಕ ದೇವನೂರ ಮಹಾದೇವ ಅವರ ಮೈಸೂರು ಮನೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶನಿವಾರ ಭೇಟಿ ನೀಡಿ ಚರ್ಚಿಸಿದರು

ವೈಜ್ಞಾನಿಕ ಮನೋಭಾವ ಬೆಳೆಸಿ: ‘ಎಳವೆಯಲ್ಲೇ ವೈಜ್ಞಾನಿಕ ಮನೋಭಾವ ಬೆಳೆಸಲು ವಿಜ್ಞಾನದ ಸಂಶೋಧನೆಗಳನ್ನು, ಸಂವಿಧಾನದ ಪ್ರಸ್ತಾವನೆ, ಪರಿಕಲ್ಪನೆಯನ್ನು ಕಥೆ ರೂಪದಲ್ಲಿ ಹೇಳಬೇಕು. ಸ್ವಾತಂತ್ರ್ಯ ಹೋರಾಟದ ಸತ್ಯ ಕಥೆಯನ್ನು ತಿಳಿಸಬೇಕು. ನಾಟಕ, ಸಂಗೀತ- ಹಾಡುಗಾರಿಕೆ ಕಲಿಸಲು ಪರಿಣತ ಶಿಕ್ಷಕರನ್ನು ನೇಮಿಸಬೇಕು’ ಎಂದು ಸಲಹೆ ಮಾಡಿದರು.

‘ಎಲ್ಲಾ ಜಾತಿಗಳ ಮಕ್ಕಳೂ ಒಂದೇ ಕಡೆ ಓದುವುದೇ ನಿಜವಾದ ಶಿಕ್ಷಣ. ಪ್ರಾಥಮಿಕ ಹಂತದಲ್ಲಿ ಮಕ್ಕಳ ಕುತೂಹಲ ಪ್ರವೃತ್ತಿಗೆ ಪೂರಕವಾಗಿ ಪಠ್ಯ ರಚನೆ ಆಗಬೇಕು. ಶಾಲೆಗಳ ವಿಲೀನದಿಂದ ಖಾಲಿಯಾಗುವ ಕಟ್ಟಡಗಳನ್ನು ಖಾಸಗಿ ವ್ಯಕ್ತಿಗಳಿಗೆ, ತಕರಾರು ವ್ಯಾಜ್ಯ ಮಾಡುವವರಿಗೆ, ಧಾರ್ಮಿಕ ಸಂಘಟನೆಗಳಿಗೆ ನೀಡದೆ ಸಮಾಜಮುಖಿ ಕಾರ್ಯಗಳಿಗೆ ನೀಡಬೇಕು’ ಎಂದರು.

ಮೀಸಲಾತಿ ಪಾಲಿಸಿ: ‘ಅಲೆಮಾರಿ ಮಕ್ಕಳ, ಗುಳೆ ಹೋಗುವವರ ಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ವಸತಿ ಶಾಲೆ ನಿರ್ಮಿಸಬೇಕು. ಅವರು ಎಲ್ಲೇ ಹೋದರೂ ಯಾವುದೇ ಶಾಲೆಯಾದರೂ ಆ ಮಕ್ಕಳಿಗೆ ಆದ್ಯತೆ ನೀಡುವಂತೆ ಕ್ರಮ ವಹಿಸಬೇಕು. ಶಿಕ್ಷಕರ ಕೊರತೆ ನೀಗಿಸಲು ಅತಿಥಿ ಶಿಕ್ಷಕರನ್ನು ನೇಮಿಸಿ, ಅಲ್ಲೂ ಮೀಸಲಾತಿ ಅನ್ವಯಿಸಬೇಕು’ ಎಂದರು.

ಪ್ರತಿಕ್ರಿಯಿಸಿದ ಮಧು ಬಂಗಾರಪ್ಪ, ‘ಗ್ರಾಮೀಣ ಕೃಪಾಂಕ ನೀಡುವುದು ಉತ್ತಮ ಯೋಚನೆ. ಈ ಕುರಿತು ಇಲಾಖೆ ಅಧಿಕಾರಿಗಳು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸುವ ಬಗ್ಗೆ ತೀರ್ಮಾನಿಸುತ್ತೇನೆ. ನಿಮ್ಮ ಸಲಹೆಗಳನ್ನು ಕೆಪಿಎಸ್ ಶಿಕ್ಷಣ ಕ್ರಮದಲ್ಲಿ ಅಳವಡಿಸುತ್ತೇನೆ’ ಎಂದು ತಿಳಿಸಿದರು.

ಫೇಲು: ನಾನೇ ಸೀನಿಯರ್–ಸಚಿವ

ತರಗತಿಗಳಲ್ಲಿ ವಿದ್ಯಾರ್ಥಿಗಳು ಪಾಸು–ಫೇಲಾಗುವ ಕುರಿತು ಸಚಿವ ಮಧು ಬಂಗಾರಪ್ಪ ಮತ್ತು ದೇವನೂರ ಮಹಾದೇವ ಅವರ ನಡುವೆ ಲಘು ಮಾತುಕತೆ ನಡೆಯಿತು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಾಲಕರ ಸಾಧನೆ ಈ ಬಾರಿ ಸುಧಾರಿಸಿದೆ’ ಎಂದು ಸಚಿವರು ಹೇಳಿದಾಗ, ದೇವನೂರ ಮಹಾದೇವ ಅವರು, ‘ನಾನು ಕೂಡ ಪಿಯುಸಿಯಲ್ಲಿ ಎರಡು ಬಾರಿ ಫೇಲಾಗಿದ್ದೆ’ ಎಂದು ನಕ್ಕರು.

ಅದಕ್ಕೆ ಸಚಿವರು, ‘ಫೇಲಾಗುವ ವಿಚಾರದಲ್ಲಿ ನಾನು ನಿಮಗಿಂತ ಸೀನಿಯರ್’ ಎಂದು ಹೇಳಿದರು. ಆಗ ಸುತ್ತ ಇದ್ದವರ ನಡುವೆ ನಗೆಯ ಅಲೆ ಎದ್ದಿತು.

ದಾವಣಗೆರೆ: ಕ್ವಿಂಟಲ್ ಭತ್ತಕ್ಕೆ ಗರಿಷ್ಠ ₹ 2,901 ದರ • ಕೃಷಿಕರದು ಕೈಗೆ ಬಂದ ತುತ್ತು ಬಾಯಿಗೆ ಬರದ ಸ್ಥಿತಿ

ಭತ್ತ ಬೆಳೆ ಕಟಾವಿಗೂ ಮಳೆ ರಗಳೆ

• ರಾಮಮೂರ್ತಿ ಪಿ.

ದಾವಣಗೆರೆ: ನಿರಂತರ ಮಳೆಯಿಂದಾಗಿ ಜಿಲ್ಲೆಯ ಭತ್ತ ಬೆಳೆಗಾರರಿಗೆ ಸಂಕಷ್ಟ ಎದುರಾಗಿದೆ. ಇಲ್ಲಿನ ಎಪಿಎಂಸಿಯಲ್ಲಿ ಶನಿವಾರ ಕ್ವಿಂಟಲ್ ಭತ್ತಕ್ಕೆ ಗರಿಷ್ಠ ₹ 2,901 ದರ ಇದ್ದು, ಸರಾಸರಿ ₹ 2,600 ಇದೆ. ಉತ್ತಮ ದರವಿದ್ದರೂ, ಮಳೆಯಿಂದಾಗಿ ಭತ್ತ ಕಟಾವು ಸಾಧ್ಯವಾಗುತ್ತಿಲ್ಲ.

ಮೇ ಆರಂಭದಲ್ಲಿ ಭತ್ತಕ್ಕೆ ಗರಿಷ್ಠ ₹ 2,400 ದರ ಇತ್ತು. ಕೆಲ ದಿನಗಳಿಂದ ದರ ಏರುಮುಖದಲ್ಲಿದೆ. ಮಳೆ ನಿಲ್ಲದಿದ್ದರೆ ದರ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ. ಆದರೆ, ಕಟಾವಿಗೆ ವರುಣ ಅಡ್ಡಿಯಾಗಿರುವುದರಿಂದ ಎಪಿಎಂಸಿಗೆ ಬರುವ ಭತ್ತದ ಆವಕ ಪ್ರಮಾಣವೂ ಕುಸಿದಿದೆ.

ಜಿಲ್ಲೆಯಲ್ಲಿ ಭದ್ರಾ ಬಲದಂಡೆ ಕಾಲುವೆ ನೀರು ನೆಚ್ಚಿಕೊಂಡು 54,895 ಹೆಕ್ಟೇರ್ ಪ್ರದೇಶದಲ್ಲಿ ಬೇಸಿಗೆ ಹಂಗಾಮಿನ ಭತ್ತ ಬೆಳೆಯಲಾಗಿದೆ. 3.43 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ನಿರೀಕ್ಷಿಸಲಾಗಿತ್ತು. ಸದ್ಯ ಶೇ 20ರಿಂದ 30ರಷ್ಟು ಮಾತ್ರ ಕಟಾವು ಆಗಿದೆ. ಮಳೆ ಆರ್ಭಟಕ್ಕೆ ಭತ್ತದ ಬೆಳೆ ಮಣ್ಣಿನ ಪಾಲಾಗುತ್ತಿದೆ.

ಎಪಿಎಂಸಿಗೆ ಶನಿವಾರ 3,500 ಕ್ವಿಂಟಲ್ ಭತ್ತ ಆವಕವಾಗಿದೆ. ಸಾಮಾನ್ಯವಾಗಿ ಬೇಸಿಗೆ ಭತ್ತ ಕೈಗೆ ಬಂದಾಗ ಆವಕದ ಪ್ರಮಾಣ 10,000 ಕ್ವಿಂಟಲ್ ಮೀರುತ್ತಿತ್ತು ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

22ರಂದು ಗರಿಷ್ಠ ದರ ₹2,939, 21ರಂದು ₹ 2,965, 20ರಂದು ₹ 2,880 ಗರಿಷ್ಠ ದರ ಇತ್ತು. ಆರ್‌ಎನ್‌ಆರ್ ತಳಿಯ ಉತ್ತಮ ಗುಣಮಟ್ಟದ ಭತ್ತಕ್ಕೆ ಗರಿಷ್ಠ ₹ 2,600, ಶ್ರೀರಾಮ್ ತಳಿಯ ಭತ್ತಕ್ಕೆ ಗರಿಷ್ಠ ₹ 2,900 ದರ ದೊರೆಯುತ್ತಿದೆ. ಜಿಲ್ಲೆಯಲ್ಲಿ ಬಹುಪಾಲು ಆರ್‌ಎನ್‌ಆರ್ ತಳಿಯ ಭತ್ತ ಕೃಷಿ ಆಗಿದೆ. ನೇರವಾಗಿ ಖರೀದಿಸುವ ವ್ಯಾಪಾರಿಗಳು ಕ್ವಿಂಟಲ್‌ಗೆ ₹ 2,600– ₹ 2,700 ದರ ನೀಡುತ್ತಿದ್ದಾರೆ.

‘ಭತ್ತದ ಕಟಾವು ಆಗುತ್ತಿಲ್ಲ. ದಿನ ಬಿಟ್ಟು ದಿನ ಮಳೆ ಸುರಿಯುತ್ತಲೇ ಇದೆ. ಭತ್ತದ ಬೆಳೆ ಹಾಳಾಗುತ್ತಿದ್ದರೂ, ಏನೂ ಮಾಡಲಾಗದ ಸ್ಥಿತಿಯಲ್ಲಿದ್ದೇವೆ’ ಎನ್ನುತ್ತಾರೆ ಮಾಗಾನಹಳ್ಳಿಯ ರೈತ ಹನುಮಂತಪ್ಪ.

‘ಈ ಸಲ ಇಳುವರಿ ಚೆನ್ನಾಗಿದೆ. ಇನ್ನೊಂದು ವಾರ ಕಳೆದಿದ್ದರೆ ಕಟಾವು ಮುಗಿದು ಉತ್ತಮ ಆದಾಯ ಕಾಣುತ್ತಿದ್ದೆವು. ಈಗ ಖರ್ಚು ಮಾಡಿದ ಹಣ ವಾಪಸಾದರೂ ಸಾಕು ಎಂಬ ಸ್ಥಿತಿ ಇದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಭತ್ತದ ದರ ಕ್ವಿಂಟಲ್‌ಗೆ ₹ 2,000ದಿಂದ ₹ 2,050 ಇತ್ತು. ಈ ಸಲ ಉತ್ತಮ ದರವಿದ್ದರೂ, ಪ್ರಯೋಜನವಾಗುತ್ತಿಲ್ಲ’ ಎಂದು ಓಬಜ್ಜಿಹಳ್ಳಿಯ ರೈತ ರಾಘವೇಂದ್ರ ನಾಯ್ಕ ಬೇಸರ ವ್ಯಕ್ತಪಡಿಸಿದರು.

ದಾವಣಗೆರೆ ತಾಲ್ಲೂಕಿನ ಕುಕ್ಕುವಾಡದಲ್ಲಿ ಭತ್ತ ಬೆಳೆ ನೆಲಕಚ್ಚಿದೆ

‘ಬೆಳೆ ಸಮೀಕ್ಷೆ ನಡೆಸಿ, ಪರಿಹಾರ ಘೋಷಿಸಲಿ’

‘ಈ ಬಾರಿ ಉತ್ತಮ ಫಸಲು ಬಂದಿದ್ದರಿಂದ ಎಕರೆಗೆ 30 ಕ್ವಿಂಟಲ್ ಭತ್ತ ನಿರೀಕ್ಷಿಸಿದ್ದೆವು. ಮಳೆಯಿಂದಾಗಿ ಭತ್ತದ ಬೆಳೆ ಹಾಳಾಗುತ್ತಿದೆ. ಬರೀ 15ರಿಂದ 20 ಕ್ವಿಂಟಲ್ ಸಿಗುವ ಸಾಧ್ಯತೆ ಇದೆ’ ಎಂದು ಕೊಳೇನಹಳ್ಳಿಯ ರೈತ ಸತೀಶ್ ಬಿ.ಎಂ. ಹೇಳಿದರು.

‘ಎಕರೆಗೆ ₹ 35,000 ಖರ್ಚಾಗಿದೆ. ಸರ್ಕಾರ ಬೆಳೆಹಾನಿ ಸಮೀಕ್ಷೆ ನಡೆಸಿ ಪರಿಹಾರ ಘೋಷಿಸಲಿ. ಕಟಾವು ಮುಗಿಸಿ, ಭತ್ತ ಮಾರುವ ವೇಳೆಗೆ ದರದಲ್ಲಿ ಏರಿಳಿತವಾಗುವ ಸಾಧ್ಯತೆ ಇದೆ’ ಎಂದರು.

ಮೈಸೂರಿನಲ್ಲಿ ಶನಿವಾರ ಸಂಜೆ ಕೆಲಹೊತ್ತು ಉತ್ತಮ ಮಳೆಯಾಗಿದ್ದು, ತಿ. ನರಸೀಪುರ ರಸ್ತೆಯ ಕೆಎಸ್‌ಆರ್‌ಟಿಸಿ ಲೇಔಟ್ ಸಮೀಪ ವ್ಯಕ್ತಿಯೊಬ್ಬರು ಮಳೆಯಲ್ಲೇ ಎಮ್ಮೆಗಳೊಂದಿಗೆ ಸಾಗಿದರು ಚಿತ್ರ: ಹಂಪಾ ನಾಗರಾಜ್

‘ಕಲ್ಯಾಣ’ದ ಕೆಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಯಾದಗಿರಿ, ಬೀದರ್, ರಾಯಚೂರು ಜಿಲ್ಲೆಯ ಕೆಲವೆಡೆ ಶನಿವಾರ ಮಳೆ ಸುರಿದಿದೆ.

ಯಾದಗಿರಿ ನಗರ ಸೇರಿದಂತೆ ಸುತ್ತಲಿನ ಗ್ರಾಮಗಳಲ್ಲಿ ಗುಡುಗು ಮಿಂಚು ಸಹಿತ ಮಳೆಯಾಯಿತು. ದಿನವಿಡಿ ಬಿಸಿಲು, ಮೋಡಕವಿದ ವಾತಾವರಣ ಇತ್ತು. ಸಂಜೆ 6.20 ಸುಮಾರಿಗೆ ಕೆಲ ಕಾಲ ಬಿರುಸಿನಿಂದ ಮಳೆ ಸುರಿಯಿತು. ಅರಕೇರಾ (ಕೆ), ಕಂದಕೂರ, ಚಪೆಟ್ಲಾ, ಯಲ್ಹೇರಿ, ಏವೂರು, ಗಾಜಕೋಟ ಗ್ರಾಮಗಳಲ್ಲಿ ಮಳೆಯಾಗಿದೆ.

ಬೀದರ್ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಗುಡುಗು ಸಹಿತ ಮಳೆಯಾಗಿದೆ. ರಾಯಚೂರು ಜಿಲ್ಲೆಯ ಮಾನ್ವಿ, ಸಿಂಧನೂರು, ಸಿರಿವಾರದಲ್ಲೂ ಮಳೆ ಸುರಿದಿದೆ.

ಚಟಿಕೆ ಸುದ್ದಿ

ವಿಬಿ– ಜಿ ರಾಮ್ ಜಿ ಕರಡು ನಿಯಮ ಪ್ರಕಟ

ನವದೆಹಲಿ (ಪಿಟಿಐ): 'ವಿಕಸಿತ ಭಾರತ– ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) ಕಾಯ್ದೆ–2025ರ (ವಿಬಿ– ಜಿ ರಾಮ್ ಜಿ) ಕರಡು ನಿಯಮಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದೆ.

ಜುಲೈ 1ರಿಂದ ಕಾನೂನು ಜಾರಿಯಾಗಲಿದೆ ಎಂಬ ಅಧಿಸೂಚನೆ ಹೊರಡಿಸಿದ ಬೆನ್ನಲ್ಲೇ, ಕಾಯ್ದೆಯ ಸೆಕ್ಷನ್ 33 ಮತ್ತು ಇತರ ನಿಬಂಧನೆಗಳ ಅನ್ವಯ ಕರಡು ನಿಯಮಗಳನ್ನು ಪ್ರಕಟಿಸಿದೆ.

ಪ್ರಸ್ತಾವಿತ ನಿಯಮಗಳು, ರಾಷ್ಟ್ರೀಯ ಸ್ಥಾಯಿ ಸಮಿತಿ, ಕೇಂದ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮಂಡಳಿ, ಆಡಳಿತಾತ್ಮಕ ವೆಚ್ಚಗಳು, ಕುಂದುಕೊರತೆ ನಿವಾರಣೆ, ಕೂಲಿ ಮತ್ತು ನಿರುದ್ಯೋಗ ಭತ್ಯೆ ಮತ್ತಿತರ ಅಂಶಗಳನ್ನು ಒಳಗೊಂಡಿದೆ.

16 ಜನರ ಸಾವು

ಹೈದರಾಬಾದ್ (ಪಿಟಿಐ): ಪ್ರಸ್ತುತ ಬೇಸಿಗೆಯಲ್ಲಿ ರಾಜ್ಯದ ಏಳು ಜಿಲ್ಲೆಗಳ 16 ಜನರು ಬಿಸಿಗಾಳಿಗೆ ಮೃತಪಟ್ಟಿದ್ದಾರೆ ಎಂದು ತೆಲಂಗಾಣದ ಕಂದಾಯ ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಶನಿವಾರ ಹೇಳಿದ್ದಾರೆ.

ಬಿಸಿಗಾಳಿಯಿಂದ ಉಂಟಾದ ಪರಿಸ್ಥಿತಿಯ ಕುರಿತು ಅವರು ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಮೃತರ ಕುಟುಂಬಕ್ಕೆ ಸರ್ಕಾರ ತಲಾ ₹4 ಲಕ್ಷ ಪರಿಹಾರ ನೀಡಲಿದೆ ಎಂದು ಅವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡಗ ಮಹಿಳೆ ಶತಾಯುಷಿ: ಸಂಭ್ರಮ

ಉದಕಮಂಡಲ (ಪಿಟಿಐ): ನೀಲಗಿರಿ ಜಿಲ್ಲೆಯ ಜನಾಂಗೀಯ ಭಾಷಾ ಸಮುದಾಯವಾದ 'ಬಡಗ ಜನಾಂಗ'ಕ್ಕೆ ಸೇರಿದ ಮಲ್ಲಮ್ಮಾಳ್ ಅವರಿಗೆ ಶನಿವಾರ 100 ವರ್ಷ ತುಂಬಿದ್ದು, ಸಮುದಾಯದ ಮೊದಲ ಶತಾಯುಷಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

50 ಮನೆಗಳಿರುವ ಮಲ್ಲಿಕೊರೈ ಗ್ರಾಮದ ಜನರು ಮತ್ತು ಕುಟುಂಬದ ಸದಸ್ಯರು ಮಲ್ಲಮ್ಮಾಳ್ ಅವರ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸಿದ್ದಾರೆ. ಮಲ್ಲಮ್ಮಾಳ್ ಅವರ ನಾಲ್ವರು ಪುತ್ರರು, 10 ಮೊಮ್ಮಕ್ಕಳು, 20 ಮರಿಮೊಮ್ಮಕ್ಕಳು ಶುಭ ಕೋರಿದ್ದಾರೆ.

ಸಮರ್ಥ್ ಸಿಂಗ್ ಪೊಲೀಸ್ ವಶಕ್ಕೆ

ವರದಕ್ಷಿಣೆ ಕಿರುಕುಳದಿಂದ ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣ

ಭೋಪಾಲ್ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣ ಸಂಬಂಧ ಬಂಧನಕ್ಕೊಳಗಾದ ಪತಿ ಸಮರ್ಥ್ ಸಿಂಗ್ ಅವರನ್ನು ನ್ಯಾಯಾಲಯವು ಏಳು ದಿನಗಳ ಕಾಲ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಭೋಪಾಲ್‌ನ ಕತಾರ ಹಿಲ್ಸ್ ಪ್ರದೇಶದಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು.

ಟ್ವಿಶಾ ಅವರ ಪತಿ ಸಮರ್ಥ್ ಸಿಂಗ್ ಮತ್ತು ಅತ್ತೆ, ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 80(2), 85, ಮತ್ತು 3(5) ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿ ಕತಾರ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಇದಾದ ಬಳಿಕ ಸಮರ್ಥ್ ಅವರು ತಲೆಮರೆಸಿಕೊಂಡಿದ್ದರು. ಮಗನ ಪರವಾಗಿ ತಾಯಿ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಧ್ಯಪ್ರದೇಶ ಹೈಕೋರ್ಟ್‌ನಲ್ಲಿ ಹಿಂದಕ್ಕೆ ಪಡೆದ ಬಳಿಕ ಜಬಲ್ಪುರ ನ್ಯಾಯಾಲಯಕ್ಕೆ ಶರಣಾಗಲು ಸಮರ್ಥ್ ತೆರಳಿದ್ದರು. ನ್ಯಾಯಾಲಯದ ಆವರಣದ ಹೊರಗಡೆಯೇ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು, ಭೋಪಾಲ್ ವಿಶೇಷಾ ತನಿಖಾ ತಂಡಕ್ಕೆ ಒಪ್ಪಿಸಿದ್ದರು.

ಸಮರ್ಥ್ ಸಿಂಗ್, ಟ್ವಿಶಾ ಶರ್ಮಾ


ಮಧ್ಯಪ್ರದೇಶದ ಭೋಪಾಲ್‌ನಲ್ಲಿರುವ ಟ್ವಿಶಾ ಶರ್ಮಾ ಅತ್ತೆ ಮನೆಗೆ ವಕೀಲರ ತಂಡವು ಶನಿವಾರ ಭೇಟಿ ನೀಡಿ ಚರ್ಚೆ ನಡೆಸಿತು –ಪಿಟಿಐ ಚಿತ್ರ

ಹೇಳಿಕೆ ದಾಖಲಿಸಲು ನಿರ್ಧಾರ: ಈ ಪ್ರಕರಣದಲ್ಲಿ ಟ್ವಿಶಾ ಶರ್ಮಾಳ ಅತ್ತೆ ಗಿರಿಬಾಲಾ ಸಿಂಗ್ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲು ನೋಟಿಸ್ ಜಾರಿ ಮಾಡಿದ್ದಾರೆ. ಈ ಹಿಂದೆ ಮೂರು ಬಾರಿ ನೋಟಿಸ್ ನೀಡಿದ್ದರೂ ಹಾಜರಾಗಿರಲಿಲ್ಲ.

ಗಿರಿಬಾಲಾ ಸಿಂಗ್ ಸೆಷನ್ಸ್ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾಗಿದ್ದು, ಭೋಪಾಲ್‌ನ ಗ್ರಾಹಕರ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದಾರೆ.

ಹೇಳಿಕೆ ದಾಖಲಿಸಲು ಸಿದ್ಧ: 'ನಾನು ಹೊರಗಡೆ ಎಂದಿನಂತೆ ಹೋಗಲು ಸಾಧ್ಯವಿಲ್ಲ. ನನ್ನ ವಕೀಲರಿಗೆ ಕಾರು ಡಿಕ್ಕಿ ಹೊಡೆದಿದೆ. ನನ್ನ ಹೇಳಿಕೆ ದಾಖಲಿಸಲು ಸಂತೋಷ ಪಡುತ್ತೇನೆ. ಈ ಕುರಿತು ಪೊಲೀಸ್ ಆಯುಕ್ತರಿಗೆ ಇ–ಮೇಲ್ ಮಾಡಿದ್ದು, ಅವರು ಬರುವುದಾಗಿ ತಿಳಿಸಿದ್ದಾರೆ' ಎಂದು ಗಿರಿಬಾಲಾ ಸಿಂಗ್ ಹೇಳಿದ್ದಾರೆ.

ಭೋಪಾಲ್‌ಗೆ ಬಂದ ಏಮ್ಸ್ ತಂಡ

ನವದೆಹಲಿ (ಪಿಟಿಐ): ಟ್ವಿಶಾ ಶರ್ಮಾ ಅವರ 2ನೇ ಮರಣೋತ್ತರ ಪರೀಕ್ಷೆಗೆ ಹೈಕೋರ್ಟ್ ಅನುಮತಿ ನೀಡಿದ ಬೆನ್ನಲ್ಲೇ, ನವದೆಹಲಿ ಏಮ್ಸ್‌ನ ನಾಲ್ವರು ವೈದ್ಯರ ತಂಡವು ಶನಿವಾರ ರಾತ್ರಿ ವಿಶೇಷ ವಿಮಾನದಲ್ಲಿ ಭೋಪಾಲ್‌ಗೆ ಬಂದಿಳಿಯಿತು.

'ಮರಣೋತ್ತರ ಪರೀಕ್ಷೆ ನಡೆಸಲು ವೈದ್ಯಕೀಯ ಮಂಡಳಿ ರಚಿಸುವಂತೆ ಏಮ್ಸ್‌ನ ನಿರ್ದೇಶಕರಿಗೆ ಅಧಿಕಾರ ನೀಡಿದೆ' ಎಂದು ಏಮ್ಸ್ ದೆಹಲಿ ವಿಧಿವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಸುಧೀರ್ ಗುಪ್ತಾ ತಿಳಿಸಿದ್ದಾರೆ.

ಏಮ್ಸ್‌ನ ವೈದ್ಯರ ತಂಡವು ಭಾನುವಾರ ಬೆಳಿಗ್ಗೆ ಮರಣೋತ್ತರ ಪರೀಕ್ಷೆ ನಡೆಸಲಿದೆ.

ಸಿಜೆಪಿಯ ಸಾಮಾಜಿಕ ಮಾಧ್ಯಮ ಖಾತೆಗಳಿಗೆ ನಿರ್ಬಂಧ: ಆರೋಪ

ನವದೆಹಲಿ (ಪಿಟಿಐ): ಸರಣಿ ನಿರ್ಬಂಧಗಳು ಮತ್ತು 'ಹ್ಯಾಕ್' ಯತ್ನಗಳಿಂದಾಗಿ 'ಕಾಕ್ರೋಚ್ ಜನತಾ ಪಾರ್ಟಿ'ಯ (ಸಿಜೆಪಿ) ಎಲ್ಲಾ ಸಾಮಾಜಿಕ ಮಾಧ್ಯಮ ಖಾತೆಗಳಿಗೆ ಲಾಗ್–ಇನ್ ಆಗಲು ಸಾಧ್ಯವಾಗುತ್ತಿಲ್ಲ ಎಂದು ಸಂಸ್ಥಾಪಕ ಅಭಿಜೀತ್ ದೀಪ್ಕೆ ಆರೋಪಿಸಿದ್ದಾರೆ.

'ವೈಯಕ್ತಿಕ ಇನ್‌ಸ್ಟಾಗ್ರಾಂ ಖಾತೆಯನ್ನೂ ಹ್ಯಾಕ್ ಮಾಡಲಾಗಿದೆ' ಎಂದು 'ಎಕ್ಸ್'ನಲ್ಲಿ ಶನಿವಾರ ಆರೋಪ ಮಾಡಿದ್ದಾರೆ.

ಸಿಜೆಪಿಯ ಮೂಲ 'ಎಕ್ಸ್' ಖಾತೆಯನ್ನು ನಿರ್ಬಂಧಿಸಿದ ಬಳಿಕ ದೀಪ್ಕೆ ಅವರು ಮತ್ತೊಂದು ಖಾತೆಯನ್ನು ತೆರೆದಿದ್ದರು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿ ಶುಕ್ರವಾರ ಅಭಿಯಾನ ಆರಂಭಿಸಿತ್ತು. ಈ ಬೆನ್ನಲ್ಲೇ ಜೀವಬೆದರಿಕೆ ಎದುರಿಸುತ್ತಿರುವುದಾಗಿ ದೀಪ್ಕೆ ಆರೋಪಿಸಿದ್ದರು.

'ಸಿಜೆಪಿ ವೆಬ್‌ಸೈಟ್ cockroach jantaparty.org ಮತ್ತು 'ಎಕ್ಸ್' ಖಾತೆಯನ್ನು ನಿರ್ಬಂಧಿಸಲಾಗಿದೆ, ಹೊಸದಾಗಿ ರಚಿಸಿದ್ದ 'ಎಕ್ಸ್' ಖಾತೆಯನ್ನೂ ನಿರ್ಬಂಧಿಸಲಾಗಿದೆ. ಇನ್‌ಸ್ಟಾಗ್ರಾಂ ಖಾತೆಯನ್ನು ಹ್ಯಾಕ್ ಮಾಡಲಾಗಿದೆ. ಇದು ಅಭಿಯಾನದ ವಿರುದ್ಧದ ಸಂಘಟಿತ ಕ್ರಮ' ಎಂದು ದೂರಿದ್ದಾರೆ.

'ಸಿಜೆಪಿಯ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಯಾವುದೇ ಪೋಸ್ಟ್‌ಗಳನ್ನು ಅಧಿಕೃತ ಹೇಳಿಕೆಗಳೆಂದು ಪರಿಗಣಿಸಬೇಡಿ' ಎಂದು ಮನವಿ ಮಾಡಿದ್ದಾರೆ.

'ಪ್ರಶ್ನೆಪತ್ರಿಕೆ ಸೋರಿಕೆ ಕಾರಣಕ್ಕೆ ಶಿಕ್ಷಣ ಸಚಿವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸರ್ಕಾರದ ವೈಫಲ್ಯ ದಿಂದಾಗಿ ವಿದ್ಯಾರ್ಥಿಗಳು ಜೀವ ಕಳೆದುಕೊಳ್ಳುತ್ತಿದ್ದಾರೆ. ಆದರೆ ನವ ಭಾರತದಲ್ಲಿ ಹೊಣೆಗಾರಿಕೆಗೆ ಆಗ್ರಹಿಸಿದ್ದ ಸಿಜೆಪಿ ವಿರುದ್ಧವೇ ಕ್ರಮ ಜರುಗಿಸಲಾಗಿದೆ' ಎಂದಿದ್ದಾರೆ.

ಜಾರ್ಖಂಡ್: ಇಬ್ಬರು ನಕ್ಸಲರ ಬಂಧನ

ಲಾತೇಹಾರ್ (ಪಿಟಿಐ): ಜಾರ್ಖಂಡ್‌ನ ಲಾತೇಹಾರ್ ಜಿಲ್ಲೆಯಲ್ಲಿ ಇಬ್ಬರು ನಕ್ಸಲರನ್ನು ಬಂಧಿಸಲಾಗಿದೆ. ನಿಷೇಧಿತ ಜಾರ್ಖಂಡ್ ಜನ ಮುಕ್ತಿ ಪರಿಷತ್ ಸಂಘಟನೆಯ ಉಪವಲಯ ಕಮಾಂಡರ್ ಶಿವ ನಾರಾಯಣ ಸಿಂಗ್ ಅಲಿಯಾಸ್ ಶಿವ ಮತ್ತು ಅದೇ ಸಂಘಟನೆಯ ಪ್ರದೇಶ ಕಮಾಂಡರ್ ಸಕಲ್‌ದೀಪ್ ಉರಾಂವ್ ಬಂಧಿತರು.

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ್ದ ಜಾರ್‌ಗ್ರಾಮದ ಅಂಗಡಿ

ಜಾಲ್‌ಮುರಿ ಅಂಗಡಿ ಮಾಲೀಕನಿಗೆ ಜೀವ ಬೆದರಿಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಚುನಾವಣೆ ಪ್ರಚಾರದ ವೇಳೆ ಪ್ರಧಾನಿ ಮೋದಿ ಅವರು ಭೇಟಿ ನೀಡಿದ್ದ 'ಜಾಲ್‌ಮುರಿ' ಅಂಗಡಿಯ ಮಾಲೀಕನಿಗೆ ಜೀವ ಬೆದರಿಕೆ ಬಂದಿರುವ ಕಾರಣ ಶನಿವಾರ ಭದ್ರತೆ ಹೆಚ್ಚಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 19ರಂದು ಜಾರ್‌ಗ್ರಾಮ ಪಟ್ಟಣದ ರಾಜ್ ಕಾಲೇಜು ವೃತ್ತದ ಬಳಿ ವಿಕ್ರಮ್ ಕುಮಾರ್ ಅವರು ನಡೆಸುತ್ತಿದ್ದ ಅಂಗಡಿಯಲ್ಲಿ ಪ್ರಧಾನಿ ಮೋದಿ ಜಾಲ್‌ಮುರಿ ತಿಂದಿದ್ದರು.

'ಮೇ 17ರಿಂದ ಪಾಕಿಸ್ತಾನ ಹಾಗೂ ಬಾಂಗ್ಲಾದೇಶದವರೆಂದು ಹೇಳಿಕೊಂಡು ಬೆದರಿಕೆ ಕರೆಗಳು ಮತ್ತು ಸಂದೇಶಗಳು ಬರುತ್ತಿವೆ. ಕರೆ ಮಾಡಿದವರು ನನ್ನನ್ನು ಕೊಲೆ ಮಾಡುವುದಾಗಿಯೂ, ಅಂಗಡಿಯನ್ನು ಬಾಂಬ್ ಇಟ್ಟು ಸ್ಫೋಟಿಸುವುದಾಗಿಯೂ ಬೆದರಿಸುತ್ತಿದ್ದಾರೆ' ಎಂದು ಜಾರ್‌ಗ್ರಾಮ ಪೊಲೀಸ್ ಠಾಣೆಗೆ ಸಲ್ಲಿಸಿರುವ ಲಿಖಿತ ದೂರಿನಲ್ಲಿ ವಿಕ್ರಮ್ ಅವರು ಹೇಳಿದ್ದಾರೆ.

ಅಲ್ಲದೆ, ಕೆಲವರು ವಾಟ್ಸ್‌ಆ್ಯಪ್ ವಿಡಿಯೊ ಕಾಲ್‌ಗಳಲ್ಲಿ ಬಂದೂಕುಗಳನ್ನು ತೋರಿಸಿ ಬೆದರಿಕೆ ಹಾಕಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. 'ಪದೇ ಪದೇ ಬೆದರಿಕೆ ಕರೆಗಳು ಬಂದ ನಂತರ ನಾನು ಮತ್ತು ನನ್ನ ಕುಟುಂಬಸ್ಥರು ಭಯಭೀತರಾಗಿದ್ದೇವೆ. ಅಲ್ಲದೆ, ಈ ಭಯದಿಂದ ಕೆಲವು ದಿನ ಅಂಗಡಿಯನ್ನೂ ಮುಚ್ಚಿದ್ದೆ' ಎಂದು ಅವರು ಹೇಳಿದ್ದಾರೆ.

ಈ ಬಗ್ಗೆ ದೂರು ದಾಖಲಾಗಿದ್ದು, ಎಲ್ಲ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬೆದರಿಕೆ ಕರೆ ಮತ್ತು ಸಂದೇಶಗಳ ಮೂಲವನ್ನು ಪತ್ತೆಹಚ್ಚಲು ಸೈಬರ್ ತಜ್ಞರು ಸಹಾಯ ಮಾಡುತ್ತಿದ್ದಾರೆ ಅವರು ಹೇಳಿದ್ದಾರೆ.

ಬೆದರಿಕೆ ಕಾರಣದಿಂದ ಅಧಿಕಾರಿಗಳು ವಿಕ್ರಮ್ ಅವರ ಅಂಗಡಿಯ ಹೊರಗೆ ನಾಲ್ವರು ಸಿಎಪಿಎಫ್ ಸಿಬ್ಬಂದಿಯನ್ನು ನಿಯೋಜಿಸಿದ್ದಾರೆ. ಆ ಪ್ರದೇಶದಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸಿದ್ದಾರೆ.

ಪಶ್ಚಿಮ ಬಂಗಾಳ ಚುನಾವಣೆ ಪ್ರಚಾರದ ವೇಳೆ ಮೋದಿ ಅವರು ವಿಕ್ರಮ್ ಕುಮಾರ್ ಅವರ ಅಂಗಡಿಯಲ್ಲಿ ಜಾಲ್‌ಮುರಿ ತಿಂದಿದ್ದರು (ಪಿಟಿಐ ಸಂಗ್ರಹ ಚಿತ್ರ)

'ಯುವಜನರಿಗಾಗಿ ಅಂತರರಾಷ್ಟ್ರೀಯ ಒಪ್ಪಂದ'

ನವದೆಹಲಿ (ಪಿಟಿಐ): ಭಾರತದ ಅಂತರರಾಷ್ಟ್ರೀಯ ಒಪ್ಪಂದಗಳನ್ನು ದೇಶದ ಯುವಜನರಿಗಾಗಿ ರೂಪಿಸಲಾಗಿದೆ. ದೇಶದ ಯುವ ಜನರಿಗೆ ಉದ್ಯೋಗ ಮತ್ತು ಜಾಗತಿಕ ಮಾನ್ಯತೆ ಸಿಗುವಂತೆ ಮಾಡುವುದೇ ಇದರ ಉದ್ದೇಶ ಎಂದು ಪ್ರಧಾನಿ ಮೋದಿ ಶನಿವಾರ ಹೇಳಿದರು.

ದೇಶದ 47 ಸ್ಥಳಗಳಲ್ಲಿ ನಡೆದ 19ನೇ 'ರೋಜ್‌ಗಾರ್ ಮೇಳ'ದಲ್ಲಿ 51,000 ಯುವಜನರಿಗೆ ವರ್ಚುವಲ್ ಆಗಿ ಕೇಂದ್ರ ಸರ್ಕಾರಿ ಉದ್ಯೋಗಗಳ ನೇಮಕಾತಿ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು. 'ರೋಜ್‌ಗಾರ್ ಮೇಳ' ಆರಂಭವಾದಾಗಿನಿಂದ ದೇಶದಾದ್ಯಂತ ನಡೆದ ಇಂತಹ 18 ಕಾರ್ಯಕ್ರಮಗಳ ಮೂಲಕ 12 ಲಕ್ಷ ನೇಮಕಾತಿ ಪತ್ರಗಳನ್ನು ನೀಡಲಾಗಿದೆ.

ತಾವು ಇತ್ತೀಚೆಗೆ ಕೈಗೊಂಡ ಐದು ದೇಶಗಳ ಪ್ರವಾಸದ ಒಳನೋಟಗಳನ್ನು ಹಂಚಿಕೊಂಡರು.

ನೆದರ್ಲೆಂಡ್ಸ್ ಜೊತೆ ಅರೆವಾಹಕಗಳು, ನೀರು, ಕೃಷಿ ಮತ್ತು ಸುಧಾರಿತ ಉತ್ಪಾದನೆ; ಸ್ವೀಡನ್ ಜೊತೆ ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಡಿಜಿಟಲ್ ನಾವೀನ್ಯ ಕ್ಷೇತ್ರಗಳಲ್ಲಿ ಸಹಕಾರ; ನಾರ್ವೆ ಜೊತೆ ಹಸಿರು ತಂತ್ರಜ್ಞಾನ ಮತ್ತು ಕಡಲ ಸಹಕಾರ; ಯುಎಇ ಜೊತೆ ಇಂಧನ ಮತ್ತು ತಂತ್ರಜ್ಞಾನ ಕಾರ್ಯತಂತ್ರದ ಪಾಲುದಾರಿಕೆ; ಇಟಲಿಯೊಂದಿಗೆ ರಕ್ಷಣೆ, ಖನಿಜಗಳು, ವಿಜ್ಞಾನ, ತಂತ್ರಜ್ಞಾನದ ಕುರಿತು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದರು.

ದೇಶದ ಅಭಿವೃದ್ಧಿಯ ಪಯಣದಲ್ಲಿ ಪಾಲು

ಇಂದು ನೇಮಕಗೊಂಡ ಯುವಜನರು ದೇಶದ ಅಭಿವೃದ್ಧಿಯ ಪ್ರಯಾಣದಲ್ಲಿ ಪ್ರಮುಖ ಪಾಲುದಾರರಾಗಲಿದ್ದಾರೆ ಎಂದು ಮೋದಿ ತಿಳಿಸಿದರು.

'ಈ ಎಲ್ಲರೂ ರೈಲ್ವೆ, ಬ್ಯಾಂಕಿಂಗ್, ರಕ್ಷಣೆ, ಆರೋಗ್ಯ, ಶಿಕ್ಷಣ ಮತ್ತು ಇತರ ಹಲವು ವಲಯಗಳಲ್ಲಿ ತಮ್ಮ ಹೊಸ ಜವಾಬ್ದಾರಿಗಳನ್ನು ನಿರ್ವಹಿಸಲಿದ್ದಾರೆ' ಎಂದು ಹೇಳಿದರು.

'ಮುಂಬರುವ ವರ್ಷಗಳಲ್ಲಿ, ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವ ಸಂಕಲ್ಪವನ್ನು ಈಡೇರಿಸುವಲ್ಲಿ ನೀವೆಲ್ಲರೂ ಪ್ರಮುಖ ಪಾತ್ರ ವಹಿಸಲಿದ್ದೀರಿ. ಈ ಸಾಧನೆಗಳಾಗಿ ನಿಮ್ಮನ್ನು ಮತ್ತು ನಿಮ್ಮ ಕುಟುಂಬ ಸದಸ್ಯರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ' ಎಂದರು.

'ನೋಂದಣಿ ಆಗದ ಉಯಿಲಿನ ನೈಜತೆ ಶಂಕಿಸಲಾಗದು'

ನವದೆಹಲಿ: ನೋಂದಣಿ ಆಗಿಲ್ಲ ಎಂಬ ಕಾರಣಕ್ಕೆ ವಿಲ್‌ನ (ಉಯಿಲು) ನೈಜತೆಯನ್ನು ಅನುಮಾನದಿಂದ ನೋಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

ಉತ್ತರಾಧಿಕಾರಿಗಳನ್ನು ಹೊರಗಿಟ್ಟು ಉಯಿಲು ಮಾಡಿದ್ದರೂ ಅದನ್ನು ಅನುಮಾನಿಸಲಾಗದು. ಸಾಮಾನ್ಯ ಉತ್ತರಾಧಿಕಾರದ ಹಕ್ಕನ್ನು ಬದಲಾಯಿಸುವುದೇ ಉಯಿಲು ಮಾಡಿದವರ ಉದ್ದೇಶ ಆಗಿರುವ ಸಾಧ್ಯತೆ ಇದೆ ಎಂದು ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ವಿಜಯ್ ಬಿಷ್ಣೋಯ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿದೆ.

ಉಯಿಲನ್ನು (ವಿಲ್) ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು ಎಂಬ ಕಾನೂನೇನೂ ಇಲ್ಲ ಎಂಬುದನ್ನು ಕೋರ್ಟ್ ಗಮನಿಸಿದೆ. ಮುಂಬೈನ ಪ್ರತಿಷ್ಠಿತ ಕಂಪನಿಗಳ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದ ಬಿ. ಶೀನಾ ನಾಯರಿ ಅವರು, ತಮ್ಮ ಕೃಷಿ, ಇತರ ಆಸ್ತಿಗಳನ್ನು ಕರ್ನಾಟಕದಲ್ಲಿರುವ ತಮ್ಮ ಸಹೋದರಿ ಲಕ್ಷ್ಮಿ ನಾಯರ್ತಿ ಅವರಿಗೆ 1983ರಲ್ಲಿ ಬಿಟ್ಟುಕೊಟ್ಟ ಉಯಿಲಿನ ಸಿಂಧುತ್ವವನ್ನು ನ್ಯಾಯಾಲಯವು ಎತ್ತಿ ಹಿಡಿದಿದೆ.

ಶ್ವೇತಭವನಕ್ಕೆ ಬನ್ನಿ– ಮೋದಿಗೆ ರುಬಿಯೊ ಆಹ್ವಾನ

ಒಂದನೇ ಪುಟದಿಂದ...

ಜಾಗತಿಕ ಶಾಂತಿ–ಸುರಕ್ಷತೆಗೆ ಆದ್ಯತೆ: ರುಬಿಯೊ ಅವರೊಂದಿಗಿನ ಮಾತುಕತೆ ಬಗ್ಗೆ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ.

'ನಾವಿಬ್ಬರೂ ಭಾರತ–ಅಮೆರಿಕದ ನಡುವಿನ ಜಾಗತಿಕ ರಚನಾತ್ಮಕ ಪಾಲುದಾರಿಕೆ ಬಗ್ಗೆ ಚರ್ಚಿಸಿದ್ದೇವೆ. ಪ್ರಾದೇಶಿಕ, ಜಾಗತಿಕ ಶಾಂತಿ ಮತ್ತು ಸುರಕ್ಷತೆ ವಿಚಾರಗಳಿಗೆ ಆದ್ಯತೆ ನೀಡಿದ್ದೇವೆ' ಎಂದು ಹೇಳಿದ್ದಾರೆ.

'ರಕ್ಷಣೆ, ವ್ಯಾಪಾರ, ಹೂಡಿಕೆ, ತಂತ್ರಜ್ಞಾನ, ಇಂಧನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರದ ಸುಸ್ಥಿರ ಬೆಳವಣಿಗೆ ಬಗ್ಗೆ ರುಬಿಯೊ ವಿವರಿಸಿದರು' ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಇಂಧನ ನೆರವು: ಭಾರತಕ್ಕೆ ಅಗತ್ಯ ಇರುವ ತೈಲವನ್ನು ಒದಗಿಸಲು ಅಮೆರಿಕ ಸಿದ್ಧವಿದೆ. ಭಾರತಕ್ಕೆ ಇಂಧನ ಉತ್ಪನ್ನಗಳನ್ನು ಪೂರೈಸುವಷ್ಟು ಸಾಮರ್ಥ್ಯ ನಮ್ಮಲ್ಲಿದೆ ಎಂಬ ಅಂಶವನ್ನೂ ರುಬಿಯೊ ತಿಳಿಸಿದ್ದಾರೆ.

ಜೈಶಂಕರ್– ಮಾರ್ಕೊ ರುಬಿಯೊ ಚರ್ಚೆ ಇಂದು

ಮಾರ್ಕೊ ರುಬಿಯೊ ಅವರು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೊಂದಿಗೆ ಭಾನುವಾರ ದ್ವಿಪಕ್ಷೀಯ ಸಂಬಂಧಗಳ ಕುರಿತು ವಿಸ್ತೃತ ಚರ್ಚೆ ನಡೆಸಲಿದ್ದಾರೆ.

ಕಳೆದ ಹಲವು ತಿಂಗಳುಗಳಿಂದ ಭಾರತ-ಅಮೆರಿಕದ ದ್ವಿಪಕ್ಷೀಯ ಸಂಬಂಧದಲ್ಲಿ ಉಂಟಾಗಿರುವ ಬಿಕ್ಕಟ್ಟುಗಳನ್ನು ನಿವಾರಿಸುವ ಗುರಿಯನ್ನು ಈ ಭೇಟಿ ಹೊಂದಿದೆ.

ಇಬ್ಬರ ಭೇಟಿಯಲ್ಲಿ ಇಂಧನ, ವ್ಯಾಪಾರ, ಹೂಡಿಕೆ, ಸೂಕ್ಷ್ಮ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಭಾರತ– ಅಮೆರಿಕ ಪಾಲುದಾರಿಕೆ ವಿಚಾರಗಳು ಚರ್ಚೆಗೆ ಬರಲಿವೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧ, ಇಂಧನ ಪೂರೈಕೆ, ಆರ್ಥಿಕತೆ ಮೇಲೆ ಯುದ್ಧದ ಪರಿಣಾಮಗಳ ಕುರಿತೂ ಉಭಯ ನಾಯಕರು ಸಮಾಲೋಚನೆ ನಡೆಸುವ ಸಾಧ್ಯತೆ ಇದೆ.

ಐದು ವಾರಗಳ ಹಿಂದೆ ಭಾರತದ ವಿದೇಶಾಂಗ ಇಲಾಖೆ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಅಮೆರಿಕಕ್ಕೆ ಮೂರು ದಿನಗಳ ಭೇಟಿ ನೀಡಿ ಬಿಕ್ಕಟ್ಟು ಸುಧಾರಣೆ ಪ್ರಯತ್ನ ಮಾಡಿದ್ದರು. ಅದಾದ ಐದು ವಾರಗಳ ನಂತರ ರುಬಿಯೊ ಅವರು ಭಾರತಕ್ಕೆ ಆಗಮಿಸಿದ್ದಾರೆ.

ನವದೆಹಲಿಯಲ್ಲಿ ಮಂಗಳವಾರ ನಡೆಯುವ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲೂ ರುಬಿಯೊ ಪಾಲ್ಗೊಳ್ಳಲಿದ್ದಾರೆ.

ಕೋಲ್ಕತ್ತದ ಮದರ್ ತೆರೆಸಾ ಕೇಂದ್ರಕ್ಕೆ ಭೇಟಿ

ಕೋಲ್ಕತ್ತಕ್ಕೆ ಶನಿವಾರ ಬೆಳಿಗ್ಗೆ ಬಂದಿಳಿದ ರುಬಿಯೊ ಅವರು ಸೇಂಟ್ ತೆರೆಸಾ ಅವರ ಧರ್ಮಾರ್ಥ ಸಂಸ್ಥೆಯ ಕೇಂದ್ರ ಕಚೇರಿ 'ಮದರ್ ಹೌಸ್'ಗೆ ಭೇಟಿ ನೀಡಿದರು. ಆನಂತರ ದೆಹಲಿಗೆ ಆಗಮಿಸಿದರು.

ಪತ್ನಿ ಜೀನೆಟ್ ಅವರೊಂದಿಗೆ ಆಗಮಿಸಿದ ರುಬಿಯೊ ಅವರನ್ನು ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಜಿಯೊ ಗೋರ್ ಅವರು ಸ್ವಾಗತಿಸಿದರು.

ಭಾರತಕ್ಕೆ ಬಂದಿಳಿಯುತ್ತಿದ್ದಂತೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ ರುಬಿಯೊ ಅವರು, 'ಇದೊಂದು (ಭಾರತ ಪ್ರವಾಸ) ಅದ್ಭುತ ಭೇಟಿ' ಎಂದಿದ್ದಾರೆ. ಸೋಮವಾರ ಆಗ್ರಾ ಮತ್ತು ಜೈಪುರಕ್ಕೆ ರುಬಿಯೊ ಭೇಟಿ ನೀಡಲಿದ್ದಾರೆ.

ಕಾನ್ಸ್ ಚಲನಚಿತ್ರೋತ್ಸವದಲ್ಲಿ ಮಲಬಾರ್ ಆಭರಣಗಳೊಂದಿಗೆ ಮಿಂಚಿದ ಆಲಿಯಾಭಟ್

ಬೆಂಗಳೂರು: ಬಾಲಿವುಡ್‌ನ ಖ್ಯಾತ ನಟಿ ಆಲಿಯಾ ಭಟ್ 79ನೇ ಕಾನ್ಸ್ ಚಲನಚಿತ್ರೋತ್ಸವದ ರೆಡ್ ಕಾರ್ಪೆಟ್ ಮೇಲೆ ಆಕರ್ಷಕವಾಗಿ ಕಾಣಿಸಿಕೊಳ್ಳುವ ಮೂಲಕ ಜಾಗತಿಕ ವೇದಿಕೆಯಲ್ಲಿ ಭಾರತೀಯ ಆಭರಣ ಕಲಾತ್ಮಕತೆಯನ್ನು ಎತ್ತಿಹಿಡಿದಿದ್ದಾರೆ. ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಸಂಸ್ಥೆಯ ಅತ್ಯಾಕರ್ಷಕ ನೀಲಮಣಿ ಮತ್ತು ವಜ್ರದ ಆಭರಣಗಳನ್ನು ಧರಿಸಿದ್ದ ಆಲಿಯಾ ಜಾಗತಿಕ ವೇದಿಕೆಯಲ್ಲಿ ಎಲ್ಲರ ಗಮನ ಸೆಳೆದಿದ್ದಾರೆ. ಜತೆಗೆ, ವಿನೂತನ ಶೈಲಿಯ ವಿನ್ಯಾಸ, ಅತ್ಯುತ್ತಮ ಕರಕುಶಲತೆಯ ತಮ್ಮ ಅಭಿರುಚಿಯನ್ನು ಜಾಗತಿಕ ವೇದಿಕೆಗೆ ಪರಿಚಯಿಸಿದ್ದಾರೆ. ಪ್ರಸಿದ್ಧ ಸ್ಟೈಲಿಸ್ಟ್ ರಿಯಾ ಕಪೂರ್ ವಿನ್ಯಾಸಗೊಳಿಸಿದ ಕಸ್ಟಮ್ ಉಡುಪುಗಳೊಂದಿಗೆ ಸೂಕ್ತವಾಗಿ ಮ್ಯಾಚ್ ಆಗುವಂತೆ, ಆಲಿಯಾ ಭಟ್ ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್ ಸಂಸ್ಥೆಯ ಸಿಲೋನ್ ನೀಲಮಣಿ ಮತ್ತು ವಜ್ರಗಳ ಆಭರಣಗಳನ್ನು ಧರಿಸಿದ್ದರು. ಅವರ ಆಭರಣಗಳ ಸಂಗ್ರಹದಲ್ಲಿ ವೈಟ್ ಕ್ವಾರ್ಟ್ಸ್ ಬ್ರಿಯೊಲೆಟ್ ಇಯರಿಂಗ್ಸ್, ಸಿಲೋನ್ ಸಫೈರ್ ಓವಲ್ ರಿಂಗ್, ಪಿಯರ್-ಶೇಪ್ಡ್ ಸಿಲೋನ್ ಸಫೈರ್ ರಿಂಗ್, ಪಿಯರ್-ಶೇಪ್ಡ್ ಡೈಮಂಡ್ ಪೆಂಡೆಂಟ್ ಎಲ್ಲರ ಆಕರ್ಷಣೆಯ ಕೇಂದ್ರಬಿಂದುಗಳಾಗಿವೆ. ಈ ಆಭರಣಗಳಲ್ಲಿ ವೈಟ್ ಕ್ವಾರ್ಟ್ಸ್ ಬ್ರಿಯೊಲೆಟ್ ಇಯರಿಂಗ್ಸ್ 3 ಕ್ಯಾರೆಟ್ ತೂಕದ ಪಿಯರ್ ಆಕಾರದ ಈ ಕಿವಿಯೋಲೆಗಳು ಬೆಳಕಿಗೆ ತಕ್ಕಂತೆ ಜಗಮಗಿಸುವ ವಿಶಿಷ್ಟ ಕಟಿಂಗ್ ವಿನ್ಯಾಸವನ್ನು ಹೊಂದಿವೆ. ಸಿಲೋನ್ ಸಫೈರ್ ಓವಲ್ ರಿಂಗ್ ಸಮುದ್ರದ ನೀಲಿ ಆಳವನ್ನು ನೆನಪಿಸುವ 8 ಕ್ಯಾರೆಟ್‌ನ ಓವಲ್ ಆಕಾರದ ಸಿಲೋನ್ ನೀಲಮಣಿ ಉಂಗುರ ಇದಾಗಿದ್ದು, ಇದರ ಸುತ್ತಲೂ ಹೊಳೆಯುವ ವಜ್ರಗಳನ್ನು ಜೋಡಿಸಲಾಗಿದೆ. ಪಿಯರ್-ಶೇಪ್ಡ್ ಸಿಲೋನ್ ಸಫೈರ್ ರಿಂಗ್ ಸಹ ಬೀಳುವ ಮಳೆಹನಿಯಂತೆ ಕಾಣುವ, 8.8 ಕ್ಯಾರೆಟ್ ತೂಕದ ನೀಲಮಣಿ ಉಂಗುರವು ಅತ್ಯಂತ ಆಕರ್ಷಕ ವಿನ್ಯಾಸ ಹೊಂದಿದೆ. ಜತೆಗೆ, ಪಿಯರ್-ಶೇಪ್ಡ್ ಡೈಮಂಡ್ ಪೆಂಡೆಂಟ್ 4 ಕ್ಯಾರೆಟ್ ತೂಕದ ಪಿಯರ್ ಆಕಾರದ ಈ ವಜ್ರದ ಪೆಂಡೆಂಟ್ ಆಲಿಯಾ ಸೌಂದರ್ಯಕ್ಕೆ ಮತ್ತಷ್ಟು ಕಳೆ ನೀಡಿದೆ.

ಜಾಗತಿಕ ವೇದಿಕೆಯಲ್ಲಿ ಭಾರತೀಯ ಹೆಮ್ಮೆ: ಕಾನ್ಸ್ ವೇದಿಕೆಯಲ್ಲಿ ಸಂಸ್ಥೆಯ ಆಭರಣಗಳೊಂದಿಗೆ ಆಲಿಯಾಭಟ್‌ರವರು ಮಿಂಚಿರುವ ಕುರಿತು ಮಾತನಾಡಿದ ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ.ಅಹಮದ್, ಕಾನ್ಸ್ ಚಲನಚಿತ್ರೋತ್ಸವವು ಫ್ಯಾಷನ್, ಕಲೆ ಮತ್ತು ಕರಕುಶಲತೆ ಒಂದಾಗುವ ಜಾಗತಿಕ ವೇದಿಕೆಯಾಗಿದೆ. ಆಲಿಯಾ ಭಟ್ ಅವರೊಂದಿಗಿನ ಈ ಸಹಯೋಗದ ಮೂಲಕ, ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್‌ನ ವಿನ್ಯಾಸದ ಶ್ರೇಷ್ಠತೆ ಹಾಗೂ ಸದಾಕಾಲ ವಿನೂತನ ಸೌಂದರ್ಯ ಒದಗಿಸುವ ಕರಕುಶಲತೆಯ ಶೈಲಿಯನ್ನು ಜಗತ್ತಿಗೆ ಪರಿಚಯಿಸಲು ನಾವು ಪ್ರಯತ್ನಿಸಿದ್ದೇವೆ' ಎಂದು ಹೆಮ್ಮೆಯಿಂದ ತಿಳಿಸಿದ್ದಾರೆ.

ಮಲಬಾರ್ ಸಾಧನೆ: 1993ರಲ್ಲಿ ಸ್ಥಾಪಿತವಾದ ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್, ಪ್ರಸ್ತುತ ಜಗತ್ತಿನ 5ನೇ ಅತಿ ದೊಡ್ಡ ಜ್ಯುವೆಲ್ಲರಿ ರಿಟೇಲರ್ ಸಂಸ್ಥೆಯಾಗಿ ಬೆಳೆದಿದೆ. 9.41 ಬಿಲಿಯನ್ ಡಾಲರ್ ವಾರ್ಷಿಕ ವಹಿವಾಟು ಹೊಂದಿರುವ ಈ ಸಂಸ್ಥೆಯು ಭಾರತ, ಮಧ್ಯಪ್ರಾಚ್ಯ, ಯುಎಸ್‌ಎ, ಯುಕೆ ಸೇರಿದಂತೆ 14 ದೇಶಗಳಲ್ಲಿ 445ಕ್ಕೂ ಹೆಚ್ಚು ಶೋರೂಮ್‌ಗಳನ್ನು ಹೊಂದಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಸಾವಿರ ಎಕರೆ ಸರ್ಕಾರಿ ಭೂ ಕಬಳಿಕೆ

ಒಂದನೇ ಪುಟದಿಂದ...

320 ಎಕರೆ ಸರ್ಕಾರಿ ಭೂಮಿ ಕಬಳಿಕೆಯಾಗಿ, ಸರ್ಕಾರಕ್ಕೆ ₹200 ಕೋಟಿ ನಷ್ಟವಾಗಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ಅಂದಾಜಿಸಲಾಗಿತ್ತು. ಈಗ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಎಂಬ ಲೆಕ್ಕಾಚಾರವಿದೆ.

ಏನಿದು ಪ್ರಕರಣ: ಸರ್ಕಾರಿ ಜಮೀನು ಅಕ್ರಮವಾಗಿ ಮಂಜೂರು ಮಾಡಿ, ಅಧಿಕಾರ ದುರ್ಬಳಕೆ ಮಾಡಿಕೊಂಡ ಬಗ್ಗೆ ಸಾರ್ವಜನಿಕರ ದೂರುಗಳನ್ನು ಆಧರಿಸಿ ಮಂಡ್ಯ ಲೋಕಾಯುಕ್ತ ಪೊಲೀಸರು ಜ.13ರಂದು, ನಾಗಮಂಗಲ ತಾಲ್ಲೂಕು ಕಚೇರಿ, ಆರೋಪಿತ ನೌಕರರ ಮನೆಗಳು, ಜೆರಾಕ್ಸ್ ಸೆಂಟರ್, ಮೈಸೂರಿನ ಅಗ್ರಹಾರದ 'ಹೋಟೆಲ್ ರಾಜರತ್ನ' ಸೇರಿ ಏಳು ಕಡೆ ಏಕಕಾಲದಲ್ಲಿ ಕಾರ್ಯಾಚರಣೆ ನಡೆಸಿದ್ದರು.

ಇಬ್ಬರು ಶಿರಸ್ತೇದಾರರು, ನಾಲ್ವರು ದ್ವಿತೀಯ ದರ್ಜೆ ಸಹಾಯಕರು ಸೇರಿ 10 ಆರೋಪಿಗಳ ವಿರುದ್ಧ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. 7 ಆರೋಪಿಗಳನ್ನು ಬಂಧಿಸಿ, 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಸದ್ಯ ಎಲ್ಲರೂ ಜಾಮೀನಿನ ಮೇಲೆ ಹೊರಬಂದಿದ್ದಾರೆ. ಪ್ರಕರಣ ಸಂಬಂಧ 700 ಮಂದಿಗೆ ನೋಟಿಸ್ ಕೊಡಲು ಸಿದ್ಧತೆ ಮಾಡಿಕೊಂಡಿದ್ದು, 70ಕ್ಕೂ ಹೆಚ್ಚು ಮಂದಿಗೆ ನೋಟಿಸ್ ನೀಡಲಾಗಿದೆ.

6 ತಿಂಗಳೊಳಗೆ ತನಿಖೆ ಪೂರ್ಣಗೊಳಿಸಲು ಎಎಸ್ಪಿ ಅವರಿಗೆ ಗಡುವು ನೀಡಲಾಗಿದೆ. ನಾವೂ ನಿರಂತರ ನಿಗಾ ಇಟ್ಟಿದ್ದೇವೆ. ವರದಿ ಸರಿಯಾಗಿ ಕೊಡದಿದ್ದರೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ

ಬಿ.ವೀರಪ್ಪ, ಉಪ ಲೋಕಾಯುಕ್ತ–2

ಪ್ರಭಾವಿಗಳು, ರಾಜಕೀಯ ಮುಖಂಡರ ಕೈವಾಡ ಇರುವುದರಿಂದ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು. ಈ ಹಗರಣವನ್ನು ಪೊಲೀಸರು ಭೇದಿಸುವುದು ಕಷ್ಟ

ಕೆ.ಆರ್.ರವೀಂದ್ರ
ಸಾಮಾಜಿಕ ಕಾರ್ಯಕರ್ತ, ಮಂಡ್ಯ

ಡಿಜಿಟಲ್ ಮೌಲ್ಯಮಾಪನ: ಆತಂಕ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ 12ನೇ ತರಗತಿ ಉತ್ತರ ಪತ್ರಿಕೆಗಳ ಡಿಜಿಟಲ್ ಮೌಲ್ಯಮಾಪನದ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಸಿಪಿಎಂನ ರಾಜ್ಯಸಭೆ ಸದಸ್ಯ ಜಾನ್ ಬ್ರಿಟಾಸ್, ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಮಧ್ಯಪ್ರವೇಶ ಮಾಡುವಂತೆ ಆಗ್ರಹಿಸಿದ್ದಾರೆ.

ಕೇಂದ್ರ ಸಚಿವರಿಗೆ ಪತ್ರ ಬರೆದಿರುವ ಅವರು, ಸಿಬಿಎಸ್‌ಇ 12ನೇ ತರಗತಿಯ ಆನ್ ಸ್ಕ್ರೀನ್ ಮಾರ್ಕಿಂಗ್ ಸಿಸ್ಟಂ (ಒಎಸ್‌ಎಂ) ಆತಂಕ ಹೆಚ್ಚಿಸಿದೆ. ಮಬ್ಬಾದ ಉತ್ತರ ಪತ್ರಿಕೆಗಳನ್ನು ಸ್ಕ್ಯಾನ್ ಮಾಡುವುದರಿಂದ ಮೌಲ್ಯಮಾಪನ ಅಸಮಂಜಸವಾಗಿದೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

23-05-2026

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1650)
ಒಂದು ವಾರದ ಡೆಲಿವರಿ	1655 (1645)
ಪಾಮ್ ವಾರದ ಡೆಲಿವರಿ	1498 (1493)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,000 (1,57,700)
ಬೆಳ್ಳಿ ಕೆ.ಜಿಗೆ	2,65,000 (2,66,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23000
ಎಸಿ	₹13000
ಆರ್‌ಪಿ	₹18300
ಆರ್‌ಸಿ	₹9750

‘ಭವ್ಯ’ ಯೋಜನೆಗೆ ಅರ್ಜಿ ಸಲ್ಲಿಕೆ ಶುರು

ಅರ್ಜಿ ಸಲ್ಲಿಸುವಂತೆ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಆಹ್ವಾನ

ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ತಯಾರಿಕಾ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಆರಂಭಿಸಲಾಗಿರುವ ‘ಭಾರತ್ ಔದ್ಯೋಗಿಕ್ ವಿಕಾಸ್ ಯೋಜನೆ’ (ಭವ್ಯ) ಅಡಿ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸಲು ರಾಜ್ಯಗಳು ಅರ್ಜಿ ಸಲ್ಲಿಸಲು ನಾಲ್ಕು ತಿಂಗಳ ಅವಕಾಶ ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ಹೇಳಿದೆ.

2026-27ರಿಂದ 2031-32 ರವರೆಗಿನ ಅವಧಿಯಲ್ಲಿ ಬಳಕೆಗೆ ಸಿದ್ಧವಿರುವ 100 ಕೈಗಾರಿಕಾ ಪಾರ್ಕ್‌ಗಳನ್ನು ಈ ಯೋಜನೆಯ ಅಡಿ ದೇಶದ ವಿವಿಧೆಡೆ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ₹33,660 ಕೋಟಿ ವ್ಯಯಿಸಲು ಮಾರ್ಚ್ 18ರಂದು ನಡೆದ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ.

ಮೊದಲ ಹಂತದಲ್ಲಿ 50 ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತದೆ. ಉಳಿದ 50 ಪಾರ್ಕ್‌ಗಳಿಗೆ ಮುಂದಿನ ಹಂತಗಳಲ್ಲಿ ಅನುಮೋದನೆ ನೀಡಲಾಗುತ್ತದೆ. ರಾಜ್ಯಗಳು ಮತ್ತು ಖಾಸಗಿ ವಲಯದ ಪಾಲುದಾರರ ಸಹಭಾಗಿತ್ವದಲ್ಲಿ ಈ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಸ್ಪರ್ಧಾತ್ಮಕ ವಿಧಾನದ ಮೂಲಕ ರಾಜ್ಯಗಳನ್ನು ಆಯ್ಕೆ ಮಾಡಲಾಗುವುದು. ಮುಂದಿನ ಮೂರು ವರ್ಷದಲ್ಲಿ 50 ಪಾರ್ಕ್‌ಗಳು ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ವಿಶ್ವದರ್ಜೆಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ಮಾಡುವುದು, ತಯಾರಿಕಾ ಘಟಕಗಳಲ್ಲಿ ಗರಿಷ್ಠ ಮಟ್ಟದ ಉತ್ಪಾದನೆಯನ್ನು ಸಾಧ್ಯವಾಗಿಸುವ ಗುರಿಯನ್ನು ಯೋಜನೆಯು ಹೊಂದಿದೆ.

ಈ ಯೋಜನೆಯು ಬಳಕೆಗೆ ಸಿದ್ಧವಾಗಿರುವ ಕೈಗಾರಿಕಾ ಮೂಲ ಸೌಕರ್ಯವನ್ನು ಬಯಸುವ ತಯಾರಿಕಾ ಘಟಕಗಳಿಗೆ, ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ, ನವೋದ್ಯಮಗಳಿಗೆ, ಜಾಗತಿಕ ಹೂಡಿಕೆದಾರರಿಗೆ ನೇರವಾಗಿ ಅನುಕೂಲ ಮಾಡಿಕೊಡಲಿದೆ.

‘ರೂಪಾಯಿ: ಸರ್ಕಾರ ಮಧ್ಯಪ್ರವೇಶವಿಲ್ಲ’

‘ಕರೆನ್ಸಿ ವಿನಿಮಯ ದರವನ್ನು ಮಾರುಕಟ್ಟೆ ಶಕ್ತಿಗಳು ನಿರ್ಧರಿಸುತ್ತವೆ. ಜೊತೆಗೆ ಹಲವಾರು ಜಾಗತಿಕ ಅಂಶಗಳು ಇದರ ಮೇಲೆ ಪ್ರಭಾವ ಬೀರುತ್ತವೆ. ಕರೆನ್ಸಿ ವಿನಿಮಯ ದರದಲ್ಲಿ ಸರ್ಕಾರದ ಮಧ್ಯಪ್ರವೇಶ ಇಲ್ಲ’ ಎಂದು ಪೀಯೂಷ್ ಗೋಯಲ್ ಹೇಳಿದ್ದಾರೆ. ಆದರೆ, ಸರ್ಕಾರವು ಸರಕು ಮತ್ತು ಸೇವೆಗಳ ರಫ್ತಿಗೆ ಉತ್ತೇಜನ ನೀಡಲು, ಆಮದು ಮೇಲಿನ ಅವಲಂಬನೆ ಕಡಿಮೆ ಮಾಡಲು ಮತ್ತು ದೇಶದಲ್ಲಿ ಹೆಚ್ಚಿನ ಹೂಡಿಕೆಗೆ ಉತ್ತೇಜನ ನೀಡಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ತಿಳಿಸಿದ್ದಾರೆ.

ಕಳೆದ ಎರಡರಿಂದ ಮೂರು ದಿನಗಳ ವಹಿವಾಟಿನಲ್ಲಿ ರೂಪಾಯಿ ಮೌಲ್ಯ ಏರಿಕೆಯಾಗಿದೆ. ಇವೆಲ್ಲವೂ ಮಾರುಕಟ್ಟೆ ಆಧಾರಿತ ಅಂಶಗಳಾಗಿವೆ ಎಂದು ಹೇಳಿದ್ದಾರೆ. ಶುಕ್ರವಾರದ ವಹಿವಾಟಿನ ಅಂತ್ಯದ ವೇಳೆಗೆ ಡಾಲರ್ ಎದುರು ರೂಪಾಯಿ ಮೌಲ್ಯವು 95.60ಕ್ಕೆ ಕೊನೆಗೊಂಡಿತ್ತು.

ಒಂದು ಕಾಲದಲ್ಲಿ ಏಷ್ಯಾದ ರಾಷ್ಟ್ರಗಳ ಪೈಕಿ ಹೆಚ್ಚು ಸ್ಥಿರವಾದ ಕರೆನ್ಸಿಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದ್ದ ರೂಪಾಯಿ ಮೌಲ್ಯ, ಈ ವರ್ಷ ಬಹಳಷ್ಟು ಕುಸಿದಿದೆ. ಹೆಚ್ಚುತ್ತಿರುವ ಕಚ್ಚಾ ತೈಲದ ದರ, ವಿದೇಶಿ ಬಂಡವಾಳದ ಹೊರಹರಿವು, ವ್ಯಾಪಾರ ಕೊರತೆ ಅಂತರದ ಏರಿಕೆ ಮತ್ತು ಡಾಲರ್ ಮೌಲ್ಯ ಏರಿಕೆಯಿಂದ ರೂಪಾಯಿ ಮೌಲ್ಯ ಈ ವರ್ಷ ತೀವ್ರವಾಗಿ ಕುಸಿದಿದೆ.

ಸುದ್ದಿ 2 ನಿಮಿಷ

‘ಇಂಧನ ಕೊರತೆ ಇಲ್ಲ, ಕೆಲವೆಡೆ ಮಾತ್ರ ಸಮಸ್ಯೆ’

ನವದೆಹಲಿ (ಪಿಟಿಐ): ದೇಶದಲ್ಲಿ ಇಂಧನ ಪೂರೈಕೆಯಲ್ಲಿ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಕೆಲವು ಬಂಕ್‌ಗಳಲ್ಲಿ ಇಂಧನ ಖಾಲಿ ಆಗಿದ್ದಕ್ಕೆ ಸ್ಥಳೀಯ ಸಂಗತಿಗಳು ಕಾರಣ ಎಂದು ಹೇಳಿದೆ.

ಕೆಲವೆಡೆ ಇಂಧನ ಖಾಲಿ ಆಗಿದ್ದುದು ತಾತ್ಕಾಲಿಕ ಸಮಸ್ಯೆ ಮಾತ್ರ. ಆಯಾ ಸ್ಥಳಗಳಿಗೆ ಸಂಬಂಧಿಸಿದ ಬೇಡಿಕೆ–ಪೂರೈಕೆಯಲ್ಲಿನ ವ್ಯತ್ಯಾಸವು ಇದಕ್ಕೆ ಕಾರಣ ಎಂದು ಕಂಪನಿ ಹೇಳಿದೆ.

ಬೆಳೆ ಕೊಯ್ಲಿನ ಸಂದರ್ಭದಲ್ಲಿ ಕೆಲವೆಡೆ ಡೀಸೆಲ್ ಬಳಕೆ ಹೆಚ್ಚಾಗಿದೆ. ಖಾಸಗಿ ಬಂಕ್‌ಗಳಲ್ಲಿ ಬೆಲೆ ಜಾಸ್ತಿ ಇರುವ ಕಾರಣದಿಂದಾಗಿ ಸರ್ಕಾರಿ ಸ್ವಾಮ್ಯದ ಕಂಪನಿಗಳ ಬಂಕ್‌ಗಳಿಗೆ ಗ್ರಾಹಕರು ಬರುತ್ತಿದ್ದಾರೆ. ಕೈಗಾರಿಕಾ ಬಳಕೆ ಉದ್ದೇಶದ ಡೀಸೆಲ್ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ದರಕ್ಕೆ ಅನುಗುಣವಾಗಿ ಇರುವ ಕಾರಣದಿಂದಾಗಿ ಬೃಹತ್ ಪ್ರಮಾಣದಲ್ಲಿ ಡೀಸೆಲ್ ಬಳಸುವ ಸಾಂಸ್ಥಿಕ ಬಳಕೆದಾರರು ಕೂಡ ಬಂಕ್‌ಗಳ ಕಡೆ ಬರುತ್ತಿರುವುದರಿಂದಾಗಿ ಬೇಡಿಕೆ ಜಾಸ್ತಿ ಆಗಿದೆ ಎಂದು ಅದು ಹೇಳಿದೆ.

ಮೇ 1ರಿಂದ 22ರವರೆಗಿನ ಅವಧಿಯಲ್ಲಿ ದೇಶದಲ್ಲಿ ಪೆಟ್ರೋಲ್ ಮಾರಾಟವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 14ರಷ್ಟು ಜಾಸ್ತಿ ಆಗಿದೆ, ಡೀಸೆಲ್ ಮಾರಾಟವು ಶೇ 18ರಷ್ಟು ಹೆಚ್ಚಾಗಿದೆ. ಅಂದರೆ ಬೇಡಿಕೆಯು ಅಸಾಮಾನ್ಯವಾದ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ಬೇಡಿಕೆಗೆ ಅನುಗುಣವಾಗಿ ಇಂಧನ ಪೂರೈಕೆ ಮಾಡಲಾಗಿದೆ ಎಂದು ಕಂಪನಿ ಮಾಹಿತಿ ನೀಡಿದೆ.

ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಕಂಪನಿಗಳ ಬಳಿ ಇಂಧನ ದಾಸ್ತಾನು ಸಾಕಷ್ಟಿದೆ. ಕೆಲವೆಡೆ ಪೂರೈಕೆಯಲ್ಲಿ ಆಗಿರುವ ವ್ಯತ್ಯಾಸವನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಕೂಡ ಅದು ಹೇಳಿದೆ.

ಸಂಸತ್ ಭದ್ರತೆ ಉಲ್ಲಂಘನೆ: 4ನೇ ಪೂರಕ ಆರೋಪಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): 2023ರ ಸಂಸತ್ ಭದ್ರತೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕನೇ ಪೂರಕ ಆರೋಪ ಪಟ್ಟಿಯನ್ನು ದೆಹಲಿ ಹೈಕೋರ್ಟ್‌ಗೆ ಶನಿವಾರ ಸಲ್ಲಿಸಲಾಯಿತು.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅಮಿತ್ ಬನ್ಸಲ್ ಅವರು, ‘ಆರೋಪಿಗಳಾದ ನೀಲಂ ರಾನೋಲಿಯಾ ಮತ್ತು ಅಮೋಲ್ ಧನರಾಜ್ ಶಿಂದೆ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ 13,967 ಪುಟಗಳಿರುವ ಪೂರಕ ಆರೋಪ ಪಟ್ಟಿಯನ್ನು ತನಿಖಾಧಿಕಾರಿ ಸಲ್ಲಿಸಿದ್ದಾರೆ. ದಾಖಲೆಗಳ ಪರಿಶೀಲನೆ ಸೇರಿದಂತೆ ಪ್ರಕರಣದ ಮುಂದಿನ ವಿಚಾರಣೆಯನ್ನು ಮೇ 29ರಂದು ನಡೆಸಲಾಗುವುದು’ ಎಂದು ಹೇಳಿದರು.

2023ರ ಡಿಸೆಂಬರ್ 13ರಂದು ಸಾಗರ್ ಶರ್ಮಾ ಮತ್ತು ಮನೋರಂಜನ್ ಡಿ. ಎಂಬವರು ಲೋಕಸಭೆಯ ವೀಕ್ಷಕರ ಗ್ಯಾಲರಿಗೆ ಪ್ರವೇಶಿಸಿ, ಘೋಷಣೆಗಳನ್ನು ಕೂಗುತ್ತಾ ‘ಸ್ಮೋಕ್ ಕ್ಯಾನ್’ ಹಾರಿಸಿ ದಾಂದಲೆ ಎಬ್ಬಿಸಿದ್ದರು. ಸಂಸತ್ ಹೊರಗೆ ಶಿಂದೆ ಮತ್ತು ರನೋಲಿಯಾ ಘೋಷಣೆ ಕೂಗುತ್ತಾ ಬಣ್ಣದ ಹೊಗೆ ಮೂಡುವಂತೆ ಮಾಡಿದ್ದರು.

ಸಾಂಸ್ಥಿಕ ಬಳಕೆದಾರರು ಬಂಕ್‌ಗಳಿಂದ ಡೀಸೆಲ್ ಖರೀದಿಸುತ್ತಿರುವ ಕಾರಣಕ್ಕೆ ಇಂಧನ ಅಭಾವ

ಇಂಧನ ಪೂರೈಕೆ ವ್ಯತ್ಯಯ: ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೈಗಾರಿಕೆಗಳು, ದೂರಸಂಪರ್ಕ ನೆಟ್‌ವರ್ಕ್ ಟವರ್ ನಿರ್ವಾಹಕರು, ಮಾಲ್‌ಗಳಂತಹ ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಬಂಕ್‌ಗಳಿಂದ ಡೀಸೆಲ್ ಖರೀದಿಸುತ್ತಿರುವ ಕಾರಣಕ್ಕೆ, ಇಂಧನ ಅಭಾವದ ಸ್ಥಿತಿ ತಲೆದೋರುತ್ತಿದೆ’ ಎಂದು ಪ್ರಧಾನಿ ಕಾರ್ಯಾಲಯಕ್ಕೆ ಇಂಡಿಯನ್ ಆಯಿಲ್ ಡೀಲರ್ಸ್ ಸಂಘ ಪತ್ರ ಬರೆದಿದೆ.

‘ಬಂಕ್‌ಗಳಲ್ಲಿ ಮಾರಾಟವಾಗುವ ಡೀಸೆಲ್ ಬೆಲೆ ₹92– ₹95ರಷ್ಟು (ಪ್ರತಿ ಲೀಟರ್‌ಗೆ) ಇದೆ. ಸಾಂಸ್ಥಿಕ ಬಳಕೆದಾರರು ತೈಲ ಕಂಪನಿಗಳಿಂದಲೇ ನೇರವಾಗಿ ಡೀಸೆಲ್ ಖರೀದಿಸಬೇಕು ಎಂಬ ನಿಬಂಧನೆಯಿದ್ದು, ಅಲ್ಲಿ ಪ್ರತಿ ಲೀಟರ್‌ನ ಬೆಲೆ ₹127–₹128ರಷ್ಟು ಇದೆ. ಬಂಕ್‌ಗಳಲ್ಲಿ ಖರೀದಿಸಿದರೆ, ಪ್ರತಿ ಲೀಟರ್ ಮೇಲೆ ಸುಮಾರು ₹30ರಷ್ಟು ಉಳಿತಾಯವಾಗುತ್ತದೆ. ಈ ಕಾರಣದಿಂದ ಸಾಂಸ್ಥಿಕ ಬಳಕೆದಾರರು ಬಂಕ್‌ಗಳಲ್ಲೇ ಖರೀದಿಸುತ್ತಿದ್ದಾರೆ’ ಎಂದು ಸಂಘವು ತನ್ನ ಪತ್ರದಲ್ಲಿ ವಿವರಿಸಿದೆ.

‘ಸಾಂಸ್ಥಿಕ ಬಳಕೆದಾರರು ಬಂಕ್‌ಗಳಲ್ಲಿ ಡೀಸೆಲ್ ಖರೀದಿಸುತ್ತಿರುವ ಕಾರಣದಿಂದ, ಅಂತಹ ಬಂಕ್‌ಗಳಲ್ಲಿ ವಾಡಿಕೆಗಿಂತ ಹೆಚ್ಚು ಇಂಧನ ಮಾರಾಟವಾಗುತ್ತಿದೆ. ಹಿಂದಿನ ಮಾರಾಟ ಪ್ರಮಾಣ ಮತ್ತು ಈಗಿನ ಮಾರಾಟ ಪ್ರಮಾಣದಲ್ಲಿ ಭಾರಿ ವ್ಯತ್ಯಾಸ ಇರುವುದರಿಂದ ಕಂಪನಿಯು, ಬಂಕ್‌ಗಳ ವಹಿವಾಟಿನ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದೆ. ಇಂತಹ ಪ್ರಕರಣಗಳನ್ನು ‘ಅಸಹಜ ಮಾರಾಟ’ ಎಂದು ಪರಿಗಣಿಸಿ, ತೈಲ ಪೂರೈಕೆಯನ್ನು ಸ್ಥಗಿತಗೊಳಿಸುತ್ತಿದೆ. ಇಲ್ಲವೇ ಪೂರೈಕೆ ಪ್ರಮಾಣವನ್ನು ಕಡಿಮೆ ಮಾಡುತ್ತಿದೆ’ ಎಂದು ಸಂಘವು ಆರೋಪಿಸಿದೆ.

‘ಬಂಕ್‌ಗಳು ಯಾವ ನಿಯಮವನ್ನು ಉಲ್ಲಂಘಿಸದೇ ಇದ್ದರೂ, ತೈಲ ಪೂರೈಕೆಯಿಂದ ವಂಚಿತವಾಗಬೇಕಾದ ಸ್ಥಿತಿ ಇದೆ. ಪರಿಣಾಮವಾಗಿ ದೈನಂದಿನ ವಹಿವಾಟಿಗೆ ಅಡಚಣೆಯಾಗುತ್ತಿದೆ ಮತ್ತು ಎಂದಿನ ಗ್ರಾಹಕರನ್ನು ಕಳೆದುಕೊಳ್ಳುವ ಸ್ಥಿತಿ ಎದುರಾಗಿದೆ. ಹಲವು ಬಂಕ್‌ಗಳು ಈಗಾಗಲೇ ನಷ್ಟ ಎದುರಿಸುತ್ತಿದ್ದು, ಕಾರ್ಯಾಚರಣೆ ಸ್ಥಗಿತಗೊಳಿಸಿವೆ’ ಎಂದು ಅಸಹಾಯಕತೆ ತೋಡಿಕೊಂಡಿದೆ.

‘ಈ ವಿಚಾರದಲ್ಲಿ ಪ್ರಧಾನಿ ಕಾರ್ಯಾಲಯವು ಕೂಡಲೇ ಮಧ್ಯಪ್ರವೇಶಿಸಬೇಕು. ಸಾಂಸ್ಥಿಕ ಬಳಕೆದಾರರು ತೈಲ ಕಂಪನಿಗಳಿಂದ, ತೈಲ ಕಂಪನಿಗಳ ಡಿಪೊಗಳಿಂದ ಮಾತ್ರವೇ ಡೀಸೆಲ್ ಖರೀದಿಸಬೇಕು ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು. ಬಂಕ್‌ಗಳು ಎದುರಿಸುತ್ತಿರುವ ಸಮಸ್ಯೆಯನ್ನು ಬಗೆಹರಿಸಬೇಕು’ ಎಂದು ಮನವಿ ಮಾಡಿಕೊಂಡಿದೆ.

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣದ ಮುದ್ದೇಬಿಹಾಳ ರಸ್ತೆಯಲ್ಲಿರುವ ತಹಶೀಲ್ದಾರ್ ಕಚೇರಿಯ ಬಂಕ್ ಎದುರು ವಾಹನಗಳು ಪೆಟ್ರೋಲ್, ಡೀಸೆಲ್‌ಗಾಗಿ ವಾಹನಗಳು ಸಾಲಾಗಿ ನಿಂತಿದ್ದವು

ಪ್ರಜಾವಾಣಿ ಚಿತ್ರ

ಒಲ್ಲದ ಮನಸ್ಸಿನಿಂದ ಏರಿಕೆ: ವಿಜಯೇಂದ್ರ

‘ಯುದ್ಧ ಮತ್ತು ಸಂಘರ್ಷದ ಕಾರಣಕ್ಕೆ ಕೇಂದ್ರ ಸರ್ಕಾರವು ಒಲ್ಲದ ಮನಸ್ಸಿನಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಇದೊಂದು ಸಂದಿಗ್ಧ ಪರಿಸ್ಥಿತಿ. ಈ ಕಾಲದಲ್ಲಿ ಅನಿವಾರ್ಯವಾಗಿ ಬೆಲೆ ಹೆಚ್ಚಳ ಮಾಡಬೇಕಾಗಿದೆ’ ಎಂದರು. ಗುಜರಾತ್, ಮಧ್ಯಪ್ರದೇಶ ಸೇರಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಇಂಧನ ಮಾರಾಟ ತೆರಿಗೆ ಕಡಿಮೆ ಮಾಡುವಂತೆ ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಿದ್ದಾರೆ ಎಂದು ಸುದ್ದಿಗಾರರು ಪ್ರಸ್ತಾಪಿಸಿದಾಗ, ‘ಕೇಂದ್ರ ಸರ್ಕಾರವು ಮಾತ್ರವೇ ಏಕೆ ತೆರಿಗೆ ಕಡಿಮೆ ಮಾಡಬೇಕು. ಸಿದ್ದರಾಮಯ್ಯ ಅವರೇ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ತೆರಿಗೆ ಇಳಿಕೆ ಮಾಡಿ, ದೇಶಕ್ಕೆ ಮಾದರಿಯಾಗಲಿ’ ಎಂದರು.

ರಾಜ್ಯದ ಹಲವೆಡೆ ಪೂರೈಕೆ ವ್ಯತ್ಯಯ

ಹುಬ್ಬಳ್ಳಿ/ಯಾದಗಿರಿ/ಮೈಸೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಂಕ್‌ಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೆಲವು ಜಿಲ್ಲೆಗಳಲ್ಲಿ ಅಗತ್ಯದ ಶೇ 50ರಷ್ಟು ಮಾತ್ರ ಪೂರೈಕೆಯಾಗುತ್ತದೆ. ಪರಿಣಾಮವಾಗಿ ಕೊರತೆ ಸ್ಥಿತಿ ಎದುರಾಗಿದೆ.

ಧಾರವಾಡ, ವಿಜಯಪುರ, ಗದಗ, ಉತ್ತರ ಕನ್ನಡ ಜಿಲ್ಲೆಯ ಬಂಕ್‌ಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಇದರಿಂದ ಕೃಷಿಕರು ಸೇರಿ ವಾಹನ ಸವಾರರು ಪರದಾಡುವಂತಾಗಿದೆ.

ಮೈಸೂರು ಭಾಗದ ಜಿಲ್ಲೆಗಳ ಪೈಕಿ ಕೊಡಗಿನಲ್ಲಿ ಮಾತ್ರ ಇಂಧನ ಕೊರತೆ ಸಮಸ್ಯೆ ಉಂಟಾಗುತ್ತಿದೆ. ಜಿಲ್ಲೆಗೆ ಪೆಟ್ರೋಲ್ –ಡೀಸೆಲ್ ಆವಕ ಕಡಿಮೆಯಾಗಿದ್ದು, ಬೇಡಿಕೆ ಹೆಚ್ಚಿದೆ. ಪರಿಣಾಮವಾಗಿ ಕೆಲವು ಬಂಕ್‌ಗಳಲ್ಲಿ ಇಂಧನ ಬೇಗನೇ ಖಾಲಿಯಾಗಿ ‘ನೋ ಸ್ಟಾಕ್’ ಫಲಕ ಹಾಕುವುದು ಸಾಮಾನ್ಯ ಎನಿಸಿದೆ.

ಯಾದಗಿರಿಯ ಶಹಾಪುರ ಮತ್ತು ಸುರಪುರ ತಾಲ್ಲೂಕಿನ ಕೆಲವು ಬಂಕ್‌ಗಳನ್ನು ಪೆಟ್ರೋಲ್ ಮತ್ತು ಡೀಸೆಲ್ ಕೊರತೆಯಿಂದಾಗಿ ಬಂದ್ ಮಾಡಲಾಗಿದೆ. ವಾಹನ ಚಾಲಕರು ಮತ್ತು ಮಾಲೀಕರು ಬೇರೆ ಕಡೆಗೆ ತೆರಳಿ ಇಂಧನ ಖರೀದಿಸುತ್ತಿದ್ದಾರೆ.

ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದಗಣಿ ಪಟ್ಟಣದಲ್ಲಿ ಮಾತ್ರ ಡೀಸೆಲ್ ಕೊರತೆಯಿಂದ ಎರಡು ಬಂಕ್ ಬಂದ್ ಮಾಡಲಾಗಿದೆ. ಬೀದರ್ ನಗರದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಕಾರಣಕ್ಕೆ ಕೆಲ ಬಂಕ್‌ಗಳು ಬಂದ್ ಆಗಿವೆ.

‘ಅರ್ಧದಷ್ಟು ಮಾತ್ರ ಪೂರೈಕೆ’

‘ಧಾರವಾಡ ಜಿಲ್ಲೆಯಲ್ಲೂ ಪೆಟ್ರೋಲ್, ಡೀಸೆಲ್ ಕೊರತೆ ಎದುರಾಗಿದೆ. ಧಾರವಾಡ ಜಿಲ್ಲೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಬಂಕ್‌ಗಳಿದ್ದು, ಪ್ರತಿ ದಿನ ಸುಮಾರು 1.70 ಲಕ್ಷ ಲೀಟರ್‌ನಷ್ಟು ಪೆಟ್ರೋಲ್, ಡೀಸೆಲ್ ಬೇಕು. ಆದರೆ, ತೈಲ ಪೂರೈಕೆ ಕಂಪನಿಗಳು ಅರ್ಧದಷ್ಟು ಮಾತ್ರ ಪೂರೈಸುತ್ತಿವೆ. ಪ್ರತಿದಿನ ಪೂರೈಸುವ ಬದಲು, ದಿನಬಿಟ್ಟು ದಿನಕ್ಕೆ ಪೂರೈಸುತ್ತಿವೆ’ ಎಂದು ಧಾರವಾಡ ಜಿಲ್ಲಾ ಪೆಟ್ರೋಲಿಯಂ ಮಾಲೀಕರು ಹಾಗೂ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಶಾಂತರಾಜ ಪೋಳ ಹೇಳಿದರು.

ಹಂತ ಹಂತವಾಗಿ ಲೂಟಿ: ಖರ್ಗೆ ಆರೋಪ

ನವದೆಹಲಿ (ಪಿಟಿಐ): ‘ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ದರ ಕುಸಿಯುತ್ತಿದ್ದ ಹೊತ್ತಿನಲ್ಲಿಯೂ ಕೇಂದ್ರ ಸರ್ಕಾರವು ದರ ಪ್ರಯೋಜನವನ್ನು ಜನರಿಗೆ ದಾಟಿಸಲಿಲ್ಲ. ಈಗ ಜನರಿಂದ ಹಂತ ಹಂತವಾಗಿ ಲೂಟಿ ಹೊಡೆಯಲಾಗುತ್ತಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನರೇಂದ್ರ ಮೋದಿ ಅವರೇ ನಮಗೆ ಹೇಳಿ... ಹಂತ ಹಂತವಾಗಿ ಹೊಡೆಯುತ್ತಿರುವ ಲೂಟಿಯಲ್ಲಿ ಯಾರಿಗೆ ಎಷ್ಟು ಪಾಲು ಇದೆ? ನೀವೇಕೆ ಇಷ್ಟೊಂದು ರಾಜಿಯಾಗಿದ್ದೀರಿ? ಸರ್ಕಾರಕ್ಕೆ ನಾಯಕತ್ವದ ಕೊರತೆ ಇದೆ. ಇದನ್ನು 140 ಕೋಟಿ ಭಾರತೀಯರು ಅರಿತುಕೊಂಡಿದ್ದಾರೆ’ ಎಂದು ಖರ್ಗೆ ಅವರು ತಮ್ಮ ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ಬಿಕ್ಕಟ್ಟು ಆರಂಭವಾದಾಗ ಬಿಜೆಪಿ ನಾಯಕತ್ವವು ಚುನಾವಣೆಗಳಲ್ಲಿ ಮುಳುಗಿತ್ತು. ಆಮೇಲೆ ತ್ಯಾಗ ಮಾಡುವಂತೆ ಹೇಳಿದರು. ಈಗ ಎಂಟೇ ದಿನಗಳಲ್ಲಿ ಪೆಟ್ರೋಲ್–ಡೀಸೆಲ್ ದರವನ್ನು ಮೂರನೇ ಬಾರಿಗೆ ಹೆಚ್ಚಿಸಲಾಗಿದೆ’ ಎಂದು ಖರ್ಗೆ ಹೇಳಿದ್ದಾರೆ.

ವಿವಿಧ ದೇಶಗಳಲ್ಲಿ ತೈಲ ಸುಂಕದ ವಿಷಯದಲ್ಲಿ ನಾಗರಿಕರಿಗೆ ದೊರೆತ ಲಾಭಗಳನ್ನು ಖರ್ಗೆ ಅವರು ಉದಾಹರಣೆಗಳಾಗಿ ‘ಎಕ್ಸ್’ ಪೋಸ್ಟ್‌ನಲ್ಲಿ ನಮೂದಿಸಿದ್ದಾರೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈಂಡ್)	₹1650 (1640)
ಸೋಯಾ (ರಿಫೈಂಡ್)	₹1515 (1510)
ಸೂರ್ಯಕಾಂತಿ (ರಿಫೈಂಡ್)	₹1655 (1650)
ಪಾಮೋಲಿನ್	₹1500 (1495)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹605
	12 ಕ್ಕೆ	₹86
ಮೈಸೂರು:	100 ಕ್ಕೆ	₹615

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹259-690
ದ್ವಿತಳಿ (ಬಿ.ವಿ)	₹444-890

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹246
ಆರ್‌ಎಸ್‌ಎಸ್-5	₹239
ಗುಡ್ ಲಾಟ್	₹206

ಸುಧಾ, ಮಯೂರ ಓದಿ

ಕೆಇಎಗೆ ತಲುಪದ ಸೀಟು ಲಭ್ಯತಾ ಪಟ್ಟಿ

ಒಂದನೇ ಪುಟದಿಂದ...

ಕಂದಾಯ ಹಾಗೂ ಶೈಕ್ಷಣಿಕ ದಾಖಲೆಗಳ ಪರಿಶೀಲನೆ, ಅಂಕಗಳ ನಮೂದು, ಅರ್ಜಿ ತಿದ್ದುಪಡಿ ಪ್ರಕ್ರಿಯೆಗಳೆಲ್ಲ ಪೂರ್ಣಗೊಂಡಿದ್ದು, ವಿದ್ಯಾರ್ಥಿಗಳು ಸಿಇಟಿಯಲ್ಲಿ ಪಡೆದ ಅಂಕಗಳ ಜತೆಗೆ ದ್ವಿತೀಯ ಪಿಯುಸಿ ಹಾಗೂ ವಿವಿಧ ಮಂಡಳಿಗಳ 12ನೇ ತರಗತಿಯ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ಅರ್ಹತಾ ಪಟ್ಟಿಯನ್ನು (ರ‍್ಯಾಂಕ್) ಮೇ ಅಂತ್ಯದ ಒಳಗೆ ಪ್ರಕಟಿಸಲು ಕೆಇಎ ನಿರ್ಧರಿಸಿದೆ. ಅರ್ಹತಾ ಪಟ್ಟಿ ಪ್ರಕಟಿಸಿದ ನಂತರ ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಾರ ವಿವಿಧ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳ ಆಧಾರದಲ್ಲಿ ಸೀಟು ಹಂಚಿಕೆ ಮಾಡಲಾಗುತ್ತದೆ. ಉನ್ನತ ರ‍್ಯಾಂಕ್ ಪಡೆದವರು ತಮಗೆ ಇಷ್ಟವಾದ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯುತ್ತಾರೆ.

‘ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು (ಯುಜಿ–ನೀಟ್) ರದ್ದು ಮಾಡಿರುವುದರಿಂದ, ಕರ್ನಾಟಕ ದಲ್ಲಿ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ದ್ವಿತೀಯ ಪಿಯು ಪರೀಕ್ಷೆ–2 ಫಲಿತಾಂಶವೂ ಪ್ರಕಟವಾಗಿದೆ. ಸಿಇಟಿ ಅರ್ಹತಾ ಪಟ್ಟಿಯೂ ಸಿದ್ಧವಾಗಿದೆ. ಆದರೆ, ವಿವಿಧ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನೇ ಕಾಲೇಜುಗಳು ತಲುಪಿಸಿದ ಕಾರಣ ಕೌನ್ಸೆಲಿಂಗ್ ವಿಳಂಬವಾಗುವ ಸಾಧ್ಯತೆ ಇದೆ. ಹೀಗಾಗಿ, ತ್ವರಿತವಾಗಿ ಸೀಟು ಲಭ್ಯತಾ ಪಟ್ಟಿಯನ್ನು ಸಲ್ಲಿಸಬೇಕು’ ಎಂದು ಆಯಾ ಇಲಾಖೆಗಳು ಹಾಗೂ ಕಾಲೇಜುಗಳಿಗೆ ಪರೀಕ್ಷಾ ಪ್ರಾಧಿಕಾರ ಪತ್ರ ಬರೆದಿದೆ.

1.45 ಲಕ್ಷ ಎಂಜಿನಿಯರಿಂಗ್ ಸೀಟು ನಿರೀಕ್ಷೆ

ಬಹುಬೇಡಿಕೆ ಇರುವ ಕಂಪ್ಯೂಟರ್ ಸೈನ್ಸ್‌ನ 30,573 ಸೀಟುಗಳು, ಕೃತಕ ಬುದ್ಧಿಮತ್ತೆ 7,209, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ 19,407, ಮಾಹಿತಿ ವಿಜ್ಞಾನದ 10,473 ಸೀಟುಗಳೂ ಸೇರಿ 2025–26ನೇ ಸಾಲಿನಲ್ಲಿ 1.41 ಲಕ್ಷ ಎಂಜಿನಿಯರಿಂಗ್ ಸೀಟುಗಳು ಲಭ್ಯವಾಗಿದ್ದವು. ಈ ಬಾರಿ 1.45 ಲಕ್ಷ ಸೀಟುಗಳು ಲಭ್ಯವಾಗುವ ನಿರೀಕ್ಷೆ ಇದೆ ಎಂದು ಕೆಇಎ ಹೇಳಿದೆ.

ಕಳೆದ ವರ್ಷ ನೀಟ್ ರ‍್ಯಾಂಕಿಂಗ್ ಗೊಂದಲಗಳ ಕಾರಣ ವೈದ್ಯಕೀಯ ಸೀಟುಗಳ ಹಂಚಿಕೆ ವಿಳಂಬವಾಗಿ, ಸಿಇಟಿ ಕೌನ್ಸೆಲಿಂಗ್ ಸಹ ವಿಳಂಬವಾಗಿತ್ತು. ಇದರಿಂದ ಕೊನೆಯ ಸುತ್ತಿನ ನಂತರ 15,353 ಎಂಜಿನಿಯರಿಂಗ್ ಸೀಟುಗಳು ಉಳಿದಿದ್ದವು. ಎಂಜಿನಿಯರಿಂಗ್ ಸೇರಿ ವಿವಿಧ ಕೋರ್ಸ್‌ಗಳಲ್ಲಿ 41,146 ಸೀಟುಗಳು ಭರ್ತಿಯಾಗಿರಲಿಲ್ಲ.

> **ನೀಟ್ ಫಲಿತಾಂಶಕ್ಕೆ ಕಾಯದೆ ಸಿಇಟಿಗೆ ಪ್ರತ್ಯೇಕ ಕೌನ್ಸೆಲಿಂಗ್ ನಡೆಸಲು ರಾಜ್ಯ ಸರ್ಕಾರ ಸಮ್ಮತಿಸಿರುವುದರಿಂದ ಸೀಟು ಲಭ್ಯತಾ ಪಟ್ಟಿಗಳನ್ನು ತ್ವರಿತವಾಗಿ ಸಲ್ಲಿಸುವಂತೆ ಎಲ್ಲ ಕಾಲೇಜುಗಳಿಗೂ ಸೂಚಿಸಲಾಗಿದೆ**
>
> **ಎಚ್.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕೇರಳಂ ವಿಳಂಬ: ನರ್ಸಿಂಗ್ ಪ್ರವೇಶಕ್ಕೆ ತೊಡಕು

ಕೇರಳಂದಲ್ಲಿ 12ನೇ ತರಗತಿಯ ಫಲಿತಾಂಶ ಇನ್ನೂ ಪ್ರಕಟವಾಗದ ಕಾರಣ ಬಿ.ಎಸ್‌ಸಿ (ನರ್ಸಿಂಗ್) ಪ್ರವೇಶದ ಕೌನ್ಸೆಲಿಂಗ್‌ಗೆ ತೊಡಕಾಗುವ ಸಾಧ್ಯತೆ ಇದೆ.

ರಾಜ್ಯದಲ್ಲಿ ನರ್ಸಿಂಗ್ ಪದವಿ ಕೋರ್ಸ್‌ನಲ್ಲಿ 31,726 ಸೀಟುಗಳು ಲಭ್ಯವಿದ್ದು, ಕರ್ನಾಟಕಕ್ಕಿಂತ ಕೇರಳಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಾರೆ. ಆ ರಾಜ್ಯದ 12ನೇ ತರಗತಿ ಫಲಿತಾಂಶ ವಿಳಂಬವಾಗಿದ್ದು, ಈ ಬಾರಿಯೂ ಸೀಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಉಳಿಯುವ ಸಾಧ್ಯತೆ ಇದೆ. ಕಳೆದ ಸಾಲಿನಲ್ಲಿ 19,832 ಸೀಟುಗಳು ಉಳಿದಿದ್ದವು.

25 ವರ್ಷಗಳಲ್ಲಿ ಅತಿ ದೊಡ್ಡ ರಕ್ಷಣಾ ರಫ್ತುದಾರರ ದೇಶ: ರಾಜನಾಥ ಸಿಂಗ್

ಶಿರಡಿ (ಅಹಿಲ್ಯಾನಗರ): ‘ಒಂದು ಕಾಲದಲ್ಲಿ ಶಸ್ತ್ರಾಸ್ತ್ರಗಳ ಆಮದುದಾರ ದೇಶ ಎಂದು ಪರಿಗಣಿತವಾಗಿದ್ದ ಭಾರತವು, ಮುಂದಿನ 25–30 ವರ್ಷಗಳಲ್ಲಿ ಅತಿ ದೊಡ್ಡ ಶಸ್ತ್ರಾಸ್ತ್ರಗಳ ರಫ್ತುದಾರ ದೇಶವಾಗುವುದನ್ನು ತಡೆಯಲು ಯಾವುದೇ ಶಕ್ತಿಯಿಂದ ಸಾಧ್ಯವಿಲ್ಲ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಶನಿವಾರ ಹೇಳಿದ್ದಾರೆ.

ಶಿರಡಿಯಲ್ಲಿ ನಿಬೆ ಸಂಸ್ಥೆಯ ಮದ್ದುಗುಂಡು ತಯಾರಿಕಾ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾಲು ಕೆಲವು ವರ್ಷಗಳ ವರೆಗೆ ಶೇ 25ರಿಂದ 30ರಷ್ಟಿತ್ತು. ಅದನ್ನು ಶೇ 50ಕ್ಕೆ ಹೆಚ್ಚಿಸುವುದು ನಮ್ಮ ಗುರಿ’ ಎಂದಿದ್ದಾರೆ.

‘ರಕ್ಷಣಾ ಕ್ಷೇತ್ರದಲ್ಲಿ ಖಾಸಗಿ ವಲಯವು ಕೇವಲ ನಟ್ ಮತ್ತು ಬೋಲ್ಟ್‌ಗಳ ಪೂರೈಕೆದಾರನಾಗಿ ಉಳಿದಿಲ್ಲ, ಬದಲಿಗೆ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಗಳ ಉತ್ಪಾದಕ ಆಗಿದೆ. ಸರ್ಕಾರದ ದೂರದೃಷ್ಟಿ ಮತ್ತು ಖಾಸಗಿ ವಲಯದ ನಾವೀನ್ಯತೆಗಳು ಒಟ್ಟಿಗೆ ಸೇರಿದಾಗ ದೇಶವು ಹೊಸ ಎತ್ತರವನ್ನು ತಲುಪುತ್ತದೆ’ ಎಂದು ಸಿಂಗ್ ತಿಳಿಸಿದ್ದಾರೆ.

‘ಶಿರಡಿಯಲ್ಲಿ 200 ಎಕರೆಯಲ್ಲಿ ತಲೆಎತ್ತಿರುವ ಕಾರ್ಖಾನೆಯು ಫಿರಂಗಿ ಬಾಂಬ್‌ಗಳನ್ನು ತಯಾರಿಸಲಿದ್ದು, 2 ಸಾವಿರ ಮಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಒದಗಿಸಲಿದೆ. ಅಲ್ಲದೇ, ಸುತ್ತಲಿನ ಮಧ್ಯಮ, ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳಿಗೂ ನೆರವು ಒದಗಿಸಲಿದೆ. ಇಲ್ಲಿ ಉತ್ಪಾದನೆಯಾಗುವ ರಕ್ಷಣಾ ಉತ್ಪನ್ನಗಳನ್ನು ಹೊರದೇಶಗಳಿಗೂ ರಫ್ತು ಮಾಡಲಾಗುವುದು’ ಎಂದು ನಿಬೆ ಗ್ರೂಪ್‌ನ ಮುಖ್ಯಸ್ಥ ಗಣೇಶ್ ನಿಬೆ ತಿಳಿಸಿದ್ದಾರೆ.

ರಾಜ್ಯಸಭೆ ಅರ್ಜಿಗಳ ಸಮಿತಿ ಅಧ್ಯಕ್ಷರಾಗಿ ಚಡ್ಡಾ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷವನ್ನು ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿರುವ ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರನ್ನು ರಾಜ್ಯಸಭೆಯ ಅರ್ಜಿಗಳ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಅರ್ಜಿಗಳ ಸಮಿತಿಯನ್ನು ಪುನರ್‌ರಚಿಸಿದ ನಂತರ, ರಾಜ್ಯಸಭೆಯ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರು ಸದನದ ಹತ್ತು ಸದಸ್ಯರ ನಾಮನಿರ್ದೇಶನ ಮಾಡಿದ್ದಾರೆ.

ಇದಲ್ಲದೆ, ರಾಜ್ಯಸಭೆ ಸದಸ್ಯೆ ಡಾ. ಮೇನಕಾ ಗುರುಸ್ವಾಮಿ ಅವರನ್ನು ಕಾರ್ಪೊರೇಟ್ ಕಾನೂನುಗಳು (ತಿದ್ದುಪಡಿ) ಮಸೂದೆ, 2026ರ ಜಂಟಿ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಕೇರ್ ಟೇಕರ್ ಪೇಷಂಟ್ಗಳನ್ನು ನೋಡಿಕೊಳ್ಳಲು ಮಹಿಳೆ ಮತ್ತು ಪುರುಷರು ಸೇವಾ ಮನೋಭಾವ ಇರುವವರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಕೊಡಲಾಗುವುದು. ಸಂಪರ್ಕಿಸಿ:7019258503 / 9945603366

ಸೌಂದರ್ಯ-ಆರೋಗ್ಯ

Health Clinic

ವೆರಿಕೋಸ್ ವೇನ್ಸ್/ಅಲ್ಸರ್ಸ್ ತೊಂದರೆಯೇ? ಮಂಡಿನೋವಿನ ಸಮಸ್ಯೆಯೇ? ಸೋರಿಯಾಸಿಸ್‌ಯಿಂದ ಬಳಲುತ್ತಿದ್ದಿರಾ? ಯಾವುದೇ ವಿಧವಾದ ಔಷದಿ ಸೇವನೆ ಮತ್ತು ಆಪರೇಷನ್ ಇಲ್ಲದೆ ನುರಿತ ತಜ್ಞರಿಂದ ಸಂಶೋದಿಸಿದ ಔಷದದಿಂದ ಪರಿಣಾಮಕಾರಿ ಚಿಕಿತ್ಸೆ. ವಿಜಯ ಆಯುರ್ ಕ್ಲಿನಿಕ್, ರಾಜಾಜಿನಗರ, ಬೆಂಗಳೂರು: 8861137033

ಪ್ರವಾಸ

Travel

ಶ್ರೀಮಹದೇಶ್ವರ ಟೂರ್ಸ್ & ಟ್ರಾವೆಲ್ಸ್ 10 ದಿನಗಳ ಅಮರನಾಥ ಯಾತ್ರೆ, 14 ದಿನಗಳ ಚಾರ್ಧಾಮ್ ಯಾತ್ರೆ. ಸಂಪರ್ಕಿಸಿ: 9611801143/ 9742810701.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ದಿ|| ಶ್ರೀಮುನಿಶಾಮಪ್ಪ (ಮೊಟಪ್ಪ) ನಿಧನ: 15-08-1984

ದಿ|| ಶ್ರೀಮತಿ ಮುನಿಯಮ್ಮ ನಿಧನ: 24-05-2002

ನೀವು ನಮ್ಮನ್ನಗಲಿ ತಂದೆ–42 / ತಾಯಿ–24 ವರ್ಷಗಳು ಕಳೆದರೂ ನಿಮ್ಮ ಸೌಜನ್ಯ, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಅಚ್ಚಳಿಯದೇ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಶ್ರೀಮತಿ ಕಲ್ಪನ, ಶ್ರೀ ಎಂ. ಗೋಪಾಲ್ ಮತ್ತು ಮಕ್ಕಳು

ಮಾಲೀಕರು, ಮೆ: ವೇಣು ಎಂಟರ್‌ಪ್ರೈಸಸ್, ಗುತ್ತಿಗೆದಾರರು, M.M. Towers, Complex & Farm, ಕುಟುಂಬ ವರ್ಗದವರು ಖಾಜಿಹೊಸಹಳ್ಳಿ, ಹೊಸಕೋಟೆ (ತಾ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

ರಾಷ್ಟ್ರೀಯ ಭದ್ರತಾ ತಂಡದೊಂದಿಗೆ ಸಭೆ ನಡೆಸಿದ ಅಮೆರಿಕ ಅಧ್ಯಕ್ಷ

‘ಇರಾನ್ ಮೇಲೆ ಹೊಸ ದಾಳಿಗೆ ಟ್ರಂಪ್ ಚಿಂತನೆ’



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಪಿಟಿಐ): ಶಾಂತಿ ಒಪ್ಪಂದ ಏರ್ಪಡದಿದ್ದರೆ ಇರಾನ್ ಮೇಲೆ ಹೊಸದಾಗಿ ದಾಳಿ ನಡೆಸುವ ಬಗ್ಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗಂಭೀರ ಚಿಂತನೆ ನಡೆಸಿದ್ದಾರೆ.

ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸೀಮ್ ಮುನೀರ್ ಅವರು ಇರಾನ್‌ಗೆ ಭೇಟಿ ನೀಡಿದ್ದಾರೆ. ಒಪ್ಪಂದ ರೂಪಿಸುವ ಕೊನೆಯ ಕ್ಷಣದ ಪ್ರಯತ್ನದಲ್ಲಿ ಕತಾರ್‌ನ ನಿಯೋಗವೂ ಅವರೊಂದಿಗೆ ಸೇರಿಕೊಂಡಿದೆ. ಈ ಹೊತ್ತಿನಲ್ಲೇ ಇರಾನ್ ಮೇಲೆ ಹೊಸದಾಗಿ ಯುದ್ಧ ನಡೆಸುವ ಬಗ್ಗೆ ಚರ್ಚಿಸಲು ಟ್ರಂಪ್ ಅವರು ರಾಷ್ಟ್ರೀಯ ಭದ್ರತಾ ತಂಡದೊಂದಿಗೆ ಶುಕ್ರವಾರ ಸಭೆ ನಡೆಸಿದ್ದಾರೆ ಎಂದು ಅಮೆರಿಕದ ಸುದ್ದಿ ಸಂಸ್ಥೆ ‘ಆಕ್ಸಿಯೋಸ್’ ವರದಿ ಮಾಡಿದೆ.

ಶ್ವೇತಭವನದಲ್ಲಿ ನಡೆದ ಈ ಸಭೆಯಲ್ಲಿ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಸಿಐಎ ನಿರ್ದೇಶಕ ಜಾನ್ ರಾಟ್‌ಕ್ಲಿಫ್, ಶ್ವೇತಭವನದ ಮುಖ್ಯಸ್ಥೆ ಸೂಸಿ ವೈಲ್ಸ್ ಭಾಗವಹಿಸಿದ್ದರು.

‘ಕಳೆದ ಕೆಲವು ದಿನಗಳಿಂದ ಇರಾನ್ ಜೊತೆಗಿನ ಮಾತುಕತೆಗಳ ಬಗ್ಗೆ ಟ್ರಂಪ್ ಹೆಚ್ಚು ನಿರಾಸೆಗೊಂಡಿದ್ದಾರೆ. ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಕೊನೆಯ ಬಾರಿ ದೊಡ್ಡ ಮಟ್ಟದ ಸೇನಾ ದಾಳಿ ನಡೆಸಲು ಟ್ರಂಪ್ ಚಿಂತನೆ ನಡೆಸಿದ್ದಾರೆ. ಆ ಮೂಲಕ ವಿಜಯವನ್ನು ಘೋಷಿಸಿ ಯುದ್ಧವನ್ನು ಕೊನೆಗೊಳಿಸಲು ನಿರ್ಧರಿಸಿದ್ದಾಗಿ ಟ್ರಂಪ್ ಅವರ ಆಪ್ತ ಮೂಲಗಳು ತಿಳಿಸಿವೆ’ ಎಂದು ‘ಆಕ್ಸಿಯೋಸ್’ ವರದಿ ಮಾಡಿದೆ.

‘ಇರಾನ್ ಜತೆಗಿನ ಮಾತುಕತೆಗಳು ಅತ್ಯಂತ ಕಷ್ಟಕರವಾಗಿವೆ. ಪ್ರತಿದಿನ ಒಪ್ಪಂದದ ಕರಡುಗಳು ವಿನಿಮಯವಾಗುತ್ತಿವೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಶಾಂತಿ ಒಪ್ಪಂದ ಮಾಡಿಕೊಳ್ಳಲು ಇರಾನ್ ಹಾತೊರೆಯುತ್ತಿದೆ. ಮುಂದೆ ಏನಾಗುತ್ತದೆಂದು ನೋಡೋಣ. ಆದರೆ, ನಾವು ಅವರನ್ನು ತೀವ್ರವಾಗಿ ಹೊಡೆದಿದ್ದೇವೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಸಾಧ್ಯವಿಲ್ಲ’ ಎಂದು ಟ್ರಂಪ್ ಅವರು ಶ್ವೇತಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್‌ನ (ಐಆರ್‌ಜಿಸಿ) ಕಮಾಂಡರ್ ಜನರಲ್ ಅಹ್ಮದ್ ವಹಿದಿ ಅವರನ್ನು ಮುನೀರ್ ಶನಿವಾರ ಭೇಟಿಯಾಗುವ ನಿರೀಕ್ಷೆಯಿದೆ.

‘ಮಗನ ಮದುವೆಗೆ ಹಾಜರಾಗುತ್ತಿಲ್ಲ’: ‘ಪ್ರಸಕ್ತ ಸನ್ನಿವೇಶದಲ್ಲಿ ನಾನು ಶ್ವೇತಭವನದಲ್ಲಿ ಉಳಿಯುವುದು ಮುಖ್ಯವಾಗಿದೆ. ಹೀಗಾಗಿ, ವಾರಾಂತ್ಯ ನಡೆಯಲಿರುವ ನನ್ನ ಮಗ ಡಾನ್ ಜೂನಿಯರ್ ಮದುವೆಗೆ ಹಾಜರಾಗುತ್ತಿಲ್ಲ’ ಎಂದು ಟ್ರಂಪ್ ಅವರು ತಮ್ಮ ಒಡೆತನದ ‘ಟ್ರೂಥ್ ಸೋಷಿಯಲ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ದಾಳಿಗೆ ಭೀಕರ ಪ್ರತ್ಯುತ್ತರ: ಇರಾನ್ ಎಚ್ಚರಿಕೆ

ಟೆಹರಾನ್ (ಎಎಫ್‌ಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೆ ದಾಳಿ ನಡೆಸಲು ಮುಂದಾದರೆ ‘ಅತಿ ಭೀಕರ’ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ.

‘ಕದನ ವಿರಾಮದ ಸಮಯದಲ್ಲಿ ನಮ್ಮ ಸೇನಾ ಪಡೆಗಳನ್ನು ಮತ್ತೆ ಯುದ್ಧಕ್ಕೆ ಸಜ್ಜುಗೊಳಿಸಿದ್ದೇವೆ. ಟ್ರಂಪ್ ಅವರು ಮತ್ತೊಂದು ಮೂರ್ಖತನದ ನಿರ್ಧಾರ ಕೈಗೊಂಡು ಯುದ್ಧವನ್ನು ಮತ್ತೆ ಆರಂಭಿಸಿದರೆ, ಇರಾನ್ ನೀಡುವ ಪ್ರತ್ಯುತ್ತರ ಭೀಕರವಾಗಿರಲಿದೆ’ ಎಂದು ಸಂಸತ್ತಿನ ಸ್ಪೀಕರ್ ಹಾಗೂ ಮುಖ್ಯ ಸಮಾಲೋಚಕ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೂ ಮುನ್ನ, ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಅವರೊಂದಿಗೆ ಮಾತುಕತೆ ನಡೆಸಿದ ಖಾಲೀಬಾಫ್, ‘ನಮ್ಮ ದೇಶದ ಸಾರ್ವಭೌಮತ್ವ ಹಾಗೂ ಹಕ್ಕುಗಳ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಸಿದ್ಧರಿಲ್ಲ’ ಎಂದು ತಿಳಿಸಿದ್ದಾರೆ.

ಮುನೀರ್– ಅರಾಘ್ಚಿ ಮಾತುಕತೆ

ಇಸ್ಲಾಮಾಬಾದ್ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶದಿಂದ ಪಾಕಿಸ್ತಾನದ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸೀಮ್ ಮುನೀರ್ ಅವರು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷವು ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಡೆಯುವ ಮತ್ತು ಶಾಂತಿ, ಸ್ಥಿರತೆ, ಭದ್ರತೆಯನ್ನು ಉತ್ತೇಜಿಸುವ ಗುರಿ ಹೊಂದಿರುವ ರಾಜತಾಂತ್ರಿಕ ಪ್ರಯತ್ನಗಳ ಕುರಿತು ಚರ್ಚಿಸಿದ್ದಾರೆ. ಈ ಮಾತುಕತೆ ತಡರಾತ್ರಿಯವರೆಗೂ ನಡೆಯಿತು ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ‘ಐಆರ್‌ಎನ್‌ಎ’ ಸುದ್ದಿ ಸಂಸ್ಥೆ ವರದಿ ಮಾಡಿದೆ.

> **ಹೊರ್ಮುಜ್ ಜಲಸಂಧಿ ಕುರಿತಂತೆ ಇರಾನ್, ಒಮಾನ್ ಸೇರಿ ಈ ಜಲಮಾರ್ಗದೊಂದಿಗೆ ಗಡಿ ಹಂಚಿಕೊಂಡ ದೇಶಗಳ ನಡುವೆ ಒಪ್ಪಂದವಾಗಬೇಕು. ಈ ವಿಚಾರಕ್ಕೂ ಅಮೆರಿಕಕ್ಕೂ ಸಂಬಂಧ ಇಲ್ಲ**
>
> **ಇಸ್ಮಾಯಿಲ್ ಬಾಘೈ** ಇರಾನ್ ವಿದೇಶಾಂಗ ವಕ್ತಾರ

ಶ್ರೇಯಸ್ ಶತಕಕ್ಕೆ ಒಲಿದ ಗೆಲುವು

ಪ್ರಭಸಿಮ್ರನ್ ಅರ್ಧಶತಕ • ಪಂಜಾಬ್ ಕಿಂಗ್ಸ್ ತಂಡದ ಪ್ಲೇ ಆಫ್ ಕನಸು ಜೀವಂತ

ಲಖನೌ (ಪಿಟಿಐ): ನಾಯಕ ಶ್ರೇಯಸ್ ಅಯ್ಯರ್ (ಅಜೇಯ 101; 51ಎ) ಅವರ ಅಮೋಘ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಸತತ ಆರು ಸೋಲಿನ ಬಳಿಕ ಗೆಲುವಿನೊಂದಿಗೆ ಐಪಿಎಲ್‌ನ ಹಾಲಿ ಆವೃತ್ತಿಯ ಲೀಗ್ ಹಂತದ ಅಭಿಯಾನ ಮುಗಿಸಿತು. ಇದರೊಂದಿಗೆ ಪಂಜಾಬ್ ತಂಡವು ಪ್ಲೇ ಆಫ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಏಕಾನ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಶ್ರೇಯಸ್ ಬಳಗವು 7 ವಿಕೆಟ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸುಲಭವಾಗಿ ಮಣಿಸಿತು. ಆ ಮೂಲಕ ಸತತ ಆರು ಪಂದ್ಯಗಳ ಸೋಲಿನ ಸರಪಳಿಯನ್ನು ಕಡಿದುಕೊಂಡಿತು. ನಿರ್ಣಾಯಕ ಪಂದ್ಯದಲ್ಲಿ ಮಿಂಚಿದ ಶ್ರೇಯಸ್ ಪಡೆಯ ಪ್ಲೇ ಆಫ್ ಭವಿಷ್ಯ ಭಾನುವಾರ ನಡೆಯುವ ರಾಜಸ್ಥಾನ ರಾಯಲ್ಸ್ ಮತ್ತು ಮುಂಬೈ ಇಂಡಿಯನ್ಸ್ ಪಂದ್ಯದ ಫಲಿತಾಂಶವನ್ನು ಅವಲಂಬಿಸಿದೆ.

14 ಪಂದ್ಯಗಳಲ್ಲಿ 10ರಲ್ಲಿ ಸೋತ ರಿಷಭ್ ಪಂತ್ ಪಡೆಯು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡವು ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿತು.

ಟಾಸ್ ಗೆದ್ದ ಪಂಜಾಬ್ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರ ಜೋಸ್ ಇಂಗ್ಲಿಸ್ ಅವರ ಅರ್ಧಶತಕ (72;44ಎ), ಆಯುಷ್ ಬದೋನಿ (43;18ಎ) ಮತ್ತು ಕೊನೆಯಲ್ಲಿ ಅಬ್ದುಲ್ ಸಮದ್ (ಅಜೇಯ 37) ಅವರ ಆಟದ ನೆರವಿನಿಂದ ಲಖನೌ ತಂಡ 6 ವಿಕೆಟ್‌ಗೆ 196 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡವು ಶ್ರೇಯಸ್ ಮತ್ತು ಆರಂಭ ಆಟಗಾರ ಪ್ರಭಸಿಮ್ರನ್ ಸಿಂಗ್ (69;39ಎ) ಅವರ ಆಟದ ನೆರವಿನಿಂದ 12 ಎಸೆತಗಳು ಬಾಕಿ ಇರುವಂತೆ 3 ವಿಕೆಟ್‌ಗೆ 200 ರನ್ ಗಳಿಸಿ ಸಂಭ್ರಮಿಸಿತು.

ಲಖನೌ ತಂಡದ ವೇಗಿ ಮೊಹಮ್ಮದ್ ಶಮಿ ಆರಂಭದಲ್ಲಿ ಪಂಜಾಬ್ ತಂಡಕ್ಕೆ ಆಘಾತ ನೀಡಿದರು. ಇನಿಂಗ್ಸ್‌ನ ಮೊದಲ ಎಸೆತದಲ್ಲಿ ಪ್ರಿಯಾಂಶ್ ಆರ್ಯ (0) ಅವರನ್ನು ಔಟ್ ಮಾಡಿದ ಅವರು, ಮೂರನೇ ಓವರ್‌ನಲ್ಲಿ ಕೂಪರ್ ಕೊನೊಲಿ ಅವರಿಗೆ ಪೆವಿಲಿಯನ್ ದಾರಿ ತೋರಿಸಿದರು. ಈ ಹಂತದಲ್ಲಿ ಪ್ರಭಸಿಮ್ರನ್ ಮತ್ತು ಶ್ರೇಯಸ್ ಜವಾಬ್ದಾರಿಯುತ ಆಟವಾಡಿದರು.

ಆರಂಭದಲ್ಲಿ ನಿಧಾನಗತಿಯಲ್ಲಿ ರನ್ ಪೇರಿಸಿದ ಅವರು ನಂತರ ಆಕ್ರಮಣಕಾರಿಯಾದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 140 (76ಎ) ರನ್ ಸೇರಿಸಿದ ಅವರು ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಗೆಲುವಿಗೆ 35 ರನ್ ಬೇಕಿದ್ದಾಗ ಪ್ರಭಸಿಮ್ರನ್ ಔಟಾದರು. ನಂತರ ಶ್ರೇಯಸ್ ಅವರು ಸೂರ್ಯಾಂಶ್ ಶೆಡ್ಗೆ (ಔಟಾಗದೆ 9) ಅವರೊಂದಿಗೆ ತಂಡವನ್ನು ದಡ ಸೇರಿಸಿದರು. ಗೆಲುವಿಗೆ 3 ರನ್ ಬೇಕಿದ್ದಾಗ ಮೊಹಸಿನ್ ಖಾನ್ ಎಸೆತದಲ್ಲಿ ಸಿಕ್ಸರ್ ಬಾರಿಸುವ ಮೂಲಕ ಶ್ರೇಯಸ್ ಐಪಿಎಲ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದರು.

ಇಂಗ್ಲಿಸ್ ಮಿಂಚು: ಇದಕ್ಕೂ ಮೊದಲು ಬ್ಯಾಟಿಂಗ್‌ಗೆ ಇಳಿದ ಲಖನೌ ತಂಡವು 20 ರನ್ ಗಳಿಸುವಷ್ಟರಲ್ಲಿ ಅರ್ಷಿನ್ ಕುಲಕರ್ಣಿ (0) ಮತ್ತು ನಿಕೋಲಸ್ ಪೂರನ್ (2) ಪೆವಿಲಿಯನ್ ಸೇರಿಕೊಂಡರು. ಮಿಚೆಲ್ ಮಾರ್ಷ್ ಬದಲು ಅರ್ಷಿನ್ ಸ್ಥಾನ ಪಡೆದಿದ್ದರು.

ಈ ವೇಳೆ ಇಂಗ್ಲಿಸ್ ಮತ್ತು ಆಯುಷ್ ಬದೋನಿ ಎಚ್ಚರಿಕೆಯ ಆಟವಾಡಿದರು. ಮೂರನೇ ವಿಕೆಟ್‌ಗೆ 49 ರನ್ ಸೇರಿಸಿದರು. ಆದರೆ ಬದೋನಿ ಅವರ ಸಾಹಸದ ಆಟಕ್ಕೆ ಯಜುವೇಂದ್ರ ಚಾಹಲ್ ತೆರೆಯೆಳೆದರು. ಇದಕ್ಕೆ ಪ್ರಭಸಿಮ್ರನ್ ಅವರ ಮಿಂಚಿನ ಸ್ಟಂಪಿಂಗ್ ಕಾರಣವಾಯಿತು.

ಏಳು ಓವರುಗಳ ಬಳಿಕ 3 ವಿಕೆಟ್‌ಗೆ 69 ರನ್ ಗಳಿಸಿ ಕುಂಟುತ್ತಿದ್ದ ವೇಳೆ ಇಂಗ್ಲಿಸ್ ಮತ್ತು ಪಂತ್ (26, 22 ಎಸೆತ) ಅವರು ನಾಲ್ಕನೇ ವಿಕೆಟ್‌ಗೆ 65 ರನ್ ಸೇರಿಸಿ ಆಸರೆಯಾದರು. ಅಲ್ಲಿಯವರೆಗೆ ಬೆಂಬಲ ನೀಡುವ ಪಾತ್ರ ವಹಿಸಿದ್ದ ಇಂಗ್ಲಿಸ್ ಮತ್ತೆ ಆಕ್ರಮಣದ ಆಟಕ್ಕೆ ಮರಳಿದರು. ಎಡಗೈ ವೇಗಿ ಅರ್ಷದೀಪ್ ಹೆಚ್ಚು ದಂಡನೆಗೊಳಗಾದರು. ಆಸ್ಟ್ರೇಲಿಯಾದ ಆಟಗಾರ ಅವರ ಬೌಲಿಂಗ್‌ನಲ್ಲೇ ಒಟ್ಟು ಆರು ಬೌಂಡರಿ, ಎರಡು ಸಿಕ್ಸರ್‌ಗಳನ್ನು ಬಾರಿಸಿದರು.

28 ಎಸೆತಗಳಲ್ಲಿ ಅರ್ಧಶತಕ ದಾಟಿದ್ದ ಇಂಗ್ಲಿಸ್, ಸಾಂದರ್ಭಿಕ ಬೌಲರ್ ಶಶಾಂಕ್ ಸಿಂಗ್ ಬೌಲಿಂಗ್‌ನಲ್ಲಿ ಲಾಂಗ್‌ಆನ್‌ನಲ್ಲಿ ಶ್ರೇಯಸ್ ಅಯ್ಯರ್‌ಗೆ ಕ್ಯಾಚಿತ್ತರು. ಮುಕುಲ್ ಚೌಧರಿ ಎದುರಾಳಿ ಬೌಲರ್‌ಗಳನ್ನು ಕಾಡಲಿಲ್ಲ. ಈ ಹಂತದಲ್ಲಿ ಸಮದ್ ಮಿಂಚಿನ ಆಟವಾಡಿದ್ದರಿಂದ ತಂಡದ ಮೊತ್ತ 200ರ ಸಮೀಪ ತಲುಪಿತು. ಸಚಿನ್ ತೆಂಡೂಲ್ಕರ್ ಅವರ ಪುತ್ರ ಅರ್ಜುನ್ ಅವರು ಲಖನೌ ತಂಡದ ಪರ ಪದಾರ್ಪಣೆ ಮಾಡಿ ಅಜೇಯ 5 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಲಖನೌ ಸೂಪರ್ ಜೈಂಟ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 196 (ಜೋಶ್ ಇಂಗ್ಲಿಸ್ 72, ಆಯುಷ್ ಬದೋನಿ 43, ರಿಷಭ್ ಪಂತ್ 26, ಅಬ್ದುಲ್ ಸಮದ್ ಔಟಾಗದೇ 37; ಮಾರ್ಕೊ ಯಾನ್ಸೆನ್ 33ಕ್ಕೆ 2, ಯಜುವೇಂದ್ರ ಚಾಹಲ್ 25ಕ್ಕೆ 2). ಪಂಜಾಬ್ ಕಿಂಗ್ಸ್: 18 ಓವರ್‌ಗಳಲ್ಲಿ 3 ವಿಕೆಟ್‌ಗೆ 200 (ಪ್ರಭಸಿಮ್ರನ್ ಸಿಂಗ್ 69, ಶ್ರೇಯಸ್ ಅಯ್ಯರ್ ಔಟಾಗದೇ 101; ಮೊಹಮ್ಮದ್ ಶಮಿ 45ಕ್ಕೆ 2, ಅರ್ಜುನ್ ತೆಂಡೂಲ್ಕರ್ 36ಕ್ಕೆ 1.

ಪಂದ್ಯದ ಆಟಗಾರ: ಶ್ರೇಯಶ್ ಅಯ್ಯರ್

ಎಎಫ್‌ಪಿ ಚಿತ್ರ

ನಿರ್ಣಾಯಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರಾಳಿ

ಆರ್‌ಆರ್‌ಗೆ 'ಸುವರ್ಣ' ಅವಕಾಶ

ಮುಂಬೈ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡವು, ಭಾನುವಾರ ನಡೆಯಲಿರುವ ಐಪಿಎಲ್‌ನ ನಿರ್ಣಾಯಕ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದ್ದು, ಗೆದ್ದರೆ ಯಾವುದೇ ಲೆಕ್ಕಾಚಾರದ ಅಗತ್ಯವಿಲ್ಲದೇ ಪ್ಲೇಆಫ್ ಸ್ಥಾನ ತನ್ನದಾಗಿಸಿಕೊಳ್ಳಲಿದೆ.

ಮಧ್ಯಾಹ್ನದ ಉರಿ ಬಿಸಿಲು–ಸೆಕೆಯ ವಾತಾವರಣದಲ್ಲಿ ನಡೆಯಲಿರುವ ಈ ಪಂದ್ಯ ಎರಡೂ ತಂಡಗಳ ಆಟಗಾರರ ಸಂಯಮ ಮತ್ತು ಫಿಟ್ನೆಸ್‌ಗೆ ಪರೀಕ್ಷೆಯಾಗಲಿದೆ. ಈ ಪಂದ್ಯ ಸೋತರೆ ರಾಜಸ್ಥಾನ ರಾಯಲ್ಸ್‌ನ ಪ್ಲೇ ಆಫ್ ಕನಸು ಇತರ ತಂಡಗಳ ಸೋಲು–ಗೆಲುವಿನ ಲೆಕ್ಕಾಚಾರದ ಮೇಲೆ ಅವಲಂಬನೆಯಾಗಲಿದೆ. ಸಾಕಷ್ಟು ಮೊದಲೇ ಪ್ಲೇಆಫ್ ಅವಕಾಶದಿಂದ ಹೊರಬಿದ್ದ ಮುಂಬೈ ಇಂಡಿಯನ್ಸ್ ತಂಡಕ್ಕೆ ಸಕಾರಾತ್ಮಕವಾಗಿ ಲೀಗ್ ಮುಗಿಸಬೇಕಾದರೆ ಗೆಲುವು ಅಗತ್ಯವಾಗಿದೆ.

ರಿಯಾನ್ ಪರಾಗ್ ಸಾರಥ್ಯದ ತಂಡ ಪ್ರಸ್ತುತ 14 ಪಾಯಿಂಟ್ಸ್ ಗಳಿಸಿದ್ದು, ಗೆದ್ದರೆ 16ಕ್ಕೆ ಏರಲಿದೆ. ಆಗ ಪಂಜಾಬ್ ಮತ್ತು ಕೋಲ್ಕತ್ತ ನೈಟ್‌ರೈಡರ್ಸ್ ಹೊರಬೀಳಲಿವೆ.

ಏಕಾಂಗಿಯಾಗಿ ಪಂದ್ಯ ಗೆಲ್ಲಿಸಬಲ್ಲ ಹದಿಹರೆಯದ ಪ್ರತಿಭೆ ವೈಭವ್ ಸೂರ್ಯವಂಶಿ ಅವರಷ್ಟೇ ಅಪಾಯವನ್ನು ಯಶಸ್ವಿ ಜೈಸ್ವಾಲ್ ಕೂಡ ಮುಂಬೈಗೆ ಒಡ್ಡಬಲ್ಲರು. ಗುವಾಹಟಿಯಲ್ಲಿ ನಡೆದ ಪಂದ್ಯದಲ್ಲಿ ಎಡಗೈ ಬ್ಯಾಟರ್ ಜೈಸ್ವಾಲ್ ಅವರು ಜಸ್‌ಪ್ರೀತ್ ಬೂಮ್ರಾ ನೇತೃತ್ವದ ಮುಂಬೈ ದಾಳಿಯನ್ನು ಹಿಗ್ಗಾಮುಗ್ಗಾ ದಂಡಿಸಿದ್ದರು. 32 ಎಸೆತಗಳಲ್ಲಿ 77 ರನ್ ಬಾರಿಸಿ ಗೆಲುವಿಗೆ ಅಡಿಪಾಯ ಹಾಕಿದ್ದರು. ಮುಂಬೈ ಅವರಿಗೆ ತವರು ಕೂಡ.

ಆದರೆ ಪರಾಗ್ ಮತ್ತು ಧ್ರುವ್ ಜುರೇಲ್ ಅವರಿಂದ ತಂಡ ಸ್ಥಿರ ಬ್ಯಾಟಿಂಗ್ ನಿರೀಕ್ಷಿಸುತ್ತಿದೆ. ಕೆಲವು ಸಂದರ್ಭಗಳಲ್ಲಿ ಜುರೇಲ್ ಸಪ್ಪೆಯಾಗಿದ್ದಾರೆ. ಈ ಋತುವಿನಲ್ಲಿ ಪರಾಗ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದ್ದು ಕಡಿಮೆ. ಆದರೆ ಜೋಫ್ರಾ ಆರ್ಚರ್ ನೇತೃತ್ವದ ಬೌಲಿಂಗ್ ಪಡೆ ಉತ್ತಮವಾಗಿದೆ.

ಮುಂಬೈ ಇಂಡಿಯನ್ಸ್ ಸಹ ಕೊನೆಯ ಐದು ಪಂದ್ಯಗಳಲ್ಲಿ ಮೂರು ಸೋತು, ಎರಡು ಗೆದ್ದಿದೆ. ಭಾರತ ಟಿ20 ತಂಡದ ನಾಯಕ ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ ಮತ್ತು ತಿಲಕ್ ವರ್ಮಾ ಅವರಿಗೆ ಸಾಮರ್ಥ್ಯ ತೋರಲು ಇದು ಕೊನೆಯ ಅವಕಾಶ.


ವೈಭವ್ ಸೂರ್ಯವಂಶಿ

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್	V/s	ರಾಜಸ್ಥಾನ ರಾಯಲ್ಸ್
ತಾಣ: ಮುಂಬೈ, ಆರಂಭ: ಮಧ್ಯಾಹ್ನ 3.30		
ಕೋಲ್ಕತ್ತ ನೈಟ್ ರೈಡರ್ಸ್	V/s	ಡೆಲ್ಲಿ ಕ್ಯಾಪಿಟಲ್ಸ್
ತಾಣ: ಕೋಲ್ಕತ್ತ, ಆರಂಭ: ರಾತ್ರಿ 7.30		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಸೂರ್ಯವಂಶಿ ಕಟ್ಟಿಹಾಕಲು ವಿನಯ್ ಸೂತ್ರ

ಬೆಂಗಳೂರು: 'ವೈಭವ್ ಅಪಾರ ಪ್ರತಿಭಾನ್ವಿತ ಆಟಗಾರ. ಚೆಂಡಿನ ಚಲನೆಯನ್ನು ಗುರುತಿಸುವುದರಲ್ಲಿ ಚುರುಕು. ಆದ್ದರಿಂದ ಅವರಿಗೆ ಬೌಲಿಂಗ್ ಮಾಡುವುದ ಸವಾಲು ನಿಜ. ಆದರೆ ಬೌಲರ್‌ಗಳು ತಮ್ಮ ಮೂಲ ಕೌಶಲಗಳಿಗೆ ತಕ್ಕಂತೆಯೇ ಬೌಲಿಂಗ್ ಮಾಡಬೇಕು ಎಂದು 'ಜಿಯೊಸ್ಟಾರ್' ಪರಿಣತ, ಮಾಜಿ ಮಧ್ಯಮವೇಗಿ ಆರ್. ವಿನಯಕುಮಾರ್ ಹೇಳಿದರು.

ವಾಹಿನಿಯು ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ (ವರ್ಚುವಲ್) ಮಾತನಾಡಿದ ಕನ್ನಡಿಗ ವಿನಯ್, 'ನಾನು ವೈಭವ್ ಎದುರು ಬೌಲಿಂಗ್ ಮಾಡುವ ಸಂದರ್ಭ ಬಂದಿದ್ದರೆ ವೈವಿಧ್ಯತೆಗೆ ಒತ್ತು ಕೊಡುತ್ತಿದ್ದೆ. ನಾನು ಪರಿಣತಿ ಸಾಧಿಸಿರುವ ಎಸೆತಗಳನ್ನೇ ಹೆಚ್ಚು ಪ್ರಯೋಗಿಸುತ್ತಿದ್ದೆ' ಎಂದು ಹೇಳಿದರು.

ನೈಟ್‌ರೈಡರ್ಸ್‌ಗೆ ಕ್ಯಾಪಿಟಲ್ಸ್ ಸವಾಲು

ಲೀಗ್‌ನ ಕೊನೆಯ ಪಂದ್ಯ ಔಪಚಾರಿಕವಾಗುವ ಸಾಧ್ಯತೆ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಭಾನುವಾರ ನಡೆಯುವ ಕೊನೆಯ ಲೀಗ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. 'ಲೆಕ್ಕ'ದ ಪ್ರಕಾರ ಕೆಕೆಆರ್ ತಂಡದ ಪ್ಲೇ ಆಫ್ ಅವಕಾಶ ಜೀವಂತವಾಗಿದ್ದರೂ, ಅದು ಕ್ಷೀಣವಾಗಿದೆ. ಡೆಲ್ಲಿ ತಂಡ ಈಗಾಗಲೇ ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿದೆ.

ಕೆಕೆಆರ್ ಈಗ ಆರನೇ ಮತ್ತು ಡೆಲ್ಲಿ ತಂಡ ಎಂಟನೇ ಸ್ಥಾನದಲ್ಲಿವೆ. ಆದರೆ ಈ ಪಂದ್ಯಕ್ಕೆ ಮೊದಲು ನಡೆಯುವ ಮುಂಬೈ– ರಾಜಸ್ಥಾನ ಪಂದ್ಯದಲ್ಲಿ ರಾಯಲ್ಸ್ ಗೆದ್ದರೆ, ಈ ಪಂದ್ಯಕ್ಕೇನೂ ಮಹತ್ವ ಇರುವುದಿಲ್ಲ. ಪ್ಲೇಆಫ್ ಲೆಕ್ಕಾಚಾರಗಳೇನೇ ಇರಲಿ, ಎರಡೂ ತಂಡಗಳಿಗೆ ಗೆಲುವಿನೊಡನೆ ಅಭಿಯಾನ ಮುಗಿಸುವುದು ಮುಖ್ಯವಾಗಿದೆ.

ಬೌಲರ್‌ಗಳು ಗಾಯಾಳಾಗಿದ್ದು, ಈ ಋತುವಿನಲ್ಲಿ ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಅಭಿಯಾನದ ಮೇಲೆ ಪರಿಣಾಮ ಬೀರಿತು. ಬಾಂಗ್ಲಾದೇಶದ ವೇಗಿ ಮುಸ್ತಫಿಜುರ್ ರಹಮಾನ್ ಅವರನ್ನು ತಂಡದಿಂದ ಕೈಬಿಡಬೇಕಾಯಿತು. ಹರ್ಷಿತ್ ರಾಣಾ, ಆಕಾಶ್ ದೀಪ್, ಮಥೀಶ ಪಥಿರಾಣ ಕೂಡ ಅಲಭ್ಯರಾದರು. ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರಾನ್ ಗ್ರೀನ್ ಆರಂಭದ ಕೆಲವು ಪಂದ್ಯಗಳಲ್ಲಿ ಬೌಲಿಂಗ್ ಮಾಡಲಿಲ್ಲ.

ಅಮೋಘ ಚೇತರಿಕೆ: ಆದರೆ ಆರಂಭದಲ್ಲಿ ಸತತವಾಗಿ ಹಿನ್ನಡೆ ಕಂಡಿದ್ದ ಅಜಿಂಕ್ಯ ರಹಾನೆ ನೇತೃತ್ವದ ತಂಡ ನಂತರ ಅಮೋಘವಾಗಿ ಚೇತರಿಸಿದೆ. ಆಡಿದ ಕೊನೆಯ ಏಳು ಪಂದ್ಯಗಳಲ್ಲಿ ಆರರಲ್ಲಿ ಜಯಗಳಿಸಿದೆ.

ರಘುವಂಶಿ ಅಲಭ್ಯ: ಐದು ಅರ್ಧಶತಕಗಳೊಂದಿಗೆ ತಂಡದ ಪರ ಅತಿ ಹೆಚ್ಚು ರನ್ ಗಳಿಸಿರುವ ಮಧ್ಯಮ ಸರದಿಯ ಬ್ಯಾಟರ್ ಅಂಗ್‌ಕ್ರಿಶ್ ರಘುವಂಶಿ ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

ಪಾದದ ನೋವಿನಿಂದ ಬಳಲುತ್ತಿರುವ ವರುಣ್ ಚಕ್ರವರ್ತಿ ಅವರೂ ಫಿಟ್ನೆಸ್ ಪರೀಕ್ಷೆಗೆ ಒಳಗಾಗಲಿದ್ದು, ಅವರ ಲಭ್ಯತೆ ಕೊನೆಯ ಗಳಿಗೆಯಲ್ಲಿ ನಿರ್ಧಾರವಾಗಲಿದೆ.

ರಾಹುಲ್ ಮೇಲೆ ಭಾರ: ಡೆಲ್ಲಿ ಕ್ಯಾಪಿಟಲ್ಸ್ ತಂಡವು ದೊಡ್ಡ ಮೊತ್ತಕ್ಕಾಗಿ ಕೆ.ಎಲ್.ರಾಹುಲ್ ಅವರನ್ನು ಅವಲಂಬಿಸಿದೆ. ಕನ್ನಡಿಗ ಆಟಗಾರ ಈವರೆಗೆ 13 ಪಂದ್ಯಗಳಿಂದ 533 ರನ್ ಕಲೆಹಾಕಿದ್ದಾರೆ. ಸ್ಟ್ರೈಕ್‌ರೇಟ್ (171) ಕೂಡ ಉತ್ತಮವಾಗಿದೆ. ಡೇವಿಡ್ ಮಿಲ್ಲರ್ ತಂಡಕ್ಕೆ ಮರಳಿರುವುದು ಬ್ಯಾಟಿಂಗ್ ವಿಭಾಗಕ್ಕೆ ಬಲತಂದಿದೆ.

ಬೌಲಿಂಗ್ ವಿಭಾಗ ಅಷ್ಟೇನೂ ಪರಿಣಾಮಕಾರಿ ಎನಿಸಿಲ್ಲ. ವಿಶೇಷವಾಗಿ ಅನುಭವಿಗಳಾದ ವರುಣ್ ಚಕ್ರವರ್ತಿ ಮತ್ತು ಕುಲದೀಪ್ ಯಾದವ್ ಅವರಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ. ನಾಯಕ ಅಕ್ಷರ್ 32.30ರ ಸರಾಸರಿಯಲ್ಲಿ 10 ವಿಕೆಟ್ ಅಷ್ಟೇ ಗಳಿಸಿದ್ದಾರೆ. ಕುಲದೀಪ್ ಏಳು ವಿಕೆಟ್ ಗಳಿಸಿದ್ದರೂ, ಸರಾಸರಿ 50.28 ಆಗಿದೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	14	9	5	0	18	0.783
ಜಿ ಟಿ	14	9	5	0	18	0.695
ಎಸ್‌ಆರ್‌ಎಚ್	14	9	5	0	18	0.524
ಪಿಬಿಕೆಎಸ್	14	7	6	1	15	0.309
ಆರ್ ಆರ್	13	7	6	0	14	0.083
ಕೆಕೆಆರ್	13	6	6	1	13	0.011
ಸಿಎಸ್‌ಕೆ	14	6	8	0	12	- 0.345
ಡಿ ಸಿ	13	6	7	0	12	- 0.871
ಎಂ ಐ	13	4	9	0	8	- 0.510
ಎಲ್‌ಎಸ್‌ಜಿ	14	4	10	0	8	- 0.740

ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿಟಿ (638 ರನ್)

ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)

ಅಜಿಂಕ್ಯ ರಹಾನೆ


ಕೆ.ಎಲ್‌.ರಾಹುಲ್

ಬಲಾಬಲ ಒಟ್ಟು ಪಂದ್ಯ 36

ನೈಟ್‌ರೈಡರ್ಸ್ ಜಯ	20
ಕ್ಯಾಪಿಟಲ್ಸ್ ಗೆಲುವು	15
ಫಲಿತಾಂಶವಿಲ್ಲ	1

ಅಲ್ಫಾನ್ಸೀನ್ ಚಾಂಪಿಯನ್

ಪ್ರಜಾವಾಣಿ ಚಿತ್ರ: ಬಿ.ಕೆ.ಜನಾರ್ದನ

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ಕೆ.ಎನ್.ಗುರುಸ್ವಾಮಿ ಸ್ಮರಣಾರ್ಥ ಟ್ರೋಫಿ ರೇಸ್‌ನಲ್ಲಿ ಗೆದ್ದ 'ಅಲ್ಫಾನ್ಸೀನ್' ಕುದುರೆಯ ಜಾಕಿ ಟ್ರೆವರ್ ಪಟೇಲ್ ಅವರಿಗೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್‌ಕುಮಾರ್ (ಎಡದಿಂದ ಐದನೆಯವರು) ಅವರು ಟ್ರೋಫಿ ಪ್ರದಾನ ಮಾಡಿದರು. (ಎಡದಿಂದ) ಬಿಟಿಸಿ ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಎಂ.ಸಿ. ಮಂಜುನಾಥ್ ಅರಸ್, ಕೆ.ಶಾಶಾ ಬಿಂದು, ಸ್ಟೀವರ್ಡ್ ಸಿ.ಮಹೇಶ್ ಮೇದಪ್ಪ, ಬಿಟಿಸಿ ಅಧ್ಯಕ್ಷ ಎಲ್.ಶಿವಶಂಕರ್, 'ಅಲ್ಫಾನ್ಸೀನ್' ಮಾಲೀಕ ಪಿ.ಅರುಣ್ ಕುಮಾರ್, ತರಬೇತುದಾರ ಕೆ. ಪ್ರದೀಪ್ ಅಣ್ಣಯ್ಯ, ಸ್ಟೀವರ್ಡ್‌ಗಳಾದ ಶಂಕರ್ ಬಾಲು ಮತ್ತು ಆರ್. ಮಂಜುನಾಥ್ ರಮೇಶ್ ಉಪಸ್ಥಿತರಿದ್ದರು

ಇಂಗ್ಲೆಂಡ್‌ಗೆ ಮರಳಲಿರುವ ಜೇಕಬ್ ಬೆಥೆಲ್

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆರಂಭ ಆಟಗಾರ ಜೇಕಬ್ ಬೆಥೆಲ್ ಅವರು ಎಡಗೈನ ಉಂಗುರ ಬೆರಳಿನ ಗಾಯದಿಂದಾಗಿ ತವರು ಇಂಗ್ಲೆಂಡ್‌ಗೆ ಮರಳಲಿದ್ದಾರೆ.

ಹಾಲಿ ಐಪಿಎಲ್ ಟೂರ್ನಿಯಲ್ಲಿ ಅವರ ಆಟ ನಿರಾಶಾದಾಯಕವಾಗಿತ್ತು. ಫಿಲ್ ಸಾಲ್ಟ್ ಗಾಯಾಳಾದ ನಂತರ ಅವಕಾಶ ಪಡೆದಿದ್ದ ಅವರು ಏಳು ಪಂದ್ಯಗಳನ್ನು ಆಡಿದ್ದು 13ರ ಸರಾಸರಿಯಲ್ಲಿ 77 ರನ್ (ಸ್ಟ್ರೈಕ್‌ರೇಟ್ 124) ಗಳಿಸಿದ್ದರು. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ಅವರು ಆಡಿರಲಿಲ್ಲ.

ಬೆರಳಿನ ಗಾಯದಿಂದ ಚೇತರಿಸಿಕೊಂಡಿರುವ ಸಾಲ್ಟ್ ಅವರು ಆರ್‌ಸಿಬಿ ತಂಡಕ್ಕೆ ಮರಳಿದ್ದಾರೆ.

ಐಪಿಎಲ್‌ನಲ್ಲಿ ಸೂರ್ಯಕುಮಾರ್ ಯಾದವ್ ಕಳಪೆ ಸಾಧನೆಯಿಂದ ಭಾರತದ ಟಿ–20 ನಾಯಕತ್ವ ಕೈತಪ್ಪಲಿದೆಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಫ್ರೆಂಚ್ ಓಪನ್ ಇಂದಿನಿಂದ: ಜೊಕೊಗೆ 82ನೇ ಗ್ರ್ಯಾನ್‌ಸ್ಲಾಮ್



ಪ್ಯಾರಿಸ್ (ಎಪಿ): ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಭಾನುವಾರ ಫ್ರಾನ್ಸ್‌ನ ಜಿಯೋವಾನಿ ಎಂಪೆಟ್ಶಿ ಪೆರಿಕಾರ್ಡ್ ವಿರುದ್ಧ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದ್ದಾರೆ. ಇದು ಜೊಕೊವಿಚ್ ಅವರಿಗೆ ದಾಖಲೆಯ 82ನೇ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿದೆ.

ಎರಡು ದಿನಗಳ ಹಿಂದೆ 39ನೇ ಜನ್ಮದಿನ ಆಚರಿಸಿಕೊಂಡಿರುವ ಜೊಕೊವಿಚ್ ಟೆನಿಸ್ ದಂತಕಥೆಗಳಾದ ರೋಜರ್ ಫೆಡರರ್ ಮತ್ತು ಫೆಲಿಸಿಯಾನೊ ಲೋಪೆಜ್ ಅವರ (81 ಗ್ರ್ಯಾನ್‌ಸ್ಲಾಮ್) ದಾಖಲೆಯನ್ನು ಮುರಿಯಲಿದ್ದಾರೆ.

ಮಾರ್ಗರೇಟ್ ಕೋರ್ಟ್ ಅವರೊಂದಿಗೆ 24 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಗಳ ದಾಖಲೆಯನ್ನು ಹಂಚಿಕೊಂಡಿರುವ ಜೊಕೊವಿಕ್ ಅವರು 25ನೇ ಕಿರೀಟ ಗೆಲ್ಲುವ ಛಲದಲ್ಲಿದ್ದಾರೆ. ಬಲ ಭುಜದ ಗಾಯದಿಂದಾಗಿ ಎರಡು ತಿಂಗಳು ಸ್ಪರ್ಧಾ ಕಣದಿಂದ ಹೊರಗುಳಿದಿದ್ದ ಜೊಕೊವಿಕ್ ಅವರು ಈ ವರ್ಷ ಇಟಾಲಿಯನ್ ಓಪನ್‌ನ ಮೊದಲ ಸುತ್ತಿನಲ್ಲಿ ಕ್ರೊವೇಷ್ಯಾದ ಡಿನೋ ಪ್ರಿಜ್ಮಿಕ್ ವಿರುದ್ಧ ಸೋತಿದ್ದರು.

ಬ್ಯಾಸ್ಕೆಟ್‌ಬಾಲ್: ರಾಷ್ಟ್ರೀಯ ತಂಡಕ್ಕೆ ರಾಜ್ಯದ ಮೂವರು

ಬೆಂಗಳೂರು: ಕರ್ನಾಟಕದ ಮಹೆಕ್ ಶರ್ಮಾ, ಅದಿತಿ ಸುಬ್ರಮಣ್ಯನ್ ಹಾಗೂ ತಾರುಶ್ರೀ ತರುಣ್ ಅವರು ಶ್ರೀಲಂಕಾದಲ್ಲಿ ನಡೆಯಲಿರುವ ಫಿಬಾ 18 ವರ್ಷದೊಳಗಿನ ಮಹಿಳೆಯರ ಏಷ್ಯಾ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಅರ್ಹತಾ ಸುತ್ತಿನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ.

ದಕ್ಷಿಣ ಏಷ್ಯಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ವ್ಯಾಪ್ತಿಯ ಈ ಪ್ರಾದೇಶಿಕ ಅರ್ಹತಾ ಟೂರ್ನಿಯು ಕೊಲಂಬೊದಲ್ಲಿ ಸೋಮವಾರದಿಂದ (ಮೇ 25) ಶುಕ್ರವಾರದ (ಮೇ 29) ವರೆಗೆ ನಿಗದಿಯಾಗಿದೆ.

ಏಷ್ಯನ್ ಗೇಮ್ಸ್ ಕುಸ್ತಿ ಟ್ರಯಲ್ಸ್ ವಿನೇಶ್‌ಗೆ ಹೈಕೋರ್ಟ್ ಅನುಮತಿ



ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ಇದೇ 30, 31ರಂದು ನಡೆಯಲಿರುವ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ದೆಹಲಿ ಹೈಕೋರ್ಟ್ ಅನುಮತಿ ನೀಡಿದೆ.

ಭಾರತ ಕುಸ್ತಿ ಫೆಡರೇಷನ್‌ನ ಆಯ್ಕೆ ನೀತಿಯು 'ಒಳಗೊಳ್ಳುವಿಕೆ'ಗೆ ವಿರುದ್ಧವಾಗಿದೆ. ವಿನೇಶ್ ಅವರಂಥ ಛಾಪುಮೂಡಿಸಿದ ಆಟಗಾರ್ತಿಯ ಮನವಿ ಪರಿಶೀಲಿಸುವ ವಿವೇಚನೆ ಹೊಂದಿಲ್ಲ ಎಂದೂ ಹೇಳಿದೆ.

ಮಾತೃತ್ವ ವಿರಾಮದ ನಂತರ ವಿನೇಶ್ ಕುಸ್ತಿ ಅಖಾಡಕ್ಕೆ ಮರಳಿದ್ದಾರೆ. ಅದಕ್ಕಿಂತ ಮೊದಲು, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಕೊನೆಯ ಬಾರಿ ಕಣಕ್ಕಿಳಿದಿದ್ದರು.

ಮೇ 30 ಮತ್ತು 31ರಂದು ನಡೆಯುವ ಆಯ್ಕೆ ಟ್ರಯಲ್ಸ್‌ನ ವಿಡಿಯೊ ಚಿತ್ರೀಕರಣವನ್ನು ಡಬ್ಲ್ಯುಎಫ್‌ಐ ನಡೆಸಬೇಕು ಎಂದೂ ಹೈಕೋರ್ಟ್ ಪೀಠ ಹೇಳಿದೆ. ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾ. ತೇಜಸ್ ಕಾರಿಯಾ ಅವರನ್ನು ಪೀಠ ಒಳಗೊಂಡಿತು.

ಟ್ರಯಲ್ಸ್ ವೇಳೆ ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಮತ್ತು ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಸ್ವತಂತ್ರ ವೀಕ್ಷಕರು ಹಾಜರಿರಬೇಕು ಎಂದು ಹೇಳಿದೆ.

'ಅರ್ಜಿದಾರರಿಗೆ ಮೇ 30 ಮತ್ತು 31ರಂದು ನಡೆಯಲಿರುವ 2026ರ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅನುಮತಿ ನೀಡಬೇಕು' ಎಂದು ಕೋರ್ಟ್ ಇದೇ 22ರಂದು ನೀಡಿರುವ ಆದೇಶದಲ್ಲಿ ತಿಳಿಸಿದೆ. ಆದೇಶವನ್ನು ಶನಿವಾರ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ವಾಲಿಬಾಲ್: ಭಾರತ ಮಹಿಳೆಯರಿಗೆ ಜಯ

ಕಠ್ಮಂಡು: ಗೆಲುವಿನ ಓಟ ಮುಂದುವರಿಸಿರುವ ಭಾರತ ತಂಡವು, ಮಧ್ಯ ಏಷ್ಯಾ ಮಹಿಳಾ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಮಾಲ್ದೀವ್ಸ್ ತಂಡವನ್ನು 25–9, 25–14, 25–17 ರಲ್ಲಿ 3–0 ಸೆಟ್‌ಗಳಿಂದ ಸೋಲಿಸಿತು.

ಚಾಂಪಿಯನ್‌ಷಿಪ್‌ನ ಮೊದಲ ದಿನ ಭಾರತ ತಂಡವು 'ಎ' ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ನೇಪಾಳ ತಂಡವನ್ನು 3–2ರಿಂದ ಸೋಲಿಸಿತ್ತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ ಃ+ ಗ್ರೇಡ್ – 2021) PM-USHA (MERU)
E-mail: registrar@rcub.ac.in dpar@rcub.in Phone No.: 0831-2565203 Website: www.rcub.ac.in
ಕುಲಸಚಿವರ ಕಾರ್ಯಾಲಯ
ಸಂ: ರಾಚವಿ/ಬೆಳಗಾವಿ/ಕುಸಕಾ/ಸಿಆಸುವಿ/2026-27/919 ದಿನಾಂಕ:23.05.2026
ಪತ್ರಿಕಾ ಪ್ರಕಟಣೆ
ವಿಷಯ: 2026-27 ನೇ ಶೈಕ್ಷಣಿಕ ಸಾಲಿಗಾಗಿ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ ವಿವಿಧ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ Online ಮೂಲಕ ಅರ್ಜಿ ಆಹ್ವಾನಿಸಿರುವ ಬಗ್ಗೆ.
ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಸ್ನಾತಕ (UG) ಕೋರ್ಸ ವಿಷಯಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಯುಜಿಸಿ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ – 2000ರ ನಿಯಮಾನುಸಾರ ಪೂರ್ಣಕಾಲಿಕ/ಅರೆಕಾಲಿಕ/ತಾತ್ಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು P.G./Ph.D./NET/SET ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಂದ ಮೌಖಿಕ ಸಂದರ್ಶನಕ್ಕೆ (Walk–in-Interview) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿರುವ Google Sheet ಲಿಂಕನ್ನು ಬಳಸಿ ವಿವರಗಳನ್ನು ಕಡ್ಡಾಯವಾಗಿ ದಿನಾಂಕ: 25-05-2026 ರಿಂದ 10-06-2026 ರ ರೊಳಗಾಗಿ ಅರ್ಜಿಯನ್ನು ಭರ್ತಿ ಮಾಡಬೇಕು ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ದ್ವಿ–ಪ್ರತಿ ಅರ್ಜಿಗಳೊಂದಿಗೆ ವಿವಿಧ ವಿಷಯಗಳಿಗೆ ಅನುಗುಣವಾಗಿ ಸೂಚಿಸಿದ ದಿನಗಳಂದು ನೇರ ಸಂದರ್ಶನಕ್ಕೆ ಹಾಜರಾಗುವುದು. ಸಂದರ್ಶನದ ದಿನಾಂಕ ಮತ್ತು ಸಮಯವನ್ನು ನಂತರ ವಿಶ್ವವಿದ್ಯಾಲಯದ ಜಾಲತಾಣ www.rcub.ac.in ದಲ್ಲಿ ಪ್ರಕಟಿಸಲಾಗುವುದು.
ಸಹಿ/–
ಸಂತೋಷಕಾಮಗೌಡ ಕೆ.ಎ.ಎಸ್.
ಕುಲಸಚಿವರು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಆಸಕ್ತಿ ವ್ಯಕ್ತಪಡಿಸಲು ಆಹ್ವಾನ(ಇಓಐ) (KPP Portal ಮೂಲಕ)
ಬೆವಿಕಂ, ವಿಚಾರಣೆ ಸಂ: BESCOM/2026-27/SE0463 ರ ಅನ್ವಯ Performing Cyber Security Audit in BESCOM ಗಾಗಿ ಅರ್ಹ ಬಿಡ್‌ದಾರರುಗಳಿಂದ ಕೊಟೇಶನ್ ದರಗಳನ್ನು ಸಲ್ಲಿಸಲು ಆಸಕ್ತಿ ವ್ಯಕ್ತಪಡಿಸುವಿಕೆಯನ್ನು (ಇಓಐ) ಆಹ್ವಾನಿಸಿದೆ. ಬಿಡ್ ದಸ್ತಾವೇಜುಗಳ ವಿತರಣೆ: ದಿನಾಂಕ 25.05.2026 ರಂದು ಅಥವಾ ನಂತರ.
ಸಂಬಂಧಿಸಿದ ಪ್ರಕಟಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು: https://kppp.karnataka.gov.in ವೆಬ್‌ಸೈಟನ್ನು ಪ್ರವೇಶಿಸಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.
ಸಹಿ/–ಪ್ರಧಾನ ವ್ಯವಸ್ಥಾಪಕರು(ಡಾಸ್), ಬೆವಿಕಂ, BICC-1, 23ನೇ ಮೈನ್, 17ನೇ ಕ್ರಾಸ್, 2ನೇ ಸೆಕ್ಟರ್, HSR ಲೇಔಟ್, ಬೆಂಗಳೂರು–560102
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ–577501
ದೂ. ಸಂಖ್ಯೆ:08194 222733 E-mail:secapmcchitradurga@gmail.com
ಸಂಖ್ಯೆ:ಕೃಮಾಇ:ಕೃಉಮಾಸ(ಚಿ)/ಭದ್ರತೆ/ಸ್ವಚ್ಛತೆ/72–73/2026–27
ದಿನಾಂಕ: 20–5–2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)
ಚಿತ್ರದುರ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ 2026–27 ನೇ ಸಾಲಿಗೆ ಭದ್ರತಾ ಸಿಬ್ಬಂದಿ ಸರಬರಾಜು ಮಾಡಲು ಹಾಗೂ ಸ್ವಚ್ಛತೆ ಕೆಲಸ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಕಾರ್ಮಿಕ ಇಲಾಖೆಯಿಂದ ನೊಂದಾಯಿಸಲ್ಪಟ್ಟ ಆಸಕ್ತ ಅರ್ಹ ನೊಂದಾಯಿತ ಏಜೆನ್ಸಿಗಳಿಂದ/ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ 2.0 ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ.
(1) INDENT NO:APMC/2026-27/SE0857 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 06.06.2026ರ ಅಪರಾಹ್ನ 4.00 ಗಂಟೆವರೆಗೆ.
(2) INDENT NO:APMC/2026-27/SE0861 ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 08.06.2026ರ ಅಪರಾಹ್ನ 4.00 ಗಂಟೆವರೆಗೆ.
ಟೆಂಡರ್ ಷರತ್ತುಗಳು & ನಿಬಂಧನೆಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ 080–22501216 / 25501227 ರ ಮೂಲಕ ಪಡೆಯಬಹುದಾಗಿದೆ.
ಸಹಿ/– ಆಡಳಿತಾಧಿಕಾರಿಗಳು ಕೃ. ಉ. ಮಾ. ಸ., ಚಿತ್ರದುರ್ಗ.
ಸಹಿ/– ಕಾರ್ಯದರ್ಶಿ ಕೃ. ಉ. ಮಾ. ಸ., ಚಿತ್ರದುರ್ಗ.
RO.No.115:DIPR/CTA/KSMCA/2026-27

ಮಾತಾ–ಪಿತೃಗಳ ಪುಣ್ಯಸ್ಮರಣೆ

ಶ್ರೀ ಕೋಟೆ ಎನ್.ಸಿ. ಶ್ರೀನಿವಾಸ ರೆಡ್ಡಿ ಜನನ: 16-12-1931 ನಿಧನ: 24-05-2009
ಶ್ರೀಮತಿ ಗೌರಮ್ಮನವರು ಜನನ: 05-09-1938 ನಿಧನ: 22-01-2010
KBW Bricks ಕೋದಂಡರಾಮ ನಿಲಯ, ದೊಡ್ಡನೆಕ್ಕುಂದಿ ಮುಖ್ಯರಸ್ತೆ, ಬೆಂಗಳೂರು-37.
ನಮ್ಮೆಲ್ಲರ ಆರಾಧ್ಯ ದೇವರು ನೀವು, ನಮ್ಮ ಬದುಕಿನ ಬೇರು ನೀವು, ನೀವಿಲ್ಲದೆ ವರ್ಷಗಳು ಸವೆದಿವೆ.
ಕಾಲವೆಷ್ಟೆ ಉರುಳಿದರು, ನಿಮ್ಮ ಪ್ರೀತಿ, ತಾಳ್ಮೆ, ನಿಮ್ಮ ಆದರ್ಶಗಳೇ ನಮ್ಮ ಬದುಕಿನ ಮುನ್ನುಡಿ..
ನೀವಿರುವಿರಿ ಸದಾ ಬೆಳಕಾಗಿ ನಮ್ಮ ಮನಗಳಲ್ಲಿ, ನಾವಿರುವೆವು ನಿಮ್ಮದೇ ನೆನಪಿನಲ್ಲಿ ಸದಾ ಸ್ಮರಿಸುವೆವು.
ಕೋಟೆ ಕುಟುಂಬದವರು ಎನ್. ಎಸ್. ನಾಗರಾಜ ರೆಡ್ಡಿ, ಎನ್. ಎಸ್. ವಸಂತಮ್ಮ ಮತ್ತು ಎನ್. ಎಸ್. ನಂದೀಶ ರೆಡ್ಡಿ ಮಾಜಿ ಅಧ್ಯಕ್ಷರು, ಬಿ.ಎಂ.ಟಿ.ಸಿ., (ಮಾಜಿ ಶಾಸಕರು, ಕೆ. ಆರ್. ಪುರ, ಬೆಂಗಳೂರು)
ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಬಂಧು–ಮಿತ್ರರು.

ಬದುಕು ಕಟ್ಟಿಕೊಂಡ ಮುದ್ರಾಡಿ ಮಹಿಳೆಯರು

ಮಹಿಳಾ ಸ್ವಾವಲಂಬನೆ, ಸ್ವ ಉದ್ಯೋಗ ಮತ್ತು ಜೀವನೋಪಾಯ ವೃದ್ಧಿಗೆ ಕೈಗೊಂಡ ಪ್ರಯತ್ನಗಳಿಂದ ಮುದ್ರಾಡಿ ಗ್ರಾಮ ಪಂಚಾಯಿತಿ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿದೆ. 'ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ' ವಿಭಾಗದಲ್ಲಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದು ₹1 ಕೋಟಿಯ ಅನುದಾನಕ್ಕೆ ಭಾಜನವಾಗಿದೆ.

• ನವೀನ್ ಕುಮಾರ್ ಜಿ.

ಉಡುಪಿ ಜಿಲ್ಲೆಯ ಹೆಬ್ರಿ ಪೇಟೆಯಿಂದ ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಮುದ್ರಾಡಿ ಕಡೆಗೆ ಸಾಗುವ ರಸ್ತೆಯ ಬದಿಯಲ್ಲಿ ತುಳು ಭಾಷೆಯ ಒಂದು ಬೋರ್ಡ್ ಗಮನ ಸೆಳೆಯುತ್ತದೆ– 'ಬಲೇ ಉನ್ಕ'. ಅಂದರೆ, 'ಬನ್ನಿ ಊಟ ಮಾಡೋಣ'.

ಒಳ ಹೊಕ್ಕರೆ ಮನೆಯ ಅಡುಗೆಯ ಘಮಲು. ಬಾಣಲೆಯ ಕುದಿಯ ಸದ್ದು. ಒಲೆಯ ಮೇಲಿನ ಪಾತ್ರೆಗಳಿಂದ ಹೊರಬರುವ ಹಬೆ. ಅತಿಥಿಯನ್ನು ಮನೆಯವರಂತೆ ಕಾಣುವ ನಗು. ಆ ನಗುವಿನ ಹಿಂದೆ ಬದುಕಿನ ಜೊತೆ ಹೋರಾಡಿ ಗೆದ್ದ ಹೆಂಗಸರ ಕಠಿಣ ಪರಿಶ್ರಮವೂ ಅಡಗಿದೆ.

ಹೋಟೆಲ್ ನಡೆಸುತ್ತಿರುವ ಯಶೋಧಾ ಶೆಟ್ಟಿ ಮತ್ತು ದೀಪಾ ಶೆಟ್ಟಿ ಅವರಿಗೆ ಈ ಅಡುಗೆಮನೆ ಕೇವಲ ವ್ಯಾಪಾರದ ಜಾಗವಲ್ಲ; ಅದು ತಮ್ಮ ಕಾಲಿನ ಮೇಲೆ ತಾವು ನಿಲ್ಲಬೇಕು ಎನ್ನುವ ಛಲದ ಸಂಕೇತ. ಎರಡು ವರ್ಷಗಳ ಹಿಂದೆ 'ಓಂ ಶಕ್ತಿ ಸಂಜೀವಿನಿ ಒಕ್ಕೂಟ'ದ ಅಧೀನದಲ್ಲಿ ಕಾರ್ಯನಿರ್ವಹಿಸುವ 'ಶುಕ್ಲಂ ಸಂಜೀವಿನಿ ಸ್ವಸಹಾಯ ಸಂಘ'ದ ಮೂಲಕ ₹1.5 ಲಕ್ಷ ಸಾಲ ಪಡೆದು ಅವರು ಈ ಮಾಂಸಾಹಾರಿ ಹೋಟೆಲ್ ಆರಂಭಿಸಿದ್ದರು. ಆರಂಭದ ದಿನಗಳಲ್ಲಿ ಬೆಳಗ್ಗಿನಿಂದ ರಾತ್ರಿ ತನಕ ತಾವೇ ಅಡುಗೆ ಮಾಡಿ, ಪಾತ್ರೆ ತೊಳೆದು, ಗ್ರಾಹಕರಿಗೆ ಬಡಿಸಿ ಹೋಟೆಲ್ ನಡೆಸುತ್ತಿದ್ದರು. ಕೆಲ ದಿನಗಳಲ್ಲಿ ಗ್ರಾಹಕರು ಕಡಿಮೆಯಿದ್ದಾಗ ಆತಂಕವೂ ಕಾಡುತ್ತಿತ್ತು. ಆದರೆ ಮನೆಯ ಅಡುಗೆಯ ರುಚಿ ನಿಧಾನವಾಗಿ ಜನರನ್ನು ಸೆಳೆಯತೊಡಗಿತು. ಈಗ ಮಧ್ಯಾಹ್ನದ ವೇಳೆಗೆ ಹೋಟೆಲ್‌ನಲ್ಲಿ ಕುಳಿತು ಊಟ ಮಾಡಲು ಸ್ಥಳ ಹುಡುಕಬೇಕಾಗಿದೆ.

ಹೋಟೆಲ್‌ನ ಗೋಡೆಗಳ ಬಳಿ ಸ್ಟೀಲ್ ಪಾತ್ರೆಗಳ ಸದ್ದು ಕೇಳಿಸುತ್ತಿರುತ್ತದೆ. ಹೊರಗಡೆ ವಾಹನಗಳು ನಿಂತಿರುತ್ತವೆ. ದೂರದ ಊರುಗಳಿಂದ ಕೆಲಸಕ್ಕೆ ಹೋಗುವವರೂ ಇಲ್ಲಿ ಊಟಕ್ಕೆ ನಿಲ್ಲುತ್ತಾರೆ. 'ಮನೆಯ ಊಟ ಸಿಗುತ್ತೆ' ಎಂಬ ಮಾತೇ ಅವರ ಹೋಟೆಲ್‌ಗೆ ದೊಡ್ಡ ಪ್ರಚಾರವಾಗಿದೆ.

'ಮೊದಲಿಗೆ ನಮಗೆ ಹೋಟೆಲ್ ನಡೆಸೋದು ಸಾಧ್ಯವಾ ಅನ್ನೋ ಭಯ ಇತ್ತು. ಆದರೆ ಗುಂಪಿನ ಮಹಿಳೆಯರು, ಪಂಚಾಯಿತಿ ಸಿಬ್ಬಂದಿ ಎಲ್ಲರೂ ಧೈರ್ಯ ಕೊಟ್ಟರು' ಎಂದು ಯಶೋಧಾ ಶೆಟ್ಟಿ ಹೇಳುವಾಗ ಅವರ ಧ್ವನಿಯಲ್ಲಿ ಆತ್ಮವಿಶ್ವಾಸ ಸ್ಪಷ್ಟವಾಗುತ್ತದೆ.

ಮುದ್ರಾಡಿಯಲ್ಲಿ ಇಂಥ ಕಥೆಗಳು ಒಂದೆರಡಲ್ಲ. ಅಲ್ಲಿನ ಹೆಂಗಸರ ಬದುಕಿನಲ್ಲಿ 'ಸಂಜೀವಿನಿ' ಎನ್ನುವುದು ಕೇವಲ ಯೋಜನೆಯ ಹೆಸರಲ್ಲ; ಅದು ನಿಧಾನವಾಗಿ ಆತ್ಮವಿಶ್ವಾಸವಾಗಿ ಬದಲಾಗಿರುವ ಪದ.

ಎಂಟು ವರ್ಷಗಳ ಹಿಂದೆ ಗೇರುಬೀಜ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಬಲ್ಯಾಡಿಯ ಹೇಮಲತಾ ಅವರ ಬದುಕೂ ಇದಕ್ಕೆ ಉದಾಹರಣೆ. ಕಾರ್ಖಾನೆಯ ಕೆಲಸ ಬಿಟ್ಟ ಬಳಿಕ ಸಣ್ಣ ಅಂಗಡಿ ತೆರೆದರೂ ಮನೆಯ ಖರ್ಚು ನಿಭಾಯಿಸುವುದು ಕಷ್ಟವಾಗಿತ್ತು. ಗಂಡನಿಗೆ ಅನಾರೋಗ್ಯ. ಮಗಳು ಶಾಲೆಗೆ ಹೋಗುತ್ತಿದ್ದಳು. ಆ ದಿನಗಳಲ್ಲಿ ಬದುಕು ಎಂದರೆ ಪ್ರತಿದಿನದ ಲೆಕ್ಕಾಚಾರ.

ಅಂತಹ ಹೊತ್ತಿನಲ್ಲಿ ಅವರು ಮನೆಯಲ್ಲೇ ಉಪ್ಪಿನಕಾಯಿ ತಯಾರಿಸಿ ಮಾರಾಟ ಮಾಡಲು ಆರಂಭಿಸಿದರು. ಮೊದಲ ದಿನ ₹300 ತರಕಾರಿ ಖರೀದಿಸಿ ಮಾಡಿದ ಉಪ್ಪಿನಕಾಯಿಯೇ ಅವರ ಹೊಸ ಬದುಕಿನ ಆರಂಭವಾಗಿತ್ತು.

'ಆಗ ನನಗೆ ದೊಡ್ಡ ಕನಸುಗಳೇನೂ ಇರಲಿಲ್ಲ. ಮನೆ ನಿಭಾಯಿಸಬೇಕು ಅನ್ನೋದೇ ಮುಖ್ಯವಾಗಿತ್ತು' ಎಂದು ಹೇಳುವ ಹೇಮಲತಾ ಅವರ ಕಣ್ಣಲ್ಲಿ ಈಗ ಆತ್ಮವಿಶ್ವಾಸದ ಹೊಳಪು ಕಾಣಿಸುತ್ತದೆ.

ಸ್ವಸಹಾಯ ಸಂಘದ ಮೂಲಕ ಸಿಕ್ಕ ಸಾಲ ಅವರ ಕೈಗೆ ಹಣ ಮಾತ್ರ ಕೊಡಲಿಲ್ಲ; 'ನಾನೂ ಏನಾದರೂ ಮಾಡಬಲ್ಲೆ' ಎನ್ನುವ ಧೈರ್ಯವನ್ನೂ ನೀಡಿತು. ನಿಧಾನವಾಗಿ ಉಪ್ಪಿನಕಾಯಿ ಉದ್ಯಮ ವಿಸ್ತಾರವಾಯಿತು. ಮನೆಯ ಮುಂದೆಯೇ ಸ್ವಂತ ಪುಟ್ಟ ಘಟಕ ಕಟ್ಟಿದರು. 'ಸಂಜೀವಿನಿ ಶಿವದುರ್ಗಾ ಪ್ರಾಡಕ್ಟ್' ಹೆಸರಿನಲ್ಲಿ ಅವರು ತಯಾರಿಸುವ ಉಪ್ಪಿನಕಾಯಿ ಈಗ ಜಿಲ್ಲೆಯ ಹಲವಾರು ಅಂಗಡಿಗಳು, ಸೂಪರ್ ಮಾರ್ಕೆಟ್‌ಗಳ ಶೆಲ್ಫ್‌ಗಳಲ್ಲಿ ಕಾಣಿಸುತ್ತದೆ.

ಉಪ್ಪಿನಕಾಯಿ ತಯಾರಿಸುವ ದಿನಗಳಲ್ಲಿ ಬೆಳಗ್ಗಿನಿಂದಲೇ ಅವರ ಮನೆಯ ಅಂಗಳ ಚಟುವಟಿಕೆಯಿಂದ ಕಂಗೊಳಿಸುತ್ತದೆ. ಮಾವಿನಕಾಯಿ ಕತ್ತರಿಸುವುದು, ಉಪ್ಪು–ಖಾರದ ಅಳತೆ ನೋಡುವುದು, ಬಾಟಲಿಗಳನ್ನು ಸಿದ್ಧಪಡಿಸುವ ಎಲ್ಲ ಕೆಲಸಗಳನ್ನೂ ಮನೆಯವರ ಜೊತೆ ಸೇರಿ ಮಾಡುತ್ತಾರೆ. ಕೆಲವೊಮ್ಮೆ ಸ್ವಸಹಾಯ ಗುಂಪಿನ ಮಹಿಳೆಯರೇ ಅವರ ಉತ್ಪನ್ನಗಳನ್ನು ಮೇಳಗಳಿಗೆ ಕೊಂಡೊಯ್ಯುತ್ತಾರೆ. ಇನ್ನೊಮ್ಮೆ ಹೇಮಲತಾ ಅವರೇ ಸ್ಕೂಟಿಯಲ್ಲಿ ಅಂಗಡಿಗಳಿಗೆ ಸರಬರಾಜು ಮಾಡುತ್ತಾರೆ. ಒಮ್ಮೆ ₹300 ತರಕಾರಿಯಿಂದ ಆರಂಭವಾದ ಪ್ರಯತ್ನ ಇಂದು ಮನೆಯ ಆಧಾರವಾಗಿ ಬೆಳೆದಿದೆ.

'ಹಿಂದೆ ಮನೆಯ ಖರ್ಚಿಗೆ ಇತರರನ್ನು ನೋಡಬೇಕಾಗುತ್ತಿತ್ತು. ಈಗ ನನ್ನ ದುಡಿಮೆಯಿಂದ ಮನೆ ನಡೆಯುತ್ತಿದೆ ಅನ್ನೋ ಸಂತೋಷ ಇದೆ' ಎಂದು ಅವರು ಹೇಳುತ್ತಾರೆ.

ಮುದ್ರಾಡಿಯ 'ಓಂ ಶಕ್ತಿ ಸಂಜೀವಿನಿ ಒಕ್ಕೂಟ'ದ ಅಧೀನದಲ್ಲಿ ಕಾರ್ಯನಿರ್ವಹಿಸುವ 'ಶುಕ್ಲಂ' ಗುಂಪಿನ ಹನ್ನೆರಡು ಮಹಿಳೆಯರೂ ವಿಭಿನ್ನ ಸ್ವ ಉದ್ಯೋಗಗಳಲ್ಲಿ ತೊಡಗಿರುವುದು ವಿಶೇಷ. ಯಾರೋ ಬ್ಯೂಟಿ ಪಾರ್ಲರ್ ನಡೆಸುತ್ತಿದ್ದಾರೆ; ಇನ್ನೊಬ್ಬರು ಕೋಳಿ ಅಂಗಡಿ ಇಟ್ಟಿದ್ದಾರೆ; ಕೆಲವರು ಜೇನು ಸಾಕಣೆ ಮಾಡುತ್ತಿದ್ದಾರೆ; ಮತ್ತೊಬ್ಬರು ಕೋರಿರೊಟ್ಟಿ ತಯಾರಿಸುತ್ತಿದ್ದಾರೆ. ಒಮ್ಮೆ ಮನೆಯ ಗಡಿಗಳೊಳಗೆ ಸೀಮಿತವಾಗಿದ್ದ ಹೆಂಗಸರು ಈಗ ತಮ್ಮ ಕೈಯಿಂದ ಮನೆಯ ಆರ್ಥಿಕತೆಯನ್ನು ನಿಭಾಯಿಸುತ್ತಿದ್ದಾರೆ.

ಸ್ವಸಹಾಯ ಸಂಘಗಳ ಸಭೆಗಳು ಈಗ ಕೇವಲ ಉಳಿತಾಯದ ಲೆಕ್ಕಾಚಾರದ ಸ್ಥಳಗಳಲ್ಲ. ಅಲ್ಲಿ ಉದ್ಯಮದ ಮಾತುಗಳಿರುತ್ತವೆ. ಬ್ಯಾಂಕ್ ಸಾಲದ ಚರ್ಚೆಗಳಿರುತ್ತವೆ. ಯಾರ ಉತ್ಪನ್ನ ಎಲ್ಲಿ ಚೆನ್ನಾಗಿ ಮಾರಾಟವಾಗುತ್ತಿದೆ ಎನ್ನುವ ಮಾಹಿತಿ ಹಂಚಿಕೊಳ್ಳಲಾಗುತ್ತದೆ. ಒಬ್ಬರ ಯಶಸ್ಸು ಮತ್ತೊಬ್ಬರಿಗೆ ಧೈರ್ಯವಾಗುತ್ತದೆ. ಇದೇ ಕಾರಣಕ್ಕೆ ಮುದ್ರಾಡಿಯಲ್ಲಿ ಸ್ವಸಹಾಯ ಸಂಘಗಳು ನಿಧಾನವಾಗಿ ಸಾಮಾಜಿಕ ಬದಲಾವಣೆಯ ಕೇಂದ್ರಗಳಾಗಿ ರೂಪುಗೊಂಡಿವೆ.

ಮುದ್ರಾಡಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 650 ಮಹಿಳೆಯರನ್ನು 65 ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸಲಾಗಿದೆ. ಸುಮಾರು ₹1 ಕೋಟಿ ಸಾಲ ಸಣ್ಣ ಉದ್ಯಮಗಳಿಗೆ ಬಳಕೆಯಾಗಿದೆ. 50ಕ್ಕೂ ಹೆಚ್ಚು ಸೂಕ್ಷ್ಮ ಉದ್ಯಮಗಳು ಈ ಭಾಗದಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೆ ಈ ಅಂಕಿ–ಅಂಶಗಳಿಗಿಂತ ದೊಡ್ಡ ಬದಲಾವಣೆ ಬೇರೆಡೆ ಇದೆ. ಅದು ಹೆಂಗಸರ ಮುಖದಲ್ಲಿ ಕಾಣುವ ಆತ್ಮವಿಶ್ವಾಸದಲ್ಲಿ.

ಗ್ರಾಮದ ಬದಲಾವಣೆ ಕೇವಲ ಉದ್ಯಮಗಳಲ್ಲಷ್ಟೇ ಕಾಣಿಸುವುದಿಲ್ಲ. ಸಮಾಜದ ಅತ್ಯಂತ ದುರ್ಬಲರ ಬದುಕಿನಲ್ಲೂ ಅದರ ಸ್ಪರ್ಶ ಇದೆ.

ನೆಲ್ಲಿಕಟ್ಟೆಯ 58 ವರ್ಷದ ವಸಂತಿ ಅವರಿಗೆ ಶೇಕಡ 50 ರಷ್ಟು ಅಂಗವಿಕಲತೆ ಇದೆ. ಪತಿ ನಿಧನರಾದ ಬಳಿಕ ಒಬ್ಬಂಟಿಯಾಗಿಯೇ ಬದುಕು ಸಾಗಿಸುತ್ತಿದ್ದಾರೆ.

12ನೇ ಪುಟಕ್ಕೆ...

> ಮುದ್ರಾಡಿ ಗ್ರಾಮ ಪಂಚಾಯಿತಿಯಲ್ಲಿ ಸ್ವ ಉದ್ಯೋಗಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದೇವೆ. ಸಂಜೀವಿನಿ ಸಂಘಗಳ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಪೂರಕ ವಾತಾವರಣ ನಿರ್ಮಿಸಲಾಗಿದೆ. ಆಡಳಿತ ಮಂಡಳಿ ಇದ್ದ ಅವಧಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರ ಸಹಕಾರ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಅವರ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಯಿತು.
>
> **ಸುಭಾಸ್,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ

'ಬಲೇ ಉನ್ಸ' ಹೋಟೆಲ್‌ನಲ್ಲಿ ಯಶೋಧಾ ಶೆಟ್ಟಿ ಮತ್ತು ದೀಪಾ ಶೆಟ್ಟಿ

ಮುದ್ರಾಡಿ ಗ್ರಾಮ ಪಂಚಾಯಿತಿ ಕಚೇರಿ ಚಿತ್ರಗಳು: ಉಮೇಶ್ ಮಾರ್ಪಳ್ಳಿ

ವಸಂತಿ

ಈ ಅಂಗಡಿ ಹೆಸರೇ ಗ್ರಂಥಾಲಯ

• ಅಬ್ದುಲ್ ರಹಿಮಾನ್

ಕಾಸರಗೋಡು ಜಿಲ್ಲೆಯ ಉದ್ಯಾವರದ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ವಾಹನಗಳು ನಿರಂತರವಾಗಿ ಓಡುತ್ತಿದ್ದವು. ಹೆದ್ದಾರಿ ಬದಿಯ ಸಣ್ಣ ಚಹಾದಂಗಡಿಯೊಳಗೆ ಮಾತ್ರ ಬೇರೆಯದೇ ಲೋಕವಿತ್ತು. ಸ್ಟೌ ಮೇಲಿನ ಪಾತ್ರೆಯಲ್ಲಿ ಚಹಾ ಉಕ್ಕಿ ಹರಿಯುತ್ತಿದ್ದರೂ, ಪುಸ್ತಕಗಳ ರಾಶಿಯೊಳಗೆ ಮುಳುಗಿದ್ದ ಸುರೇಂದ್ರ ಕೋಟ್ಯಾನ್ ಅವರಿಗೆ ಅದರ ಪರಿವೇ ಇರಲಿಲ್ಲ. ತುಳುನಾಡಿನ ಇತಿಹಾಸ ಕುರಿತು ಮಾಹಿತಿ ಕೇಳಿಕೊಂಡು ಬಂದಿದ್ದ ವಿದ್ಯಾರ್ಥಿಗಾಗಿ ಅವರು ಕಪಾಟಿನೊಳಗೆ ಹಳೆಯ ಪುಸ್ತಕವೊಂದನ್ನು ಹುಡುಕುತ್ತಿದ್ದರು.

ಅವರ ಸುತ್ತ ಪುಸ್ತಕಗಳು ಗುಡ್ಡದಂತೆ ಇದ್ದವು. ಕೆಲವು ಬೀರುಗಳಲ್ಲಿ ಅಚ್ಚುಕಟ್ಟಾಗಿ ಜೋಡಿಸಲಾಗಿದ್ದರೆ, ಇನ್ನೂ ಕೆಲವು ಬೆಂಚುಗಳ ಮೇಲೆ, ನೆಲದ ಮೇಲೆ ರಾಶಿಯಾಗಿ ಬಿದ್ದಿದ್ದವು. ಹೊರಗೆ ವಾಹನಗಳ ಗದ್ದಲ, ಒಳಗೆ ತಂಗಾಳಿಗೆ ಮೃದುವಾಗಿ ತಿರುಗುತ್ತಿದ್ದ ಪುಸ್ತಕದ ಪುಟಗಳು. ಮಂಜೇಶ್ವರ ತಾಲ್ಲೂಕಿನ ಉದ್ಯಾವರದ ಮಾಡದಲ್ಲಿರುವ ಈ ಪುಟ್ಟ ಚಹಾದಂಗಡಿಯೊಳಗೆ ಅಪರೂಪದ ಜ್ಞಾನದ ಜಗತ್ತು ಅಡಗಿದೆ.

56 ವರ್ಷದ ಸುರೇಂದ್ರ ಕೋಟ್ಯಾನ್ ಈ ಚಹಾದಂಗಡಿಯ ಮಾಲೀಕರಷ್ಟೇ ಅಲ್ಲ; ನಾಲ್ಕು ದಶಕಗಳಿಂದ ತುಳುನಾಡಿನ ಇತಿಹಾಸ, ಜಾನಪದ ಮತ್ತು ಸಂಸ್ಕೃತಿಯ ನೆನಪುಗಳನ್ನು ಸಂಗ್ರಹಿಸುತ್ತಿರುವ ಅಕ್ಷರಪ್ರೇಮಿ. ಅಂಗಡಿಯ ಪ್ರವೇಶ ದ್ವಾರದಲ್ಲೇ ನಾರಾಯಣ ಗುರುಗಳ ಸಂದೇಶ ಕಣ್ಣಿಗೆ ಬೀಳುತ್ತದೆ– 'ಒಂದೇ ಜಾತಿ, ಒಂದೇ ಮತ, ಒಂದೇ ದೇವರು; ಜ್ಞಾನವೇ ದೇವರು'. ಆ ವಾಕ್ಯವೇ ಈ ಪುಟ್ಟ ಜಗತ್ತಿನ ತತ್ವದಂತಿದೆ.

ಸುರೇಂದ್ರ ಅವರು ಓದಿದ್ದು ಕೇವಲ ಎಂಟನೇ ತರಗತಿ. ಆದರೆ ಓದಿನ ಮೇಲಿನ ಪ್ರೀತಿ ಅವರಿಗೆ ಅಪರೂಪದ ಸಂಗ್ರಹಕಾರನ ಸ್ಥಾನ ನೀಡಿದೆ. ಕನ್ನಡ, ಮಲಯಾಳ ಮತ್ತು ಇಂಗ್ಲಿಷ್ ಭಾಷೆಗಳ ಹತ್ತು ಸಾವಿರಕ್ಕೂ ಹೆಚ್ಚು ಪುಸ್ತಕಗಳು ಇಂದು ಅವರ ಬಳಿಯಿವೆ. ತುಳುನಾಡಿನ ಇತಿಹಾಸ, ಭೂತಾರಾಧನೆ, ನಾಗಾರಾಧನೆ, ಬ್ಯಾರಿ ಸಂಸ್ಕೃತಿ, ಜಾನಪದ, ಜಾತಿ ಇತಿಹಾಸಗಳು ಹಾಗೂ ಸ್ಥಳೀಯ ಆಚರಣೆಗಳ ಕುರಿತ ಅನೇಕ ಅಪರೂಪದ ಗ್ರಂಥಗಳು ಇಲ್ಲಿ ಸಿಗುತ್ತವೆ. ಮರುಮುದ್ರಣವಾಗದ ಪುಸ್ತಕಗಳೂ ಈ ಸಂಗ್ರಹದ ಭಾಗವಾಗಿವೆ.

ಈ ಪುಸ್ತಕ ಪ್ರೀತಿ ಅವರಿಗೆ ಬಾಲ್ಯದಲ್ಲೇ ಹುಟ್ಟಿತ್ತು. ಮನೆಗೆ ಬರುತ್ತಿದ್ದ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳ ಓದಿನಿಂದ ಹೊಸ ಜಗತ್ತಿನ ಬಾಗಿಲು ತೆರೆಯಿತು. 'ಒಮ್ಮೆ ಪುಸ್ತಕಗಳ ಲೋಕಕ್ಕೆ ಕಾಲಿಟ್ಟರೆ ಅದರಿಂದ ಹೊರಬರಲು ಸಾಧ್ಯವಿಲ್ಲ' ಎಂದು ಸುರೇಂದ್ರ ನಗುತ್ತಲೇ ಹೇಳುತ್ತಾರೆ.

ಹದಿನೈದು ವರ್ಷದವರಾಗಿದ್ದಾಗಲೇ ಅವರು ಪುಸ್ತಕಗಳನ್ನು ಕಲೆಹಾಕಲು ಆರಂಭಿಸಿದ್ದರು. ತಾಯಿಯೊಂದಿಗೆ ನಡೆಸುತ್ತಿದ್ದ ತರಕಾರಿ ಅಂಗಡಿಯಿಂದ ಸಿಗುತ್ತಿದ್ದ ಅಲ್ಪ ಆದಾಯದಲ್ಲೇ ಪುಸ್ತಕ ಖರೀದಿಸುತ್ತಿದ್ದರು. ಭಾನುವಾರದ ಪತ್ರಿಕೆಗಳಲ್ಲಿ ಪ್ರಕಟವಾಗುವ ಪುಸ್ತಕ ವಿಮರ್ಶೆಗಳು, ಹೊಸ ಪ್ರಕಟಣೆಗಳ ಮಾಹಿತಿ ನೋಡಿ ಪ್ರಕಾಶಕರನ್ನು ನೇರವಾಗಿ ಸಂಪರ್ಕಿಸುತ್ತಿದ್ದರು. ಮಂಗಳೂರಿನ ಪುಸ್ತಕ ಮಳಿಗೆಗಳು, ಸಾಹಿತ್ಯ ಸಮ್ಮೇಳನಗಳು, ಪುಸ್ತಕ ಮೇಳಗಳು ಎಲ್ಲೆಲ್ಲಿ ಪುಸ್ತಕಗಳಿದ್ದವೋ ಅಲ್ಲಿ ಸುರೇಂದ್ರ ಇದ್ದರು.

'ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೂ ಹೋಗಿದ್ದೆ. ವಿಧಾನಸೌಧದಲ್ಲಿ ನಡೆದ ಪುಸ್ತಕ ಮೇಳದಲ್ಲೂ ಹಲವು ಪುಸ್ತಕಗಳನ್ನು ಖರೀದಿಸಿದ್ದೆ' ಎಂದು ಅವರು ಹೆಮ್ಮೆಯಿಂದ ಹೇಳುತ್ತಾರೆ.

ಆದರೆ ಈ ಸಂಗ್ರಹ ಕೇವಲ ಹವ್ಯಾಸದ ಫಲವಲ್ಲ. ಅದರ ಹಿಂದೆ ತಾಯಿಯ ಮಾತಿನ ಪ್ರಭಾವವಿದೆ. 'ಕಣ್ಣಿಲ್ಲದವರಿಗೆ ನೀನು ಕಣ್ಣಾಗಬೇಕು' ಎಂದು ತಾಯಿ ಹೇಳಿದ್ದನ್ನು ಸುರೇಂದ್ರ ಬದುಕಿನ ದಿಕ್ಕಾಗಿ ತೆಗೆದುಕೊಂಡಿದ್ದಾರೆ. 'ತಾಯಿ ಕಣ್ಣು ಎಂದಿದ್ದು ಜ್ಞಾನಕ್ಕೆ' ಎಂದು ಅವರು ಹೇಳುತ್ತಾರೆ.

ಐದು ವರ್ಷದ ಹಿಂದೆ ತಾಯಿ ನಿಧನರಾದರು. ನಾಲ್ಕು ವರ್ಷದ ಹಿಂದೆ ಮಗನನ್ನೂ ಕಳೆದುಕೊಂಡರು. ಆ ನೋವಿನ ದಿನಗಳಲ್ಲಿ ಅವರಿಗೆ ಸಾಂತ್ವನ ನೀಡಿದ್ದು ಇದೇ ಪುಸ್ತಕಗಳು. ಈಗ ತರಕಾರಿ ಅಂಗಡಿಯ ಜೊತೆಗೆ ಚಹಾ, ಕಬ್ಬಿನ ಹಾಲು, ಎಳನೀರು ಮಾರುತ್ತಾ ಬದುಕು ಸಾಗಿಸುತ್ತಿದ್ದಾರೆ. ಆದಾಯ ದೊಡ್ಡದಿಲ್ಲ. ಆದರೂ ಕಳೆದ ಹತ್ತು ವರ್ಷಗಳಲ್ಲಿ ಮಾತ್ರ ಪುಸ್ತಕಗಳಿಗಾಗಿ ಸುಮಾರು ₹10 ಲಕ್ಷ ಖರ್ಚು ಮಾಡಿದ್ದಾರೆ.

ಇತ್ತೀಚಿನವರೆಗೂ ಈ ಎಲ್ಲಾ ಪುಸ್ತಕಗಳು ಅವರ ಮನೆಯೊಳಗೇ ಇದ್ದವು. ಬೀರುಗಳಲ್ಲಿ, ಮೇಜುಗಳ ಮೇಲೆ, ನೆಲದ ಮೇಲೆ ರಾಶಿಯಾಗಿ ಬಿದ್ದಿದ್ದವು. ಜಾಗದ ಕೊರತೆಯಿಂದ ಅನೇಕ ಮೌಲ್ಯಯುತ ಗ್ರಂಥಗಳು ದೂಳು ಮತ್ತು ತೇವಾಂಶದ ನಡುವೆ ಹಾಳಾಗುವ ಸ್ಥಿತಿಯಲ್ಲಿದ್ದವು.

11ನೇ ಪುಟಕ್ಕೆ...

ಹುಡುಕುತ್ತಿರೋ ಪುಸ್ತಕ ಸಿಕ್ತಾ? ಚಿತ್ರಗಳು: ಫಕ್ರುದ್ದೀನ್ ಎಚ್.

ಮದ್ದಿನ ಹುಲಿಗೆ ಜೀವ ಕೊಡುವ ಊರು

ಜನರ ನಂಬಿಕೆ, ಭಕ್ತಿ ಮತ್ತು ಸಮುದಾಯದ ಒಗ್ಗಟ್ಟು ಸೇರಿ ಜೀವ ತುಂಬುವ ವಿಶಿಷ್ಟ ಆಚರಣೆಯೇ 'ಮದ್ದಿನ ಹುಲಿ' ಓಟ. ಸಿಡಿಮದ್ದಿನಿಂದ ಚಿಮ್ಮುವ ಈ ಹುಲಿಯ ಹಿಂದೆ ತಲೆಮಾರುಗಳಿಂದ ಬಂದ ಕಲಾ ನೈಪುಣ್ಯ, ಗ್ರಾಮೀಣ ತಂತ್ರಜ್ಞಾನ ಮತ್ತು ಇಡೀ ಊರಿನ ಶ್ರಮ ಅಡಗಿದೆ.

• ಬಷೀರಅಹ್ಮದ್ ನಗಾರಿ

ಬೆಳಗಿನ ಸೂರ್ಯ ಇನ್ನೂ ದೇಗಾಂವದ ಅಗಸಿಯನ್ನು ಸಂಪೂರ್ಣ ಆವರಿಸಿರಲಿಲ್ಲ. ಆದರೆ ಊರು ಎಚ್ಚರವಾಗಿತ್ತು. ಮನೆ ಮುಂದೆ ನೀರು ಎರಚಿ ರಂಗೋಲಿ ಹಾಕುತ್ತಿದ್ದ ಮಹಿಳೆಯರು, ಹಲಗೆ ಹೊತ್ತು ಓಡಾಡುತ್ತಿದ್ದ ಯುವಕರು, ದರ್ಗಾದತ್ತ ಸಾಗುತ್ತಿದ್ದ ಭಕ್ತರು, ಜೈ ಬಜರಂಗಬಲಿ ಗುಡಿಯ ಬಳಿ ಹಗ್ಗ ಕಟ್ಟುತ್ತಿದ್ದ ಹಿರಿಯರು– ಇಡೀ ಗ್ರಾಮವೇ ಸಂಭ್ರಮದಲ್ಲಿ ಮುಳುಗಿತ್ತು.

ಆ ದಿನ ದೇಗಾಂವದಲ್ಲಿ ಸಾಮಾನ್ಯ ದಿನವಲ್ಲ. ವರ್ಷಕ್ಕೊಮ್ಮೆ ಮಾತ್ರ ಕಾಣಿಸಿಕೊಳ್ಳುವ 'ಮದ್ದಿನ ಹುಲಿ'ಗಳ ಓಟದ ದಿನ.

ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಈ ಪುಟ್ಟ ಗ್ರಾಮದಲ್ಲಿ ಶೇಖ್ ಜಿಂದಾವಲಿ ದರ್ಗಾದ ಉರುಸ್ ಮತ್ತು ಜೈ ಬಜರಂಗಬಲಿ ಮಂದಿರದ ಜಾತ್ರೆ ಒಟ್ಟಿಗೇ ನಡೆಯುತ್ತದೆ. ಮೂರು ದಿನಗಳ ಈ ಆಚರಣೆಯ ಮೊದಲ ದಿನ ಗಂಧೋತ್ಸವ, ಎರಡನೇ ದಿನ ದೀಪೋತ್ಸವ. ಮೂರನೇ ದಿನ 'ಮದ್ದಿನ ಹುಲಿ'ಗಳ ಸಂಭ್ರಮ.

ಆ ದಿನ ಬೆಳಗಿನಿಂದಲೇ ಗ್ರಾಮದಲ್ಲಿ ಒಂದು ರೀತಿಯ ಚಡಪಡಿಕೆ ಕಾಣಿಸುತ್ತದೆ. ಹರಕೆ ಹೊತ್ತವರು ಹೊಸ ಬಟ್ಟೆ ತೊಟ್ಟು ಓಡಾಡುತ್ತಿದ್ದರೆ, ಮಕ್ಕಳು 'ಈ ಸಲ ಎಷ್ಟು ಹುಲಿ ಓಡ್ತವೆ?' ಎಂದು ಕುತೂಹಲದಿಂದ ಕೇಳುತ್ತಿರುತ್ತಾರೆ. ಅಗಸಿಯಲ್ಲಿ ಹಿರಿಯರು ಹಗ್ಗವನ್ನು ಪರಿಶೀಲಿಸುತ್ತಿರುತ್ತಾರೆ. ಆದರೆ ಈ ದಿನದ ಸಂಭ್ರಮದ ಹಿಂದೆ ಎರಡು ತಿಂಗಳ ಶ್ರಮ ಇರುತ್ತದೆ.

ದೇಗಾಂವದಲ್ಲಿ ಮದ್ದಿನ ಹುಲಿ ಹುಟ್ಟುವುದು ಕೇವಲ ಜಾತ್ರೆಯ ದಿನವಲ್ಲ. ಯುಗಾದಿ ಮುಗಿದ ತಕ್ಷಣವೇ ಅದಕ್ಕೆ ಜೀವಕೊಡುವ ಸಿದ್ಧತೆ ಆರಂಭವಾಗುತ್ತದೆ.

ಯಾರಾದರೂ ಭಕ್ತರು ತಮ್ಮ ಇಷ್ಟಾರ್ಥ ಈಡೇರಿದರೆ ಮದ್ದಿನ ಹುಲಿ ಓಡಿಸುವ ಹರಕೆ ಹೊರುತ್ತಾರೆ. ಆ ವರ್ಷ ಎಷ್ಟು ಹರಕೆಗಳಿವೆ ಎಂಬುದು ಗೊತ್ತಾದ ಬಳಿಕ ಗ್ರಾಮದಲ್ಲಿ ಹುಲಿ ನಿರ್ಮಾಣದ ಕೆಲಸ ಆರಂಭವಾಗುತ್ತದೆ.

ಗ್ರಾಮದ ಚಂದ್ರಶೇಖರ ಬಿರಾದಾರ, ಬಸವರಾಜ ಮಣಕೂಜಿ, ಸುಭಾಶ್ಚಂದ್ರ ಲಾಡವಂತಿ, ಸಿದ್ಧಪ್ಪ ಕೊಹಿನೂರ, ದೌಲತರಾಯ ಬಿರಾದಾರ ಮನೆತನಗಳು ತಲೆಮಾರುಗಳಿಂದ ಈ ಹೊಣೆ ಹೊತ್ತುಕೊಂಡಿವೆ.

ಒಂದು ಹುಲಿಗೆ ಸುಮಾರು 10 ಕೆ.ಜಿ. ಮದ್ದು ಬೇಕಾಗುತ್ತದೆ. ಬಿಳಿ ಎಕ್ಕ ಗಿಡದ ಕಟ್ಟಿಗೆಯ ಇದ್ದಿಲು, ಉಪ್ಪು, ಗಂಧಕ ಸೇರಿಸಿ ಮದ್ದು ತಯಾರಿಸಲಾಗುತ್ತದೆ. ಅದನ್ನು ಬೀಸುವ ಕಲ್ಲಿನಲ್ಲಿ ನುಣ್ಣಗೆ ಬೀಸಿ ಇಡಲಾಗುತ್ತದೆ. ಆದರೆ ಮದ್ದು ಸಿದ್ಧಪಡಿಸುವುದೇ ದೊಡ್ಡ ಕೆಲಸ ಅಲ್ಲ. ಅದನ್ನು ಕೊಂಬಿನಲ್ಲಿ ತುಂಬುವುದೇ ಅಸಲಿ ಶ್ರಮ. ದನಗಳ ಕೊಂಬುಗಳನ್ನು ಖರೀದಿಸಿ ಒಂದು ತಿಂಗಳು ನೀರಿನಲ್ಲಿ ನೆನೆಸಿಡಲಾಗುತ್ತದೆ. ಬಳಿಕ ಅವುಗಳನ್ನು ಸ್ವಚ್ಛಗೊಳಿಸಿ ಒಂದೇ ಅಳತೆಯಲ್ಲಿ ಕತ್ತರಿಸಲಾಗುತ್ತದೆ. ನಂತರ ಆರಂಭವಾಗುತ್ತದೆ 'ಮದ್ದು ಕುಟ್ಟುವ' ಕೆಲಸ.

ಆ ದಿನ ಗ್ರಾಮದಲ್ಲಿ ಬೇರೆ ವಾತಾವರಣವೇ ಇರುತ್ತದೆ. ಹಲಗೆಗಳ ಲಯಬದ್ಧ ನಾದದ ನಡುವೆ ಯುವಕರು, ಹಿರಿಯರು ಸೇರಿ ಮದ್ದು ಕುಟ್ಟುತ್ತಾರೆ. ಮೊದಲೇ ಸಿದ್ಧಪಡಿಸಿದ ಮದ್ದನ್ನು ಕೊಂಬಿನಲ್ಲಿ ಸ್ವಲ್ಪ ಸ್ವಲ್ಪ ತುಂಬಿ ಕಟ್ಟಿಗೆ, ಕೊಡತಿಯ ನೆರವಿನಿಂದ ಹೊಡೆದು ಗಟ್ಟಿಗೊಳಿಸಲಾಗುತ್ತದೆ. ಗಂಟೆಗಟ್ಟಲೆ ನಡೆಯುವ ಈ ಕೆಲಸದಲ್ಲಿ ಬೆವರು ಹರಿಯುತ್ತದೆ. ಆದರೆ ಯಾರ ಮುಖದಲ್ಲೂ ಆಯಾಸ ಕಾಣಿಸುವುದಿಲ್ಲ. 'ಮದ್ದು ಕುಟ್ಟುವಾಗ ಹಲಗೆ ಬಾರಿಸದೇ ಇದ್ದರೆ ಉತ್ಸಾಹವೇ ಬರಲ್ಲ' ಎಂದು ನಗುತ್ತಾರೆ ಮದ್ದುಗಾರ ಚಂದ್ರಶೇಖರ ಬಿರಾದಾರ.

ಹನ್ನೆರಡು ಇಂಚಿನ ಕೊಂಬಿನಲ್ಲಿ ಸುಮಾರು ಏಳು ಇಂಚಿನಷ್ಟು ಮದ್ದು ತುಂಬಲಾಗುತ್ತದೆ. ಹಿಂಭಾಗಕ್ಕೆ ತಗಡಿನ ಬಿಲ್ಲೆ ಜೋಡಿಸಿ ಗಟ್ಟಿಗೊಳಿಸಲಾಗುತ್ತದೆ. ಉಳಿದ ಭಾಗಕ್ಕೆ ಹಾಳುಮಣ್ಣು, ಸುಣ್ಣ, ಅಂಟಿನ ಮಿಶ್ರಣ ತುಂಬುತ್ತಾರೆ. ಕೊಂಬಿನ ತುದಿಯಲ್ಲಿ ಸಣ್ಣ ರಂಧ್ರ ಮಾಡಿ ಬತ್ತಿ ಅಳವಡಿಸಲಾಗುತ್ತದೆ. ಒಂದೊಂದು ಹುಲಿಗೆ ಇಂಥ ಇಪ್ಪತ್ತು ಮದ್ದಿನ ಕೊಂಬುಗಳು ಬೇಕಾಗುತ್ತವೆ.

ಮದ್ದಿನ ಕೆಲಸ ನಡೆಯುತ್ತಿದ್ದಂತೆ ಮತ್ತೊಂದೆಡೆ ಹುಲಿಯ ಆಕೃತಿ ನಿರ್ಮಾಣವೂ ಆರಂಭವಾಗುತ್ತದೆ. ಈ ಹೊಣೆ ಗಣಪತಿ ಸುತಾರ ಕುಟುಂಬದ್ದು. ಬಾರೆ ಹಾಗೂ ಬಬೂಲ್ ಮರದ ಕಟ್ಟಿಗೆಯಿಂದ ಹುಲಿಯ ತಡಿಕೆ ನಿರ್ಮಿಸಲಾಗುತ್ತದೆ. ಅದು ಓಡಲು ನೆರವಾಗುವಂತೆ ನಾಲ್ಕು ಗಾಲಿ ಅಳವಡಿಸಲಾಗುತ್ತದೆ. ಮುಂಬದಿ–ಹಿಂಬದಿ ಕಾಲುಗಳ ನಡುವೆ ಅಡ್ಡಪಟ್ಟಿ ಹಾಕಿ ಹಗ್ಗ ಪೋಣಿಸಲು ರಂಧ್ರ ಮಾಡಲಾಗುತ್ತದೆ.

ಒಣಗಿದ ಕುಂಬಳಕಾಯಿ ಬಳಸಿ ಹುಲಿಯ ಮುಖ ರೂಪಿಸಲಾಗುತ್ತದೆ. ನಂತರ ಹಳದಿ ಬಣ್ಣದ ಕಾಗದ ಹೊದಿಸಿ, ಕಣ್ಣು, ಹಲ್ಲು, ನಾಲಿಗೆ ಬರೆದು ಅದಕ್ಕೆ ಹುಲಿಯ ರೂಪ ನೀಡಲಾಗುತ್ತದೆ. ರಾತ್ರಿ ಹೊತ್ತಿಗೂ ಯುವಕರು ಕೂತು ಕಾಗದ ಅಂಟಿಸುತ್ತಿರುತ್ತಾರೆ. ಮಕ್ಕಳು ಪಕ್ಕದಲ್ಲಿ ನಿಂತು ನೋಡುತ್ತಿರುತ್ತಾರೆ. ಹಿರಿಯರು ಸೂಚನೆ ನೀಡುತ್ತಿರುತ್ತಾರೆ. ಹರಕೆ ಒಬ್ಬರದ್ದಾದರೂ, ಹುಲಿ ಮಾತ್ರ ಇಡೀ ಊರದ್ದಾಗಿರುತ್ತದೆ.

13ನೇ ಪುಟಕ್ಕೆ...

ಮದ್ದಿನ ಹುಲಿ ಓಟದ ಸಂಭ್ರಮ ಚಿತ್ರಗಳು: ತಾಜುದ್ದೀನ್ ಆಜಾದ್

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ ಪ್ರಜಾವಾಣಿ ನೋಡಿಯೊ

ಹಡಗಲಿ ಮಲ್ಲಿಗೆ ಹೊರಟೆ ನೀ ಎಲ್ಲಿಗೆ?

ಇದೇ ನೋಡಿ ಹಡಗಲಿ ಮಲ್ಲಿಗೆ ಚಿತ್ರಗಳು: ಸತೀಶ್ ಬಡಿಗೇರ

ಹಡಗಲಿ ಮಲ್ಲಿಗೆಯ ಪರಿಮಳವೇ ಅದರ ಅಸ್ತಿತ್ವದ ಭಾಷೆ. ಅರಳಿದ ಕ್ಷಣದಿಂದಲೇ ತನ್ನ ಸುವಾಸನೆಯ ಮೂಲಕ ಸುತ್ತಮುತ್ತಲನ್ನು ಆವರಿಸುವ ಈ ಹೂವು, ಕೇವಲ ಒಂದು ಬೆಳೆಯಲ್ಲ; ಹಡಗಲಿಯ ಸಂಸ್ಕೃತಿ, ನೆನಪು ಮತ್ತು ಬದುಕಿನ ಭಾಗ. ಬದಲಾದ ಕಾಲ, ಮಾರುಕಟ್ಟೆ ಮತ್ತು ಜೀವನಶೈಲಿಗಳ ನಡುವೆಯೂ ತನ್ನ ಇರುವಿಕೆಯನ್ನು ಖಾತರಿಪಡಿಸಿಕೊಂಡಿದೆ.

• ಆರ್.ಬಿ.ಗುರುಬಸವರಾಜ

'ಅಕ್ಕಾ, ಸ್ವಲ್ಪ ಪರಿಮಳ ನೋಡಿ... ಇದು ಹಡಗಲಿ ಮಲ್ಲಿಗೆ!' ದಾವಣಗೆರೆಯ ಹೂವಿನ ಮಾರುಕಟ್ಟೆಯಲ್ಲಿ ವ್ಯಾಪಾರಿಯೊಬ್ಬಳು ಕೈಯಲ್ಲಿ ಹಿಡಿದಿದ್ದ ಪುಟ್ಟ ಮಲ್ಲಿಗೆಯ ಹಾರವನ್ನು ಮಹಿಳೆಯೊಬ್ಬಳ ಕಡೆ ಚಾಚುತ್ತಾಳೆ. ಆಕೆ ಹಾರವನ್ನು ಮೂಗಿನ ಹತ್ತಿರ ತಂದು ಒಮ್ಮೆ ಪರಿಮಳ ಆಘ್ರಾಣಿಸುತ್ತಾಳೆ. ಕ್ಷಣಾರ್ಧದಲ್ಲೇ ಮುಖದಲ್ಲಿ ಮಂದಹಾಸ ಮೂಡುತ್ತದೆ. 'ಇದು ನಿಜವಾಗಿಯೂ ಹಡಗಲಿ ಮಲ್ಲಿಗೇ... ಪರಿಮಳ ಹೇಳ್ತಿದೆ' ಎಂದು ಹೇಳಿ ಇನ್ನೂ ಎರಡು ಹಾರಗಳನ್ನು ಖರೀದಿಸುತ್ತಾಳೆ.

ಹೂವಿನ ಮಾರುಕಟ್ಟೆಯಲ್ಲಿ ಹಡಗಲಿ ಮಲ್ಲಿಗೆಯನ್ನು ಜನ ಗುರುತಿಸುವುದು ಅದರ ಗಾತ್ರದಿಂದಲ್ಲ, ಬಣ್ಣದಿಂದಲ್ಲ–ಪರಿಮಳದಿಂದ. ಒಂದು ಸಣ್ಣ ಮೊಗ್ಗು ಸಾಕು; ಸುತ್ತಲಿನ ಗಾಳಿಯನ್ನೇ ಬದಲಿಸುವಷ್ಟು ಗಾಢವಾದ ಸುಗಂಧ. ಅದಕ್ಕಾಗಿಯೇ 'ವಾಸನೆ ಮಲ್ಲಿಗೆ' ಎಂಬ ಹೆಸರು ಈ ಹೂವಿಗೆ ಅಂಟಿಕೊಂಡಿದೆ.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಭಾಗದಲ್ಲಿ ಬೆಳೆಯುವ ಈ ಮಲ್ಲಿಗೆ, ಕೇವಲ ಒಂದು ಹೂವಿನ ತಳಿಯಲ್ಲ. ಅದು ನೂರಾರು ಕುಟುಂಬಗಳ ಬದುಕು, ಮಹಿಳೆಯರ ಕೈಚಳಕ, ರೈತರ ನಂಬಿಕೆ ಮತ್ತು ಹಳ್ಳಿಗಳ ಆರ್ಥಿಕತೆಯ ಭಾಗವಾಗಿದೆ. ಬೆಳಗಿನ ಜಾವ ತೋಟಗಳಲ್ಲಿ ಮೊಗ್ಗು ಬಿಡಿಸುವ ಕೆಲಸ ಆರಂಭವಾದರೆ, ಮಧ್ಯಾಹ್ನಕ್ಕೆ ಮಾರುಕಟ್ಟೆ ಕಡೆಗೆ ತೆರಳುವ ವಾಹನಗಳಲ್ಲಿ ಹಡಗಲಿ ಮಲ್ಲಿಗೆಯ ಪರಿಮಳವೇ ತುಂಬಿರುತ್ತದೆ.



ಒಮ್ಮೆ ಹಡಗಲಿ ಪಟ್ಟಣದ ಸುತ್ತ ಸಾವಿರಾರು ಎಕರೆ ಪ್ರದೇಶದಲ್ಲಿ ಮಲ್ಲಿಗೆ ಬೆಳೆಯಲಾಗುತ್ತಿತ್ತು. ಇಂದಿಗೂ ತಿಪ್ಪಾಪುರ, ತಿಮ್ಲಾಪುರ, ಹಗರನೂರು, ಹನಕನಹಳ್ಳಿ, ದೇವಗೊಂಡನಹಳ್ಳಿ ಸೇರಿದಂತೆ 23ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಮಲ್ಲಿಗೆ ಕೃಷಿ ಮುಂದುವರಿದಿದೆ. ಪ್ರತಿದಿನ ಇಲ್ಲಿ ಬಿಡಿಸುವ ಮೊಗ್ಗುಗಳು ದಾವಣಗೆರೆ, ಶಿವಮೊಗ್ಗ, ಹಾವೇರಿ, ಗದಗ ಸೇರಿದಂತೆ ಹಲವು ನಗರಗಳಿಗೆ ಸಾಗುತ್ತವೆ.

ಹಡಗಲಿ ಮಲ್ಲಿಗೆಯ ಇತಿಹಾಸ

ಎಂಟನೇ ಶತಮಾನಕ್ಕೂ ಮುಂಚೆಯೇ ಹೂವಿನಹಡಗಲಿ ಭಾಗದಲ್ಲಿ ಹೂವಿನ ಸಂಸ್ಕೃತಿ ನೆಲೆಸಿತ್ತು ಎಂಬುದಕ್ಕೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಏಣಗಿ ಗ್ರಾಮದ ಶಿಲಾಶಾಸನವೇ ಸಾಕ್ಷಿ. ನೊಳಂಬವಾಡಿ ಅರಸರ ಕಾಲದ ಶಾಸನಗಳಲ್ಲಿ 'ಹೂವು ಕಟ್ಟುವವರ ಬೀದಿ' ಎಂಬ ಉಲ್ಲೇಖ ಕಾಣಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಹಡಗಲಿ ಭಾಗದ ರೈತರು ತುಂಗಭದ್ರಾ ನದಿ ಮೂಲಕ ಹಂಪಿಯ ವಿರೂಪಾಕ್ಷ ದೇವಾಲಯಕ್ಕೆ ಮಲ್ಲಿಗೆ ಕಳಿಸುತ್ತಿದ್ದರು ಎಂಬ ಪ್ರತೀತಿ ಇದೆ. ಹಡಗುಗಳಲ್ಲಿ ಹೂ ಸಾಗುತ್ತಿದ್ದ ಕಾರಣ 'ಹೂವಿನ ಹಡಗಲಿ' ಎಂಬ ಹೆಸರು ಬಂದಿದೆ ಎನ್ನಲಾಗುತ್ತದೆ.

1077ರ ಶಾಸನದಲ್ಲಿ 'ಪೂವಿನ ಪಡಂಗಲಿ' ಎಂಬ ಉಲ್ಲೇಖವೂ ಸಿಗುತ್ತದೆ. ಶತಮಾನಗಳಿಂದ ಹಡಗಲಿ ಹೆಸರಿನೊಂದಿಗೆ ಹೂವಿನ ನಂಟು ಬೆಸೆದುಕೊಂಡಿದೆ.

ಹಡಗಲಿ ಮಲ್ಲಿಗೆಯ ವೈಶಿಷ್ಟ್ಯ ಅದರ ಪರಿಮಳ ಮಾತ್ರವಲ್ಲ. ಈ ಹೂವು ಬೇಗ ಬಾಡುವುದಿಲ್ಲ. ಬಿಸಿಲಿಗೆ ಹೆಚ್ಚು ಒಡ್ಡದಿದ್ದರೆ ಒಂದೆರಡು ದಿನಗಳವರೆಗೆ ತನ್ನ ತಾಜಾತನ ಕಾಪಾಡಿಕೊಳ್ಳುತ್ತದೆ. ಶುಭ್ರ ಬಿಳಿ ಬಣ್ಣದ ಏಳು ದಳಗಳ ಈ ಮಲ್ಲಿಗೆ ನಕ್ಷತ್ರಾಕಾರದ ರೂಪ ಹೊಂದಿದೆ. 'ಜಾಸ್ಮಿನಮ್ ಅರ್ಥೋರಿಕಮ್' ಜಾತಿಗೆ ಸೇರಿದ ಈ ಹೂವು ಗಾತ್ರದಲ್ಲಿ ಚಿಕ್ಕದಾದರೂ ಮಾರುಕಟ್ಟೆಯಲ್ಲಿ ತನ್ನದೇ ಗುರುತು ಹೊಂದಿದೆ.

ಮದುವೆ, ಜಾತ್ರೆ, ಹಬ್ಬ–ಯಾವ ಸಂಭ್ರಮದಲ್ಲಾದರೂ ಹಡಗಲಿ ಮಲ್ಲಿಗೆಗೆ ಬೇಡಿಕೆ ಕಡಿಮೆಯಾಗುವುದಿಲ್ಲ. ಬಾಲಕಿಯರು ಜಡೆಗೆ ಮೊಗ್ಗು ಕಟ್ಟಿಕೊಳ್ಳುತ್ತಾರೆ. ಮದುವೆಗಳಲ್ಲಿ ಮಧುಮಕ್ಕಳಿಗಾಗಿ ವಿಶೇಷ ಹಾರಗಳನ್ನು ತಯಾರಿಸಲಾಗುತ್ತದೆ. ಮುಸ್ಲಿಂ ಸಮುದಾಯದ ಮದುವೆಗಳಲ್ಲಿ ವಧು-ವರರ ಅಲಂಕಾರಕ್ಕಾಗಿ ಬಳಸುವ ಶೇಹರಾ ಮತ್ತು ತುರಾಯಿಗಳಲ್ಲಿ ಹಡಗಲಿ ಮಲ್ಲಿಗೆಯದ್ದೇ ಮೇಲುಗೈ. ಅತ್ತರ್ ಮತ್ತು ಊದುಬತ್ತಿ ತಯಾರಿಕೆಯಲ್ಲಿ ಕೂಡ ಇದರ ಪರಿಮಳ ಬಳಸಲಾಗುತ್ತದೆ.

ಈ ಮಲ್ಲಿಗೆಯ ಸುತ್ತ ಒಂದು ಸಂಪೂರ್ಣ ಉದ್ಯೋಗ ವ್ಯವಸ್ಥೆಯೇ ರೂಪುಗೊಂಡಿತ್ತು. ತೋಟಗಳಲ್ಲಿ ಮೊಗ್ಗು ಬಿಡಿಸುವವರು, ಹೂ ಕಟ್ಟುವವರು, ಮಾರುಕಟ್ಟೆಗೆ ಸಾಗಿಸುವ ಎಲ್ಲರ ಬದುಕೂ ಇದರೊಂದಿಗೆ ಬೆಸೆದುಕೊಂಡಿತ್ತು. ಮಧ್ಯಾಹ್ನ ಹೊತ್ತಿಗೆ ಗೋಣಿ ಚೀಲಗಳಲ್ಲಿ ತುಂಬಿದ ಮೊಗ್ಗುಗಳನ್ನು ಬೈಕ್‌ಗಳಲ್ಲಿ ಹಡಗಲಿಗೆ ತಂದು, ದೊಡ್ಡ ಎಲೆಗಳಲ್ಲಿ ಸುತ್ತಿ ವಿವಿಧ ಮಾರುಕಟ್ಟೆಗಳಿಗೆ ಕಳಿಸುವ ದೃಶ್ಯ ಒಮ್ಮೆ ಸಾಮಾನ್ಯವಾಗಿತ್ತು.

ಆದರೆ ಈಗ ಆ ದೃಶ್ಯ ನಿಧಾನವಾಗಿ ಬದಲಾಗುತ್ತಿದೆ. ಕೂಲಿ ಕಾರ್ಮಿಕರ ಕೊರತೆಯಿಂದ ರೈತರು ಮಲ್ಲಿಗೆ ಕೃಷಿಯಿಂದ ಹಿಂದೆ ಸರಿಯುತ್ತಿದ್ದಾರೆ. ಮೊಗ್ಗು ಬಿಡಿಸಲು ಜನ ಸಿಗುವುದೇ ಕಷ್ಟವಾಗಿದೆ. ಸಿಕ್ಕರೂ ಅಧಿಕ ಕೂಲಿ ಕೊಡಬೇಕಾಗುತ್ತದೆ. ಕೆಲವೊಮ್ಮೆ ಮಾರುಕಟ್ಟೆಯಲ್ಲಿ ಬೆಲೆ ದಿಢೀರನೆ ಕುಸಿದರೆ, ಕೂಲಿ ವೆಚ್ಚವೂ ವಾಪಸ್ ಬಾರದ ಪರಿಸ್ಥಿತಿ ಎದುರಾಗುತ್ತದೆ. ಹನಕನಹಳ್ಳಿಯ ಮಲ್ಲಿಗೆ ಬೆಳೆಗಾರ ರವೀಂದ್ರನಾಥ ರಡ್ಡಿ ಹೇಳುವ ಮಾತುಗಳು ಈ ಸಂಕಷ್ಟವನ್ನು ಸ್ಪಷ್ಟಪಡಿಸುತ್ತವೆ: 'ಮಲ್ಲಿಗೆ ಬೆಳೆಸುವುದು ಸಮಸ್ಯೆಯಲ್ಲ. ಆದರೆ ಮೊಗ್ಗು ಕೀಳಲು ಜನ ಸಿಗುತ್ತಿಲ್ಲ. ಸೀಸನ್ ಇಲ್ಲದ ಸಮಯದಲ್ಲಿ ಕೂಲಿ ಹಣವೂ ಮರಳಿ ಬರುವುದಿಲ್ಲ. ಅದರಿಂದ ಜನ ಮಲ್ಲಿಗೆ ಬಿಟ್ಟು ಬೇರೆ ಬೆಳೆ ಕಡೆ ಹೋಗುತ್ತಿದ್ದಾರೆ.'

ಮಾರುಕಟ್ಟೆ ವ್ಯವಸ್ಥೆಯ ಸಮಸ್ಯೆಯೂ ರೈತರನ್ನು ಕಾಡುತ್ತಿದೆ. ಹಡಗಲಿಯಲ್ಲಿ ಸಮರ್ಪಕ ಹೂವಿನ ಮಾರುಕಟ್ಟೆ ಇಲ್ಲದ ಕಾರಣ ರೈತರು ದಲ್ಲಾಳಿಗಳ ಮೇಲೆ ಅವಲಂಬಿತರಾಗಿದ್ದಾರೆ. ಬೆಳೆದ ಹೂವನ್ನು ಬೇರೆ ನಗರಗಳಿಗೆ ಸಾಗಿಸುವ ವೆಚ್ಚವೂ ಹೆಚ್ಚಾಗಿದೆ. ಲಾಭದ ದೊಡ್ಡ ಭಾಗ ಮಧ್ಯವರ್ತಿಗಳ ಪಾಲಾಗುತ್ತದೆ.

ಆದರೂ ಹಡಗಲಿ ಮಲ್ಲಿಗೆಯ ಪರಿಮಳ ಇನ್ನೂ ಕಡಿಮೆಯಾಗಿಲ್ಲ. ಅದರ ಮಹತ್ವವೂ ಕ್ಷೀಣಿಸಿಲ್ಲ. 2006ರಲ್ಲಿ ಈ ಮಲ್ಲಿಗೆಗೆ ಜಿಐ ಟ್ಯಾಗ್ ದೊರೆತಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಅದರ ವಿಶಿಷ್ಟತೆ ಮಾನ್ಯತೆ ಪಡೆದಿದೆ. ಭಾರತೀಯ ಅಂಚೆ ಇಲಾಖೆ ಕೂಡ ಹಡಗಲಿ ಮಲ್ಲಿಗೆಯ ಚಿತ್ರವಿರುವ ವಿಶೇಷ ಅಂಚೆ ಚೀಟಿ ಬಿಡುಗಡೆ ಮಾಡಿದೆ.

ಇಂದು ಮಾರುಕಟ್ಟೆಯಲ್ಲಿ ಯಾರಾದರೂ 'ಹಡಗಲಿ ಮಲ್ಲಿಗೆ ಇದೆಯಾ?' ಎಂದು ಕೇಳಿದರೆ, ಅದು ಕೇವಲ ಹೂವಿನ ಹುಡುಕಾಟವಲ್ಲ. ಒಂದು ಪ್ರದೇಶದ ಪರಂಪರೆ, ಪರಿಮಳ ಮತ್ತು ಬದುಕಿನ ನೆನಪಿನ ಹುಡುಕಾಟವೂ ಹೌದು. ಹಡಗಲಿ ಮಲ್ಲಿಗೆ ಇನ್ನೂ ಜನರ ಮನಸ್ಸಿನಲ್ಲಿ ಉಳಿದಿರುವುದು ಅದರ ಸುವಾಸನೆಯಿಂದ ಮಾತ್ರವಲ್ಲ–ಆ ಪರಿಮಳದ ಹಿಂದೆ ನಿಂತಿರುವ ನೂರಾರು ಬದುಕುಗಳಿಂದ. ❖

ಚಂದನದಲ್ಲಿ ಅರಳಿದ ರಾಜ–ರಾಣಿಯರು

ಕರ್ನಾಟಕದಲ್ಲಿ ನಿಧಾನವಾಗಿ ಮರೆಯಾಗುತ್ತಿರುವ ರಾಜ–ರಾಣಿಯರ ಪಟ್ಟದ ಗೊಂಬೆಗಳ ಕಲೆ ಇಂದು ಆಂಧ್ರಪ್ರದೇಶದ ಪುಟ್ಟ ಹಳ್ಳಿಯೊಂದರಲ್ಲಿ ಹೊಸ ಜೀವ ಪಡೆದುಕೊಂಡಿದೆ. ತಲೆಮಾರುಗಳಿಂದ ಬಂದ ಕೈಚಳಕ, ಮರದ ಮೇಲಿನ ಸೂಕ್ಷ್ಮ ಕೆತ್ತನೆ ಮತ್ತು ಸಂಪ್ರದಾಯದ ನೆನಪುಗಳನ್ನು ಉಳಿಸಿಕೊಂಡಿರುವ ಕಲಾವಿದರ ಬದುಕಿನ ಕಥೆ ಇದು.

• ಚಿತ್ರ–ಬರಹ: ಎಂ.ಆರ್.ಮಂಜುನಾಥ್

ಪಟ್ಟದ ರಾಜರಾಣಿ

ತಿರುಪತಿ ಸಮೀಪದ ಲಕ್ಷ್ಮಿಗಾರಿಪಳ್ಳೆ ಎಂಬ ಪುಟ್ಟ ಹಳ್ಳಿಗೆ ಕಾಲಿಟ್ಟಾಗ ಮೊದಲು ಗಮನ ಸೆಳೆಯುವುದು ಮರದ ಸುವಾಸನೆ. ಆ ಸುವಾಸನೆ ಸಾಮಾನ್ಯ ಮರದ್ದಲ್ಲ; ಅದರಲ್ಲಿ ಹಳೆಯ ಸಂಪ್ರದಾಯದ ನೆನಪು, ಕೈಚಳಕದ ಕಲೆ ಮತ್ತು ಮಣ್ಣಿನ ಬದುಕಿನ ಆತ್ಮ ಮಿಶ್ರವಾಗಿದೆ. ಮನೆಯ ಮುಂಭಾಗದಲ್ಲಿ ಕುಳಿತ ಕಲಾವಿದರ ಕೈಯಲ್ಲಿ ಮರದ ತುಂಡು ನಿಧಾನವಾಗಿ ರೂಪ ಪಡೆಯುತ್ತಿರುತ್ತದೆ. ಕೆಲವೇ ಕ್ಷಣಗಳಲ್ಲಿ ಅದು ರಾಜನ ಮುಖ, ರಾಣಿಯ ಕಣ್ಣಿನ ಭಾವ ಅಥವಾ ಕೃಷ್ಣನ ಮೂರ್ತಿಯಾಗಿ ಅರಳುತ್ತದೆ. ನೋಡುತ್ತಾ ಹೋದರೆ, ಮರಕ್ಕೆ ಜೀವ ಬಂದಂತೆಯೇ ಭಾಸವಾಗುತ್ತದೆ.

ಒಮ್ಮೆ ಕರ್ನಾಟಕದ ಮನೆಮನೆಗಳಲ್ಲೂ ಮದುವೆ ಸಂಪ್ರದಾಯಗಳಲ್ಲೂ ವಿಶೇಷ ಸ್ಥಾನ ಪಡೆದಿದ್ದ ರಾಜ–ರಾಣಿಯರ ಪಟ್ಟದ ಗೊಂಬೆಗಳು ಇಂದು ಇಲ್ಲಿನ ಕಲಾವಿದರ ಕೈಯಲ್ಲಿ ಮತ್ತೆ ಜೀವ ಪಡೆದಿವೆ. ಶ್ರೀಗಂಧದ ಮರದಲ್ಲಿ ತಯಾರಾಗುತ್ತಿದ್ದ ಈ ಗೊಂಬೆಗಳು ಕಾಲದ ಹೊಡೆತಕ್ಕೆ ಕರ್ನಾಟಕದಲ್ಲಿ ಕ್ಷೀಣಿಸಿದರೂ, ಗಡಿಯಾಚೆ ಆಂಧ್ರಪ್ರದೇಶದಲ್ಲಿ ಜೀವ ಪಡೆದುಕೊಂಡಿರುವುದು ವಿಶೇಷ.

ತಮಿಳುನಾಡಿನ ವೇಲೂರಿನಿಂದ ಹಲವು ದಶಕಗಳ ಹಿಂದೆ ವಲಸೆ ಬಂದ ಸುಮಾರು 150 ಕುಟುಂಬಗಳು ಲಕ್ಷ್ಮಿಗಾರಿಪಳ್ಳೆಯಲ್ಲಿ ನೆಲೆಸಿ ಈ ಕೌಶಲ್ಯವನ್ನು ಉಳಿಸಿಕೊಂಡಿವೆ. ತಾತ–ಮುತ್ತಾತರಿಂದ ಬಂದ ಈ ಪರಂಪರೆಯನ್ನು ಇವರು ಕೇವಲ ಉದ್ಯೋಗವಾಗಿ ಅಲ್ಲ, ಬದುಕಿನ ಭಾಗವಾಗಿಯೇ ನೋಡುತ್ತಾರೆ.

65 ವರ್ಷದ ವೇಲ್ಲೂರು ಶಂಕರ ಅವರು ನಾಲ್ಕನೇ ತಲೆಮಾರಿನ ಕಲಾವಿದ. ಮರದ ತುಂಡನ್ನು ಕೈಯಲ್ಲಿ ಹಿಡಿದುಕೊಂಡು, ಯಾವುದೇ ಸ್ಕೆಚ್ ಇಲ್ಲದೆ ನೇರವಾಗಿ ಕೆತ್ತನೆ ಆರಂಭಿಸುವ ಅವರ ಕೌಶಲ ಗಮನ ಸೆಳೆಯುತ್ತದೆ. ಕಣ್ಣು, ಮೂಗು, ತುಟಿ, ಆಭರಣಗಳ ವಿನ್ಯಾಸ–ಎಲ್ಲವೂ ಕೇವಲ ಅನುಭವದ ಅಳತೆಯಲ್ಲಿ ಮೂಡಿಬರುತ್ತವೆ.

'ಮೊದಲು ಶ್ರೀಗಂಧದ ಮರದಲ್ಲೇ ಗೊಂಬೆ ಮಾಡುತ್ತಿದ್ದೆವು. ಈಗ ಶ್ರೀಗಂಧದ ಮರ ಸಿಗುವುದೇ ಕಷ್ಟ. ಆದ್ದರಿಂದ ತೇಗ, ಹಾಲುಮರ, ಪಗಡ, ಬೆಪ್ಪಾಲೆ ಮರ ಬಳಸುತ್ತೇವೆ' ಎಂದು ಶಂಕರ ಹೇಳುತ್ತಾರೆ.

ಅವರ ಸುತ್ತ ಸಾಲಾಗಿ ನಿಂತಿರುವ ರಾಜ–ರಾಣಿಯರ ಗೊಂಬೆಗಳು, ವೆಂಕಟೇಶ್ವರ ಸ್ವಾಮಿ, ಕೃಷ್ಣ–ರಾಧೆ, ರಾಮ–ಸೀತೆ, ದಶಾವತಾರ, ಆಂಜನೇಯ ಮೂರ್ತಿಗಳು ಪುಟ್ಟ ಕಲಾ ಸಂಗ್ರಹಾಲಯದ ಅನುಭವ ನೀಡುತ್ತವೆ. ಕೆಲವು ಎರಡು ಇಂಚು ಎತ್ತರದಲ್ಲಿದ್ದರೆ, ಕೆಲವು ಎರಡು ಅಡಿ ಎತ್ತರದವರೆಗೂ ಕಾಣುತ್ತವೆ. ಪ್ರತಿಯೊಂದು ಗೊಂಬೆಯಲ್ಲೂ ಸೂಕ್ಷ್ಮ ಕುಸುರಿ ಕೆಲಸ ಸ್ಪಷ್ಟವಾಗಿರುತ್ತದೆ.

ಈ ಪಟ್ಟದ ಗೊಂಬೆಗಳ ಹಿಂದೆ ಕೇವಲ ಅಲಂಕಾರದ ಕಥೆಯಿಲ್ಲ; ಒಂದು ಸಂಸ್ಕೃತಿಯ ನೆನಪು ಅಡಗಿದೆ. ಒಂದು ಕಾಲದಲ್ಲಿ ಸಾಮಾನ್ಯ ಜನರಿಗೆ ರಾಜ–ಮಹಾರಾಜರನ್ನು ನೋಡುವ ಅವಕಾಶವೇ ಇರಲಿಲ್ಲ. ಹೀಗಾಗಿ ರಾಜ–ರಾಣಿಯರ ಗೊಂಬೆಗಳನ್ನು ಅವರ ಪ್ರತಿರೂಪವಾಗಿ ಭಾವಿಸಲಾಗುತ್ತಿತ್ತು. ಮದುವೆಯಾದ ನವದಂಪತಿಗೆ ಈ ಗೊಂಬೆಗಳನ್ನು ಉಡುಗೊರೆಯಾಗಿ ನೀಡಿ, 'ರಾಜ–ಮಹಾರಾಣಿಯಂತೆ ಸುಖವಾಗಿ ಬದುಕಲಿ' ಎಂದು ಆಶೀರ್ವದಿಸುವ ಪದ್ಧತಿ ರೂಢಿಯಲ್ಲಿತ್ತು. ಆ ಸಂಪ್ರದಾಯ ಇಂದಿಗೂ ಕೆಲವು ಮನೆಗಳಲ್ಲಿ ಮುಂದುವರಿದಿದೆ.

ಇಂದು ಈ ಗೊಂಬೆಗಳಿಗೆ ದೇಶ–ವಿದೇಶಗಳಿಂದ ಬೇಡಿಕೆ ಬರುತ್ತಿದೆ. ವಿದೇಶದಲ್ಲಿರುವ ಭಾರತೀಯ ಕುಟುಂಬಗಳು ವಿಶೇಷವಾಗಿ ಈ ಗೊಂಬೆಗಳನ್ನು ತರಿಸಿಕೊಳ್ಳುತ್ತವೆ. ಮೈಸೂರು, ಬೆಂಗಳೂರು, ಚೆನ್ನೈ, ಹೈದರಾಬಾದ್, ಕೇರಳ, ಪುದುಚೆರಿ ಸೇರಿದಂತೆ ಅನೇಕ ಕಡೆಗಳಿಂದ ವ್ಯಾಪಾರಿಗಳು ಇಲ್ಲಿಗೆ ಬಂದು ದೊಡ್ಡ ಪ್ರಮಾಣದಲ್ಲಿ ಖರೀದಿ ಮಾಡುತ್ತಾರೆ.

ಆದರೆ ಈ ಕಲೆಯ ಮುಂದಿನ ದಾರಿ ಅಷ್ಟು ಸುಲಭವಿಲ್ಲ. ತಂತ್ರಜ್ಞಾನದ ಯುಗದಲ್ಲಿ ಯುವಕರು ಬೇರೆ ಉದ್ಯೋಗಗಳತ್ತ ಮುಖ ಮಾಡುತ್ತಿದ್ದಾರೆ. ಗಂಟೆಗಟ್ಟಲೆ ಕುಳಿತು ಸೂಕ್ಷ್ಮ ಕೆತ್ತನೆ ಮಾಡುವ ಸಹನೆ ಈಗ ಕಡಿಮೆಯಾಗುತ್ತಿದೆ.

35 ವರ್ಷದ ಜೈಶಂಕರ ಈ ಕಲೆಯ ಉಳಿವಿಗಾಗಿ ತಮ್ಮದೇ ರೀತಿಯಲ್ಲಿ ಹೋರಾಟ ನಡೆಸುತ್ತಿದ್ದಾರೆ. 'ನಾನು ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದಿ ಬೆಂಗಳೂರಿನಲ್ಲಿ ಉತ್ತಮ ಸಂಬಳದ ಕೆಲಸ ಮಾಡುತ್ತಿದ್ದೆ. ಆದರೆ ನಮ್ಮ ಮನೆಯ ಕಲೆ ಕಣ್ಮರೆಯಾಗಬಾರದು ಎಂದು ವಾಪಸ್ ಬಂದೆ' ಎಂದು ಅವರು ಹೇಳುತ್ತಾರೆ.

ಅವರ ಮಾತುಗಳಲ್ಲಿ ಕಲೆಯ ಬಗ್ಗೆ ಇರುವ ಹೆಮ್ಮೆ ಸ್ಪಷ್ಟವಾಗುತ್ತದೆ. 'ಈ ಕಲೆಗೆ ಜಾತಿ–ಮತಗಳಿಲ್ಲ. ಯಾರಿಗೆ ಆಸಕ್ತಿ ಇದೆಯೋ ಅವರಿಗೆ ನಾವು ಉಚಿತವಾಗಿ ಕಲಿಸುತ್ತೇವೆ. ಮುಂದಿನ ತಲೆಮಾರಿಗೂ ಈ ಕೈಚಳಕ ತಲುಪಬೇಕು' ಎಂದು ಅವರು ಹೇಳುತ್ತಾರೆ.

ಒಮ್ಮೆ ಕರ್ನಾಟಕದ ಸಂಪ್ರದಾಯದ ಭಾಗವಾಗಿದ್ದ ರಾಜ–ರಾಣಿಯರ ಗೊಂಬೆಗಳು ಇಂದು ಗಡಿಯಾಚೆ ಮತ್ತೊಂದು ರಾಜ್ಯದಲ್ಲಿ ಜೀವಂತವಾಗಿರುವುದು ವಿಪರ್ಯಾಸ. ಆದರೆ ಆ ಗೊಂಬೆಗಳ ಕಣ್ಣುಗಳಲ್ಲಿ ಇನ್ನೂ ಅದೇ ನವಿರಾದ ಭಾವ ಇದೆ; ಮರದ ಮೇಲಿನ ಅದೇ ಸೂಕ್ಷ್ಮ ಕೆತ್ತನೆ ಇದೆ; ಮತ್ತು ಕಲಾವಿದರ ಕೈಯಲ್ಲಿ ಇನ್ನೂ ಅದೇ ಪ್ರೀತಿ ಉಳಿದಿದೆ.

ಮರದ ತುಂಡಿನಲ್ಲಿ ರಾಜರ ರೂಪ ಮೂಡಿಸುವ ಈ ಕಲಾವಿದರು ಕೇವಲ ಗೊಂಬೆಗಳನ್ನು ಮಾಡುತ್ತಿಲ್ಲ; ಒಂದು ಕಾಲದ ಸಂಸ್ಕೃತಿಯ ನೆನಪುಗಳನ್ನು ಮುಂದಿನ ತಲೆಮಾರಿಗೆ ಸಾಗಿಸುತ್ತಿದ್ದಾರೆ. ❖

ಕಲಾವಿದರ ಕೆತ್ತನೆಯಲ್ಲಿ ಅರಳುತ್ತಿರುವ ಬೊಂಬೆಗಳು

ಈ ಅಂಗಡಿ ಹೆಸರೇ ಗ್ರಂಥಾಲಯ

10ನೇ ಪುಟದಿಂದ...

ಈ ನಡುವೆ ಕೇರಳ ರಾಜ್ಯ ಪಠ್ಯಪುಸ್ತಕ ಸಮಿತಿಯ ಸದಸ್ಯರು ಸ್ಥಳೀಯ ಇತಿಹಾಸ ಮತ್ತು ಭಾಷಾ ಮಾಹಿತಿಗಾಗಿ ಸುರೇಂದ್ರ ಅವರ ಮನೆಗೆ ಭೇಟಿ ನೀಡಿದರು. ತಿರುವನಂತಪುರದ ಗ್ರಂಥಪಾಲಕರೊಬ್ಬರು ವಿದ್ಯಾರ್ಥಿಗಳೊಂದಿಗೆ ಬಂದು ಪುಸ್ತಕಗಳನ್ನು ವೈಜ್ಞಾನಿಕವಾಗಿ ಜೋಡಿಸಲು ಸಹಾಯ ಮಾಡಿದರು. ಬಳಿಕ ಕರ್ನಾಟಕ ತುಳು ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿಯವರ ಗಮನಕ್ಕೂ ಈ ಸಂಗ್ರಹ ಬಂತು. ಸ್ನೇಹಿತರು ಹಾಗೂ ಸ್ಥಳೀಯರ ಸಹಕಾರದಿಂದ ಸಾವಿರಾರು ಪುಸ್ತಕಗಳನ್ನು ಮನೆಯಿಂದ ಅಂಗಡಿಗೆ ಸ್ಥಳಾಂತರಿಸಲಾಯಿತು. ಚಹಾದಂಗಡಿಗೆ 'ಗ್ರಂಥಾಲಯ' ಎಂಬ ಹೆಸರಿಟ್ಟು ಹೊಸ ರೂಪ ನೀಡಲಾಯಿತು. ಅಕ್ಷರಸಂತ ಹರೇಕಳ ಹಾಜಬ್ಬ ಈ ಗ್ರಂಥಾಲಯವನ್ನು ಉದ್ಘಾಟಿಸಿದರು.

ಈಗ ಈ ಪುಟ್ಟ ಜಾಗ ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಪುಸ್ತಕ ಪ್ರೇಮಿಗಳ ತಾಣವಾಗಿದೆ. ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಹತ್ತಿರದ ಕಾಲೇಜುಗಳ ವಿದ್ಯಾರ್ಥಿಗಳು ಇಲ್ಲಿಗೆ ನಿಯಮಿತವಾಗಿ ಬರುತ್ತಾರೆ. ಪಿಎಚ್‌ಡಿ ಸಂಶೋಧಕರು ಅಪರೂಪದ ಆಕರಗ್ರಂಥಗಳಿಗಾಗಿ ಈ ಚಹಾದಂಗಡಿಯನ್ನು ಹುಡುಕಿಕೊಂಡು ಬರುತ್ತಾರೆ. ಶಾಲಾ ಶಿಕ್ಷಕರು ಬಿಡುವಿನ ವೇಳೆಯಲ್ಲಿ ಇಲ್ಲಿಗೆ ಬಂದು ಪುಸ್ತಕಗಳನ್ನು ಜೋಡಿಸಲು ಸಹ ಕೈಜೋಡಿಸುತ್ತಾರೆ.

ಅಂಗಡಿಯ ಹೊರಗಿರುವ ಆಟೊ ರಿಕ್ಷಾ ನಿಲ್ದಾಣದಲ್ಲಿ ಸುರೇಂದ್ರ ಪ್ರತಿದಿನ ಐದು ದಿನಪತ್ರಿಕೆಗಳನ್ನು ಸಾರ್ವಜನಿಕ ಓದಿಗಾಗಿ ಇಡುತ್ತಾರೆ. 'ಹಿಂದೆ ಆಟೊ ಚಾಲಕರು ಪತ್ರಿಕೆಗಳನ್ನು ಓದುತ್ತಿರಲಿಲ್ಲ. ಈಗ ಪತ್ರಿಕೆಗಳ ಜೊತೆಗೆ ಪುಸ್ತಕಗಳನ್ನೂ ತಿರುಗಿ ನೋಡುತ್ತಾರೆ' ಎಂದು ಅವರು ಸಂತೋಷದಿಂದ ಹೇಳುತ್ತಾರೆ.

ಇಲ್ಲಿ ಪುಸ್ತಕಗಳನ್ನು ಎರವಲು ಪಡೆಯಲು ಯಾವುದೇ ಸದಸ್ಯತ್ವ ಶುಲ್ಕ, ಠೇವಣಿ ಅಥವಾ ದಂಡ ಇಲ್ಲ. 'ಪುಸ್ತಕಗಳು ಒಂದು ಕೈಯಿಂದ ಇನ್ನೊಂದು ಕೈಗೆ ಹೋದಾಗ ಮಾತ್ರ ಓದು ಸಂಸ್ಕೃತಿ ಉಳಿಯುತ್ತದೆ' ಎನ್ನುವುದು ಸುರೇಂದ್ರ ನಂಬಿಕೆ.

ಆದರೆ ಈ ಅಪರೂಪದ ಅಕ್ಷರ ಸಂಪತ್ತಿಗೆ ಇನ್ನೂ ಸುರಕ್ಷಿತ ಆಶ್ರಯ ಸಿಕ್ಕಿಲ್ಲ. ಅನೇಕ ಪುಸ್ತಕಗಳು ಈಗಲೂ ನೆಲದ ಮೇಲೆಯೇ ರಾಶಿಯಾಗಿವೆ. ಮಳೆಗಾಲದಲ್ಲಿ ತೇವಾಂಶ ಹಳೆಯ ಪುಟಗಳನ್ನು ನಿಧಾನವಾಗಿ ನಾಶಮಾಡುತ್ತಿದೆ. ತಮ್ಮ ನಂತರ ಈ ಸಂಗ್ರಹದ ಭವಿಷ್ಯ ಏನಾಗಬಹುದು ಎಂಬ ಆತಂಕ ಸುರೇಂದ್ರ ಅವರನ್ನು ಕಾಡುತ್ತದೆ.

ಚಹಾದಂಗಡಿಯೊಳಗಿನ ಈ ಪುಟ್ಟ ಗ್ರಂಥಾಲಯ ಕೇವಲ ಪುಸ್ತಕಗಳ ರಾಶಿಯಲ್ಲ. ಅದು ತುಳುನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆನಪುಗಳನ್ನು ಕಾಪಾಡುತ್ತಿರುವ ಜೀವಂತ ಸಂಗ್ರಹಾಲಯ. ಸುರೇಂದ್ರ ಕೋಟ್ಯಾನ್ ಎಂಬ ಸಾಮಾನ್ಯ ವ್ಯಕ್ತಿಯ ಅಸಾಮಾನ್ಯ ಹಠದಿಂದ ಉಳಿದುಕೊಂಡಿರುವ ಜ್ಞಾನದ ಮನೆ.

ಹೆದ್ದಾರಿಯಲ್ಲಿ ವಾಹನಗಳು ಗದ್ದಲ ಮಾಡುತ್ತಲೇ ಸಾಗುತ್ತಿವೆ. ಆದರೆ ಆ ಗದ್ದಲದ ಮಧ್ಯೆ, ಪುಸ್ತಕದ ಪುಟಗಳ ಮೆಲ್ಲನೆಯ ಸದ್ದು ಇನ್ನೂ ನಿಂತಿಲ್ಲ. ❖

ಗ್ರಂಥಾಲಯದಲ್ಲಿ ಹರೇಕಳ ಹಾಜಬ್ಬ

ಮುನ್ನೋಟ 24-05-2026 ರಿಂದ 30-05-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮಲ್ಲಿ ಹೊಸ ಶಕ್ತಿ, ಹೊಸ ಹುಮ್ಮಸ್ಸು ತುಂಬಿರುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಕೃಷಿ ಮಧ್ಯವರ್ತಿಗಳಿಗೆ ಸಾಕಷ್ಟು ಲಾಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುವ ಸಾಧ್ಯತೆಗಳಿವೆ. ಬಾಯಿ ಅಥವಾ ಹಲ್ಲಿನ ತೊಂದರೆಗಳು ಕಾಣಿಸಬಹುದು. ಕೃಷಿಯಿಂದ ಅನಿರೀಕ್ಷಿತ ಆದಾಯ ಬರುವ ಸಾಧ್ಯತೆಗಳಿವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮಲ್ಲಿ ಅತಿಯಾದ ಆತ್ಮವಿಶ್ವಾಸ ಇರುತ್ತದೆ. ಆದಾಯವು ನಿರೀಕ್ಷೆಗೆ ಮೀರಿ ಇರುತ್ತದೆ. ತಾಯಿಯ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಈಗ ಹೆಚ್ಚಿನ ಯಶಸ್ಸು ಪಡೆಯುವ ಯೋಗವಿದೆ. ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಹಿರಿಯರ ಆಸ್ತಿಯಲ್ಲಿ ಪಾಲು ದೊರೆಯುವ ಸಂದರ್ಭವಿದೆ. ವಿದೇಶದಲ್ಲಿ ಉದ್ಯೋಗದಲ್ಲಿರುವವರಿಗೆ ಹೆಚ್ಚು ಅನುಕೂಲವಿರುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅತಿಯಾದ ಶ್ರೀಮಂತರಂತೆ ವರ್ತಿಸುವಿರಿ. ಆದಾಯವು ಕಡಿಮೆ ಇರುತ್ತದೆ. ತಾಯಿಯಿಂದ ಅತಿ ಹೆಚ್ಚು ಸಹಕಾರ ದೊರೆಯುತ್ತದೆ. ಆಸ್ತಿ ವಿಚಾರದಲ್ಲಿ ಸಾಕಷ್ಟು ಎಚ್ಚರವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಇರುತ್ತದೆ. ಶಸ್ತ್ರಚಿಕಿತ್ಸಕರಿಗೆ ಹೆಚ್ಚು ಬೇಡಿಕೆ ಬರುತ್ತದೆ. ಸಂಗಾತಿಯಿಂದ ಆರ್ಥಿಕ ಸಹಾಯ ದೊರೆಯುತ್ತದೆ. ಈಗ ವೃತ್ತಿಯಲ್ಲಿದ್ದ ತೊಂದರೆಗಳು ಸ್ವಲ್ಪ ಕಡಿಮೆಯಾಗುತ್ತವೆ. ವೃತ್ತಿಯಲ್ಲಿ ಕೆಲಸದ ಒತ್ತಡ ಹೆಚ್ಚಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲೇ ಹಣ ಗಳಿಸುವ ಯೋಚನೆ ಮಾಡುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಸಂಪಾದನೆ ಹೆಚ್ಚು ಮಾಡಿಕೊಳ್ಳಬಹುದು. ಆಸ್ತಿ ವಹಿವಾಟು ನಡೆಸುವವರಿಗೆ ಹೆಚ್ಚಿನ ಲಾಭವಿದೆ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅಭಿವೃದ್ಧಿ ಇದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಉಂಟಾಗಬಹುದು. ನಿಮ್ಮ ಸಂಗಾತಿಗೆ ಹಿರಿಯರ ಆಸ್ತಿ ದೊರೆಯುವ ಸಾಧ್ಯತೆ ಇದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ಮನಸ್ಸಿನಲ್ಲಿ ಬಹಳ ಸಂತೋಷವಿರುತ್ತದೆ. ಸರ್ಕಾರಿ ಸಂಬಂಧಿತ ಕೆಲಸಗಳಲ್ಲಿ ಹೆಚ್ಚು ಆದಾಯವಿರುತ್ತದೆ. ನಿಮ್ಮ ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ಮಲಬದ್ಧತೆ ಕೆಲವರನ್ನು ಕಾಡಬಹುದು. ವಿದೇಶದಲ್ಲಿರುವವರಿಗೆ ಕಂಕಣ ಬಲ ಕೂಡಿ ಬರುವ ಸಾಧ್ಯತೆಗಳಿವೆ. ಮೂಳೆ ಸಂಬಂಧಿತ ನೋವು ಕಾಣಿಸಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬುದ್ಧಿವಂತಿಕೆಯನ್ನು ಬಳಸಿಕೊಂಡು ಎಲ್ಲರ ಬಳಿ ನಿಮ್ಮ ಕೆಲಸ ಮಾಡಿಸುವಿರಿ. ಈಗ ಆದಾಯವು ಕಡಿಮೆ ಇರುತ್ತದೆ. ಸಂಗಾತಿ ಕಡೆಯವರಿಂದ ನಿಮಗೆ ಸಾಕಷ್ಟು ವಿರೋಧ ವ್ಯಕ್ತವಾಗುತ್ತದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಸಾಧಾರಣ ಫಲಿತಾಂಶ ಇರುತ್ತದೆ. ಕೀಲು ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭದಲ್ಲಿ ಅತಿ ಆಲಸಿತನ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಕೃಷಿಯಿಂದ ಆದಾಯವಿರುತ್ತದೆ. ನಿಮ್ಮ ಹಿರಿಯರ ಸಹಕಾರದಿಂದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದು. ಕೃಷಿ ಸಂಬಂಧಿತ ಉಪಕರಣಗಳನ್ನು ತಯಾರಿಸುವವರಿಗೆ ಲಾಭವಿದೆ. ವಿದೇಶದಲ್ಲಿ ಓದಬೇಕೆಂದು ಆಶಿಸುತ್ತಿದ್ದವರಿಗೆ ಈಗ ಉತ್ತಮ ಅವಕಾಶ ದೊರೆಯುತ್ತದೆ. ಮೂಳೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವ್ಯವಹಾರ ಜ್ಞಾನ ಬಹಳ ಹೆಚ್ಚಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳನ್ನು ಮಟ್ಟ ಹಾಕುವ ವಿದ್ಯೆ ಈಗ ಸಿದ್ಧಿಸುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಕಲಿಯುತ್ತಿರುವವರಿಗೆ ಅಭಿವೃದ್ಧಿ ಇದೆ. ಸಾಮಾನ್ಯ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯುವುದಿಲ್ಲ. ಬೆಂಕಿಯೊಡನೆ ಕೆಲಸ ಮಾಡುವವರು ಬಹಳ ಎಚ್ಚರದಿಂದಿರಿ. ಆಭರಣ ತಯಾರಕರಿಗೆ ಅನಿರೀಕ್ಷಿತ ಲಾಭ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಮೇಲೆ ನಿಮಗೆ ನಂಬಿಕೆ ಸಂಪೂರ್ಣವಾಗಿರುತ್ತದೆ. ನಿಮ್ಮ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಬಂಧುಗಳ ವಿರೋಧವಿರುತ್ತದೆ. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ಇರುತ್ತದೆ. ಕಣ್ಣಿನ ತೊಂದರೆ ಕೆಲವರನ್ನು ಕಾಡಬಹುದು. ಸಂಗಾತಿಯು ನಿಮ್ಮ ಅಪೇಕ್ಷೆಗೆ ಮೊದಲೇ ಆರ್ಥಿಕ ಸಹಾಯ ಮಾಡುವರು. ವೃತ್ತಿಯಲ್ಲಿ ಸ್ವಲ್ಪ ಏರುಪೇರು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಬಹಳ ಚುರುಕಾಗಿ ಕೆಲಸ ಮಾಡಿ ಎಲ್ಲರ ಗಮನ ಸೆಳೆಯುವಿರಿ. ಆದಾಯ ಕಡಿಮೆ ಇದ್ದರೂ, ನಿಭಾಯಿಸುವಿರಿ. ಮಾತನಾಡುವಾಗ ಎಚ್ಚರವಿರಲಿ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಶತ್ರುಗಳನ್ನು ಹುಡುಕಿ ಮಟ್ಟ ಹಾಕುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅಭಿವೃದ್ಧಿ ಇದೆ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಉತ್ತಮ ಅಭಿವೃದ್ಧಿ ಇದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರಲ್ಲಿ ಕೋಪ ಹೆಚ್ಚಾಗಬಹುದು. ಆದಾಯವು ಕಡಿಮೆ ಇರುತ್ತದೆ. ಹಿರಿಯರಿಗೆ ಸಮಾಜದಿಂದ ಉತ್ತಮ ಸಹಕಾರ ದೊರೆಯುತ್ತದೆ. ಸರ್ಕಾರಿ ಸಂಸ್ಥೆಗಳ ಜೊತೆ ಭೂಮಿಯ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದ ಫಲಿತಾಂಶವನ್ನು ಪಡೆಯುವ ಯೋಗವಿದೆ. ಪ್ರೀತಿ, ಪ್ರೇಮಗಳು ವಿಫಲವಾಗಬಹುದು. ಸಂಗಾತಿಯಿಂದ ನಿರೀಕ್ಷಿಸಿದ ಸಹಾಯ ದೊರೆಯುತ್ತದೆ. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮಗೆ ಶ್ರಮಪಟ್ಟು ಕೆಲಸ ಮಾಡುವುದು ಬೇಡವೆನಿಸಬಹುದು. ಕೃಷಿಯಿಂದ ಆದಾಯ ಬರುತ್ತದೆ. ನೀವಾಡುವ ಕೊಂಕುಮಾತು ನಿಮಗೆ ಮುಳುವಾಗಬಹುದು. ಬಂಧುಗಳಿಂದ ನಿರೀಕ್ಷಿಸಿದ ಸಹಕಾರ ದೊರೆಯುವುದಿಲ್ಲ. ಆಸ್ತಿ ಕೊಳ್ಳಲು ಬೇಕಾದ ಹಣಕಾಸಿನ ನೆರವು ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಮಾತ್ರ ಇರುತ್ತದೆ.

ಪದಬಂಧ 2945

ಮೇಲಿಂದ ಕೆಳಕ್ಕೆ

1. ಪರಮಾತ್ಮ ಇದ್ದಾನೆಂದು ನಂಬಿರುವ ಮಂದಿರ 3
2. ಕಾಲಡಿಯಲ್ಲಿರುವ ಸೇವಕ 5
3. ಅಪಹರಿಸಿ ಒಳ್ಳೆಯದನ್ನು ಮಾಡುವ ಈಶ್ವರ 5
4. ಮದ್ಯಪಾನದ ಚಟ 3
10. ಅಮೃತವನ್ನೇ ಹೊತ್ತ ಭೂಮಿ 3
12. ಆಸರೆ ನೀಡುವ ಮರಳುಗಾಡು 3
14. ಸ್ವರ್ಗ ಸುಖವೇ ಆದರೆ, ಇದು ಕಷ್ಟದ ಕೆಳಮನೆಯ ಬದುಕು 5
15. ವೇದಗಳಿಂದ ಹುಟ್ಟಿದ ಅಗ್ನಿಗೆ ಆಹುತಿಯಾಗುವ ಸಮಿತ್ತು 5
17. ಮತ್ತೆ ನನ್ನನ್ನು ಮನ್ನಿಸು 3
19. ಮಳೆ ಸುರಿಸಿ ಭೂಮಿಯ ಋಣವನ್ನು ತೀರಿಸುವ ದೈವ 3

ಎಡದಿಂದ ಬಲಕ್ಕೆ

1. ಇದನ್ನು ಪಠಿಸಿದರೆ ಸಿಗಬಹುದು ದೇವತೆಯ ರಕ್ಷಾ ಉಡುಗೆ 5
3. ಚಿಂದಿಯಾಗುವ ಬಾಯಿ ಬಟ್ಟೆ 3
5. ಸೂರ್ಯ ಪುತ್ರ ಶನಿ, ಕರ್ಣರಾದರೂ ಇವರ ಅಭಿದಾನದಲ್ಲಿ ಸ್ಕಂದ, ಮನ್ಮಥರೂ ಇದ್ದಾರೆ 5
6. ದಾಸವಾಣಿಯಲ್ಲಿ ಗರುವವೇ ಇಲ್ಲದ ಹಣದೊಡತಿಯ ಒಡೆಯ 5
7. ಅಪರಾಧಿಯಾಗುವ ಮುನ್ನ ಇವನ ಮೇಲೆ ಗುಮಾನಿ 3
8. ರಸ್ತೆ ಕಾಣದಾದಾಗ ದೀಪ ಹಿಡಿಯುವವ 5
9. ಬೇಂದ್ರೆಯವರ ಕವನದಲ್ಲಿ ಕಾಡಿಗೆ, ನಾಡಿಗೆ, ಬೀಡಿಗೆ ಬರುವ ಸುಂದರ ತಿಂಗಳು 5
11. ನಾಲಿಗೆಗೆ ಸವಿಕೊಡುವ ಸಿಹಿ ಪೇಯ 3
13. ಯುದ್ಧ ಕಾಲದಲ್ಲಿ ಶಕ್ತಿಯ ಉಳಿತಾಯ ದೇಶದ ಹಿತ 3
15. ಜನಕನ ಮಗಳ ಕೈಹಿಡಿದು ಅವಳ ಜೊತೆ ಸೇರಿದ ಸೀತಾಪತಿ 5
16. ರುಚಿಯಾದ ದ್ರವದಿಂದ ತುಂಬಿದ್ದು ಮಾವಿಗೂ ಸಂಬಂಧಿಸಿದೆ 5
17. ಅತ್ಯಲ್ಪ ಸಮಯದ ಸುಖ 3
18. ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ನೆಲಸಿರುವವ 5
20. ಕೊನೆಯಾಗದ ತರ್ಕ ವಿತರ್ಕ 5
21. ಸುಂದರ ನಗೆಯವ 3
22. ಎಲ್ಲರೂ ಒಗ್ಗೂಡಿ ಎತ್ತಿಕೊಂಡು ಹೋಗುವುದು 5



ಪದಬಂಧ ಉತ್ತರ -2944

ಮೇಲಿಂದ ಕೆಳಕ್ಕೆ

1.ನಾದಸ್ವರ 2.ವಿಶ್ರಾಂತವೇತನ 3.ಮಥುರಾ 4.ಅಡವಿ 5.ಸದ್ಧರ್ಮಪಾಲಕ 7.ರಜಾದಿನ 9.ವಣಿಕ 10.ಅಕಾಲಮರಣ 11.ಗುರುಪಾದ 13.ವಕ್ಷೋವಿಹಾರಿಣಿ 16.ಯಮದ್ವಾರ 18.ಸುಜಾತ 19.ನರ್ತಕ

ಎಡದಿಂದ ಬಲಕ್ಕೆ

1.ನಾನಾವಿಧನಾಮ 4.ಅಗಸ 6.ರಾಜಾರವಿವರ್ಮ 8.ರನ್ ವೇ 9.ವರದಿ 10.ಅಳುನಗು 12.ನವಪಾಕ 14.ರುದ್ರಕ 15.ವಿದಾಯ 17.ಮಹಾಸುದರ್ಶನ 20.ಣರುತ 21.ಕರೀಮಣಿಸರ

ಗುಡ್ಡದ ಮೇಲಿಂದ 'ಇಣುಕಿದರೆ'...

ಸೌಂದರ್ಯದ ಖಜಾನೆ ಜೇನುಕಲ್ಲು ಗುಡ್ಡ

ಯಲ್ಲಾಪುರ ಪಟ್ಟಣದಿಂದ ಸುಮಾರು 25 ಕಿಲೋಮೀಟರ್ ದೂರದಲ್ಲಿರುವ ಜೇನುಕಲ್ಲು ಗುಡ್ಡ ತಲುಪಲು ಯಲ್ಲಾಪುರದಿಂದ ಮಾಗೋಡು ರಸ್ತೆ ಬಳಸಬಹುದು. ಗುಡ್ಡದ ಪಾದಭಾಗದವರೆಗೆ ಸಾಗುವ ಕೊನೆಯ ಹಾದಿ ಕಾಡಿನ ಮಧ್ಯೆ ಸಾಗುವ ಕಚ್ಚಾ ರಸ್ತೆಯಾಗಿರುವುದರಿಂದ ಬೈಕ್ ಅಥವಾ ಜೀಪ್‌ನಲ್ಲಿ ಪ್ರಯಾಣಿಸುವುದು ಹೆಚ್ಚು ಸೂಕ್ತ. ಸಾರ್ವಜನಿಕ ಸಾರಿಗೆಯಲ್ಲಿ ಬರುವವರು ಮೊದಲು ಯಲ್ಲಾಪುರಕ್ಕೆ ತಲುಪಿ, ಅಲ್ಲಿಂದ ಸ್ಥಳೀಯ ವಾಹನಗಳ ಸಹಾಯ ಪಡೆಯಬಹುದು. ಮಳೆಗಾಲದಲ್ಲಿ ರಸ್ತೆ ಜಾರುವ ಸಾಧ್ಯತೆ ಇರುವುದರಿಂದ ಎಚ್ಚರಿಕೆ ಅಗತ್ಯವಾದರೂ, ಇದೇ ಸಮಯದಲ್ಲಿ ಹಸಿರು ಹೊದಿಕೆ ಮತ್ತು ಮಂಜಿನ ಸೊಬಗು ಈ ಪ್ರದೇಶದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ.

• ಮೋಹನ ಭಟ್ಟ, ಅಗಸೂರು

ಉತ್ತರ ಕನ್ನಡ ಜಿಲ್ಲೆ ಕರ್ನಾಟಕದ ಕಡಿಮೆ ಜನಸಾಂದ್ರತೆಯ ಪ್ರದೇಶಗಳಲ್ಲಿ ಒಂದಾಗಿದ್ದು, ಕರಾವಳಿ ಮತ್ತು ಘಟ್ಟ ಪ್ರದೇಶಗಳನ್ನು ಒಂದೇ ಮೈದಾಳಿನಲ್ಲಿ ಹೊಂದಿರುವ ತನ್ನದೇ ಆದ ವೈಶಿಷ್ಟ್ಯತೆಯಿಂದ ಗುರುತಿಸಿಕೊಂಡಿದೆ. ಈ ಭೂಭಾಗವು ಪ್ರಕೃತಿ ಸೌಂದರ್ಯದ ಅಡಗಿದ ಖಜಾನೆ ಎಂದೇ ಹೇಳಬಹುದು. ಹನ್ನೊಂದು ತಾಲ್ಲೂಕುಗಳಲ್ಲಿ ಯಲ್ಲಾಪುರ ತಾಲ್ಲೂಕು ತನ್ನ ನಿಸರ್ಗಸೌಂದರ್ಯಕ್ಕಾಗಿ ವಿಶೇಷವಾಗಿ ಮೆಚ್ಚುಗೆ ಪಡೆಯುತ್ತದೆ. ಜಲಪಾತಗಳು, ನದಿಗಳ ಕಣಿವೆಗಳು ಮತ್ತು ಹಸಿರು ಕಾನನಗಳು ಈ ಪ್ರದೇಶದ ವೈವಿಧ್ಯತೆಯನ್ನು ಇನ್ನಷ್ಟು ಮನಮೋಹಕವಾಗಿಸುತ್ತವೆ.

ಅಂತಹ ನಿಸರ್ಗದ ಮಡಿಲಿನಲ್ಲಿ ನೆಲೆಗೊಂಡಿರುವ ಜೇನುಕಲ್ಲು ಗುಡ್ಡ, ವಿಶಾಲವಾದ ಕಣಿವೆಯನ್ನು ವೀಕ್ಷಿಸಲು ಅವಕಾಶ ನೀಡುವ ಅದ್ಭುತ ತಾಣ. ಈ ಸ್ಥಳದತ್ತ ಪ್ರಯಾಣಿಸುವಾಗ ಕಣ್ಣಿಗೆ ಬೀಳುವ ಹಸಿರು ಕಾನನವೇ ಮೊದಲ ಆಕರ್ಷಣೆ.

ದಶಕದ ಹಿಂದೆ ಈ ತಾಣವನ್ನು ಕಂಡವರಿಗೆ, ಇಂದಿನ ಸ್ವಲ್ಪ ಬದಲಾವಣೆಗಳು ಆಶ್ಚರ್ಯ ಮೂಡಿಸುವಂತಿವೆ–ಆದರೂ ಅದರ ಮೂಲ ಸೌಂದರ್ಯ ಕಳೆದುಕೊಂಡಿಲ್ಲ.

ಇಲ್ಲಿ ನಿರ್ಮಿಸಲಾದ ಎರಡು ಪರ್ಗೋಲಾಗಳು ಮತ್ತು ಒಂದು ವೀಕ್ಷಣಾ ವೇದಿಕೆ ಪ್ರವಾಸಿಗರಿಗೆ ಅನುಭವವನ್ನು ಇನ್ನಷ್ಟು ಸಮೃದ್ಧಗೊಳಿಸುತ್ತವೆ. ಪ್ರತಿದಿನವೂ ಇಲ್ಲಿ ಭೇಟಿ ನೀಡುವವರು ಅಪರೂಪದ ಸೂರ್ಯಾಸ್ತದ ಕ್ಷಣಗಳನ್ನು ಕಣ್ಣಲ್ಲಿ ತುಂಬಿಸಿಕೊಂಡೇ ಮರಳುತ್ತಾರೆ. ಕೆಲವರು ಗುಂಪುಗಳಲ್ಲಿ ಸೇರಿ ಕಾವ್ಯವಾಚನ, ಚರ್ಚೆಗಳು, ಅಭಿಪ್ರಾಯ ವಿನಿಮಯ ನಡೆಸುವುದು ಈ ತಾಣಕ್ಕೆ ವಿಶಿಷ್ಟ ಸಾಂಸ್ಕೃತಿಕ ಸ್ಪರ್ಶ ನೀಡುತ್ತದೆ.

ಆಧುನಿಕತೆಯ ಅತಿರೇಕದಿಂದ ದೂರವಾಗಿರುವ, ಮಾಲಿನ್ಯವಿಲ್ಲದ, ಅಂಗಡಿ-ಮುಂಗಟ್ಟುಗಳ ಗದ್ದಲವಿಲ್ಲದ ಈ ಜೇನುಕಲ್ಲು ಗುಡ್ಡ, ಪ್ರಕೃತಿಯನ್ನು ಅದರ ಸ್ವಾಭಾವಿಕ ರೂಪದಲ್ಲೇ ಅನುಭವಿಸಲು ಬಯಸುವವರಿಗೆ ಅಪರೂಪದ ತಾಣವಾಗಿ ಉಳಿದಿದೆ.


ಸೂರ್ಯಾಸ್ತ ಆಸ್ವಾದಿಸುತ್ತಿರುವ ಪ್ರವಾಸಿಗರು

ತೇಜಸ್ವಿಯ ಕಥೆಗಳ ಮಾಯಾಮೃಗ

• ರುದ್ರೇಶ್ ಅದರಂಗಿ

ಮಬ್ಬುಗತ್ತಲಿನಲ್ಲಿ ಹಂದಿಯ ಶಿಕಾರಿಗೆ ಕುಳಿತ ಗೆಳೆಯರು, ಭರ್ಜರಿ ಬೇಟೆಯ ಖುಷಿಯಲ್ಲಿ ಮನೆ ಕಡೆ ಹೊರಡುತ್ತಾರೆ. ಸುತ್ತ ಆಲದಮರದ ಒಣಎಲೆಗಳು ಉದುರುವ ಸದ್ದು, ಜೀರುಂಡೆಗಳ ಏಕತಾನ ಧ್ವನಿ, ದೂರದಲ್ಲೆಲ್ಲೋ ನಾಯಿ ಬೊಗಳುವ ಪ್ರತಿಧ್ವನಿ. ಉಳಿದಂತೆ ಎಲ್ಲೆಡೆ ಸ್ಮಶಾನದ ಮೌನ. ಕತ್ತಲೆಯ ಗರ್ಭದಿಂದ ಚಿಕ್ಕ ಟಾರ್ಚ್ ಹಿಡಿದು ಒಬ್ಬ ಬರುತ್ತಾನೆ; ಅವನ ಹಿಂದೆ ತಡವುತ್ತಾ ಇನ್ನೊಬ್ಬ. ಅವರ ಮುಖದ ಭಯ ಪ್ರೇಕ್ಷಕರಿಗೂ ಬೆವರಿನ ಅನುಭವ ಮೂಡಿಸುತ್ತದೆ. ಇದು ಯಾವ ಭಯಾನಕ ಸಿನಿಮಾದ ದೃಶ್ಯವಲ್ಲ; ಬೆಂಗಳೂರಿನ 'ಧ್ವನಿ ತಂಡ'ವು ರಂಗಶಂಕರದಲ್ಲಿ ಪ್ರದರ್ಶಿಸಿದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಸಣ್ಣಕತೆಗಳ ಆಧಾರಿತ 'ಮಾಯಾಮೃಗ' ನಾಟಕದ ಆರಂಭದ ಕ್ಷಣಗಳು.

ತೇಜಸ್ವಿಯವರ ಕಥೆಗಳಲ್ಲಿ ಮಲೆನಾಡಿನ ಬದುಕು, ಪರಿಸರದ ಸೂಕ್ಷ್ಮತೆ, ಪ್ರಾಣಿ ಪ್ರಪಂಚ, ಬೇಟೆಯ ಸಂಸ್ಕೃತಿ ಮೊದಲಾದವುಗಳು ಓದುಗರಿಗೆ ಚಿರಪರಿಚಿತ. ಇದೇ ಲೋಕವನ್ನು 'ಮಾಯಾಮೃಗ' ನಾಟಕವೂ ರಂಗದ ಮೇಲೆ ಜೀವಂತಗೊಳಿಸುತ್ತದೆ. ಸಂಗೀತದ ಮೇಷ್ಟ್ರು ದಾಸಪ್ಪರೊಂದಿಗೆ ದೆವ್ವಗಳಿಲ್ಲವೆಂದು ವಾದಿಸುವ ಒಬ್ಬ ಮತ್ತು ಅವುಗಳ ಇರುವಿಕೆಯನ್ನು ನಂಬುವ ಇನ್ನೊಬ್ಬ–ಇಬ್ಬರೂ ಸ್ಮಶಾನದ ಕತ್ತಲಿನಲ್ಲಿ ದೆವ್ವಗಳ ಹುಡುಕಾಟಕ್ಕೆ ಹೊರಡುತ್ತಾರೆ. ಒಬ್ಬನಿಗೆ ದೆವ್ವವೆಂಬುದು ಮೂಢನಂಬಿಕೆಯ ಪ್ರಶ್ನೆ; ಮತ್ತೊಬ್ಬನಿಗೆ ಅದು ರೂಪ ಬದಲಾಯಿಸುವ, ಮನುಷ್ಯನನ್ನು ಕಾಡುವ ಅಸ್ತಿತ್ವ. ಈ ಸಂಭಾಷಣೆಗಳ ನಡುವೆ 'ದೆವ್ವಗಳು ಮನುಷ್ಯನ ತಲೆಯಲ್ಲೇ ಇವೆ' ಎನ್ನುವ ತಾತ್ವಿಕ ಅರ್ಥವೂ ನಿಧಾನವಾಗಿ ತೆರೆದುಕೊಳ್ಳುತ್ತದೆ.

ಉಚ್ಚರಿಸಲು ಕಷ್ಟವಾಗುವ 'ಚುಂ ಬಿಟ್ಸಿಂ' ಎಂಬ ಚೀನೀ ಪದದ ಸುತ್ತ ನಡೆಯುವ ಗೊಂದಲ ನಾಟಕಕ್ಕೆ ಹಾಸ್ಯದ ಲಯ ನೀಡುತ್ತದೆ. ತೇಜಸ್ವಿಯವರ 'ಪಂಜ್ರೊಳ್ಳಿ ಪಿಶಾಚಿಯ ಸವಾಲು' ಕಥೆಯ ಪ್ರಸಂಗವನ್ನು ನಿರ್ದೇಶಕರು ಚಂದವಾಗಿ ಜೋಡಿಸಿದ್ದಾರೆ. ಓದಲು ಹೋಗಿದ್ದ ಗೆಳೆಯರು ಶೌಚದ ಡಬ್ಬದಲ್ಲೇ ಕಾಫಿ ಕಾಯಿಸಿ ಕುಡಿಯುವ ಪ್ರಸಂಗ ಪ್ರೇಕ್ಷಕರಲ್ಲಿ ನಗೆಯ ಅಲೆ ಎಬ್ಬಿಸುತ್ತದೆ. ಜೊತೆಗೆ 'ಮಾರನ ಚಪ್ಪಲಿ', 'ಕುಕ್ಕುಟದ ಪಿಶಾಚಿ' ಮೊದಲಾದ ತೇಜಸ್ವಿಯವರ ಇತರ ಕಥೆಗಳ ಸಣ್ಣ ನೆರಳುಗಳೂ ನಾಟಕಕ್ಕೆ ಮತ್ತಷ್ಟು ರಸ ತುಂಬುತ್ತವೆ.

ನಿರ್ದೇಶಕ ಪೃಥ್ವಿ ಆರಾಧ್ಯ ಕಥೆಯನ್ನು ಕೇವಲ ರಂಗರೂಪಕ್ಕೆ ತರುವುದಲ್ಲ; ಅದನ್ನು ದೃಶ್ಯಾನುಭವವಾಗಿ ಕಟ್ಟಿಕೊಡುತ್ತಾರೆ. ಪ್ರೇಕ್ಷಕರ ನಡುವಿನಿಂದಲೇ ಪಾತ್ರಗಳು ದೆವ್ವ ಹುಡುಕುತ್ತಾ ಸಾಗುವುದು ಕಥನದ ತಂತ್ರವಾಗಿಯೂ ಕೆಲಸ ಮಾಡುತ್ತದೆ. ಸ್ಮಶಾನದಿಂದ ಹಿಂಬಾಲಿಸುವ ಕಂತ್ರಿ ನಾಯಿಮರಿ, ಅದನ್ನು ಮನೆ ಕಾಂಪೌಂಡ್ ಒಳಗೆ ಬಿಟ್ಟುಬರುವ ದೃಶ್ಯಗಳು ನಿಧಾನವಾಗಿ ಅಸಹಜತೆಯ ಭಾವನೆ ಹುಟ್ಟಿಸುತ್ತವೆ. ನಾಯಿಮರಿಯ ಸದ್ದಿಗೆ ಎಚ್ಚರಗೊಂಡು ಹೊರಬರುವ ಕರಾಳ ವ್ಯಕ್ತಿ, ಮತ್ತೆ ಮತ್ತೆ ಅದನ್ನು ಓಡಿಸುವ ಪ್ರಯತ್ನ, ಕೊನೆಯಲ್ಲಿ ಹಾಸುಗಲ್ಲಿನ ಮೇಲೆ ದೊಪ್ಪನೆ ಬೀಳುವ ಕ್ಷಣ – ಇವೆಲ್ಲವೂ ರಂಗದ ಮೇಲಿನ ಕುತೂಹಲವನ್ನು ಗಟ್ಟಿಗೊಳಿಸುತ್ತವೆ. ಕೊನೆಯಲ್ಲಿ ಕೆಂಪು ಬೆಳಕು ಮಾಯಾಮೃಗವಾಗಿ ಮೆದುಳಿನೊಳಗೆ ಇಳಿಯುವಂತೆ ಮೂಡಿಸಿರುವ ದೃಶ್ಯ ನಿರ್ದೇಶಕರ ಕಲ್ಪನಾ ಶಕ್ತಿಗೆ ಸಾಕ್ಷಿ. ಸ್ಮಶಾನದ ಜೇಡರಬಲೆಯನ್ನು ಮನುಷ್ಯನ ಮೆದುಳಿನ ರೂಪಕವಾಗಿ ಬಳಸಿರುವುದು ನಾಟಕದ ಧ್ವನಿಶಕ್ತಿಯನ್ನು ಮತ್ತಷ್ಟು ಆಳಗೊಳಿಸುತ್ತದೆ.

ಒಬ್ಬನ ಪಾತ್ರದಲ್ಲಿ ಸುಜಯ್ ಶಾಸ್ತ್ರಿ ನಾಟಕದ ಲಯವನ್ನು ಹಿಡಿದಿಟ್ಟಿದ್ದಾರೆ. ದೀರ್ಘ ಸಂಭಾಷಣೆಗಳಲ್ಲೂ ಅವರ ಅಭಿನಯ ಜೀವಂತಿಕೆಯನ್ನು ಕಳೆದುಕೊಳ್ಳುವುದಿಲ್ಲ. ಸಾಂದರ್ಭಿಕ ಮೌನಗಳನ್ನೇ ಅವರು ಆಂಗಿಕಾಭಿನಯದ ಮೂಲಕ ಅರ್ಥಪೂರ್ಣವಾಗಿಸುತ್ತಾರೆ. ಹಾಸ್ಯ ಮತ್ತು ಆತಂಕದ ನಡುವೆ ಸುಲಭವಾಗಿ ಸಂಚರಿಸುವ ಅವರ ಅಭಿನಯ ನಾಟಕಕ್ಕೆ ವಿಶೇಷ ಬಲ ನೀಡುತ್ತದೆ. ಇನ್ನೊಬ್ಬನ ಪಾತ್ರದಲ್ಲಿ ಪ್ರದೀಪ್ ಪೋಷಕವಾಗಿ ಕಾಣಿಸಿಕೊಂಡರೂ ಕೆಲವೆಡೆ ಇನ್ನಷ್ಟು ಹೊಂದಾಣಿಕೆ ಅಗತ್ಯವೆನಿಸುತ್ತದೆ.

ಸಮರ್ಥ್ ನೀಡಿರುವ ಹಿನ್ನೆಲೆ ಸಂಗೀತ ಸ್ಮಶಾನದ ಮೌನವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಮುದ್ರಿತ ಪಾಶ್ಚಾತ್ಯ ಸಂಗೀತದ ಜೊತೆಗೆ ಬಳಸಿರುವ ಗಿಟಾರ್ ಧ್ವನಿ ನಾಟಕದ ಅಸಹಜ ವಾತಾವರಣವನ್ನು ಗಾಢಗೊಳಿಸುತ್ತದೆ. ರಂಜನ್ ಅವರ ಬೆಳಕಿನ ವಿನ್ಯಾಸ ವಿಶೇಷವಾಗಿ ಗಮನ ಸೆಳೆಯುತ್ತದೆ. ಮಬ್ಬುಗತ್ತಲಿನ ಸ್ಮಶಾನ, ಕೆಂಪು ದೀಪದ ಹರಿವು, ಕತ್ತಲಿನಿಂದ ಬೆಳಕಿಗೆ ಜಾರುವ ಪಾತ್ರಗಳು– ಇವೆಲ್ಲವೂ ದೃಶ್ಯಗಳಿಗೆ ಜೀವ ತುಂಬುತ್ತವೆ. ರಾಮಕೃಷ್ಣ ಬೆಳತೂರರ ಪ್ರಸಾದನ ಕೂಡ ನಾಟಕದ ವಾತಾವರಣಕ್ಕೆ ಪೂರಕವಾಗಿದೆ.

'ಮಾಯಾಮೃಗ' ಕೇವಲ ದೆವ್ವದ ಕಥೆಯಲ್ಲ. ಅದು ಮನುಷ್ಯನ ಭಯ, ಕಲ್ಪನೆ ಮತ್ತು ಮೆದುಳಿನ ಕತ್ತಲನ್ನು ಹುಡುಕುವ ರಂಗಪ್ರಯೋಗ. ತೇಜಸ್ವಿಯವರ ಲೋಕವನ್ನು ಅದರ ವಿಚಿತ್ರತೆ, ಹಾಸ್ಯ ಮತ್ತು ತಾತ್ವಿಕತೆಯೊಂದಿಗೆ ರಂಗದ ಮೇಲೆ ಜೀವಂತಗೊಳಿಸಿರುವುದು ಈ ನಾಟಕದ ವಿಶೇಷ.

'ಮಾಯಾಮೃಗ' ನಾಟಕದ ದೃಶ್ಯ

...ಮುದ್ರಾಡಿ ಮಹಿಳೆಯರು

10ನೇ ಪುಟದಿಂದ...

ಅಂಗವಿಕಲ ಮಾಸಾಶನವೇ ಅವರ ಜೀವನಾಧಾರ. ಪುಟ್ಟ ಮನೆಯ ಮುಂಭಾಗದಲ್ಲಿ ಕುಳಿತಿದ್ದ ಅವರನ್ನು ಭೇಟಿ ಮಾಡಿದಾಗ ಅವರ ಮಾತುಗಳಲ್ಲಿ ಏಕಾಂತದ ನೆರಳು ಸ್ಪಷ್ಟವಾಗಿ ಕಾಣುತ್ತದೆ. ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಸದಾಶಿವ ಅವರು ಆಗಾಗ ಮನೆಗೆ ತೆರಳಿ ಪಿಂಚಣಿ ಸರಿಯಾಗಿ ಸಿಗುತ್ತಿದೆಯೇ, ಆರೋಗ್ಯ ಹೇಗಿದೆ ಎಂದು ವಿಚಾರಿಸುತ್ತಾರೆ.

'ನನ್ನನ್ನು ನೋಡುವವರು ಯಾರೂ ಇಲ್ಲ ಅನ್ನೋ ಭಾವ ಇತ್ತು. ಈಗ ಪಂಚಾಯಿತಿಯಿಂದ ಯಾರಾದರೂ ಬಂದು ವಿಚಾರಿಸಿದಾಗ ಧೈರ್ಯ ಬರುತ್ತದೆ' ಎಂದು ವಸಂತಿ ಹೇಳುತ್ತಾರೆ.

ಶ್ರೀದೇವಿ ಅವರ ಬದುಕಿನ ಕಥೆಯೂ ಬೇರೆ ಅಲ್ಲ. ನಾಲ್ಕು ವರ್ಷಗಳ ಹಿಂದೆ ಗಂಡ ಹೃದಯಾಘಾತದಿಂದ ಮೃತಪಟ್ಟ ಬಳಿಕ ಇಬ್ಬರು ಮಕ್ಕಳ ಓದಿನ ಹೊಣೆ ಅವರ ಮೇಲಿದೆ. ಬೀಡಿ ಕಟ್ಟುತ್ತಲೇ ಜೀವನ ಸಾಗಿಸುತ್ತಿರುವ ಅವರಿಗೆ ಈಗ ವಿಧವಾ ಪಿಂಚಣಿ ಸಣ್ಣ ಆಸರೆಯಾಗಿದೆ. ಮನೆಯ ಗೋಡೆಗೆ ಮಕ್ಕಳ ಕಾಲೇಜಿನ ಟೈಮ್‌ಟೇಬಲ್ ಅಂಟಿಸಲಾಗಿದೆ. ಆ ಕಾಗದಗಳನ್ನು ನೋಡುತ್ತಲೇ ಅವರು ದಿನದ ಕೆಲಸ ಆರಂಭಿಸುತ್ತಾರೆ.

'ಮಕ್ಕಳ ಓದು ನಿಲ್ಲಿಸಬಾರದು ಅನ್ನೋದೇ ನನ್ನ ಆಸೆ' ಎಂದು ಅವರು ಹೇಳುವಾಗ ಕಣ್ಣಲ್ಲಿ ಚಿಂತೆಯ ಜೊತೆಗೆ ಹಟವೂ ಕಾಣಿಸುತ್ತದೆ.

ಮುದ್ರಾಡಿ ಪಂಚಾಯಿತಿಯು ಅಂಗವಿಕಲರ ಯುಡಿಐಡಿ ಕಾರ್ಡ್, ವೃದ್ಧಾಪ್ಯ ಪಿಂಚಣಿ ಹಾಗೂ ವಿಧವಾ ಪಿಂಚಣಿ ಯೋಜನೆಗಳ ಅನುಷ್ಠಾನದಲ್ಲಿ ಶೇಕಡ ನೂರರಷ್ಟು ಸಾಧನೆ ಮಾಡಿದೆ. ಆದರೆ ಆ ಸಾಧನೆಯ ನಿಜವಾದ ಅರ್ಥ ಸರ್ಕಾರಿ ದಾಖಲೆಗಳಲ್ಲಿ ಅಲ್ಲ; ವಸಂತಿ ಮತ್ತು ಶ್ರೀದೇವಿ ಅವರಂತಹವರ ದಿನನಿತ್ಯದ ನೆಮ್ಮದಿಯಲ್ಲಿ ಇದೆ.

ಪಶ್ಚಿಮ ಘಟ್ಟದ ತಪ್ಪಲಿನ ಈ ಪಂಚಾಯಿತಿಯಲ್ಲಿ ಕೃಷಿಯೇ ಪ್ರಮುಖ ಜೀವನಾಧಾರ. ಮಳೆಗಾಲದಲ್ಲಿ ಮಂಜು ಇಳಿಯುವ ಬೆಟ್ಟಗಳ ನಡುವೆ ಹರಡಿರುವ ಕೃಷಿಭೂಮಿಗಳೇ ಇಲ್ಲಿನ ಜನರ ಆರ್ಥಿಕತೆಯ ಆಧಾರ. ಒಟ್ಟು 1,671 ಕುಟುಂಬಗಳು ಇಲ್ಲಿ ವಾಸಿಸುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾವಿರಕ್ಕೂ ಹೆಚ್ಚು ಜನರು ಈ ಪಂಚಾಯಿತಿಯ ಭಾಗವಾಗಿದ್ದಾರೆ. ಬಡತನ ಮುಕ್ತ ಪಂಚಾಯಿತಿ ಎಂಬ ಗುರಿಯೊಂದಿಗೆ ನರೇಗಾ, ವಸತಿ ಯೋಜನೆ, ಕೃಷಿ, ಸ್ವ ಉದ್ಯೋಗ– ಎಲ್ಲವನ್ನು ಒಟ್ಟಿಗೆ ಜೋಡಿಸಿ ಕೆಲಸ ಮಾಡಲಾಗಿದೆ.

ನರೇಗಾ ಯೋಜನೆಯಡಿ ಸಾವಿರಾರು ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಿದೆ. 128 ಕುಟುಂಬಗಳು ನೂರು ದಿನಗಳ ಕೆಲಸ ಪೂರ್ಣಗೊಳಿಸಿವೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ಬಸವ ವಸತಿ ಯೋಜನೆಯಡಿ ಮನೆ ಇಲ್ಲದ ಕುಟುಂಬಗಳಿಗೆ ಆಶ್ರಯ ಕಲ್ಪಿಸಲಾಗಿದೆ. 30 ಎಕರೆ ಭೂ ಅಭಿವೃದ್ಧಿ ಮತ್ತು ದನದ ಕೊಟ್ಟಿಗೆಗಳ ನಿರ್ಮಾಣದ ಮೂಲಕ ಕೃಷಿ ಆಧಾರಿತ ಜೀವನೋಪಾಯಕ್ಕೂ ಬೆಂಬಲ ನೀಡಲಾಗಿದೆ. ರೈತರನ್ನು 'ಫ್ರೂಟ್ಸ್' ಪೋರ್ಟಲ್‌ನಲ್ಲಿ ನೋಂದಾಯಿಸಿ ನೇರ ಲಾಭ ವರ್ಗಾವಣೆಯ ಸೌಲಭ್ಯ ಕಲ್ಪಿಸಲಾಗಿದೆ.

ಆದರೆ ಈ ಬದಲಾವಣೆ ಅಷ್ಟು ಸುಲಭವಾಗಿ ಬಂದದ್ದಲ್ಲ. ದುರ್ಗಮ ಭೌಗೋಳಿಕ ಪ್ರದೇಶವಾಗಿರುವುದರಿಂದ ಮನೆ ನಿರ್ಮಾಣ ಸಾಮಗ್ರಿ

ಇದೇ ನೋಡಿ ನಮ್ ಬ್ರ್ಯಾಂಡ್ ಉಪ್ಪಿನಕಾಯಿ

ಸಾಗಿಸುವುದೇ ದೊಡ್ಡ ಸವಾಲಾಗಿತ್ತು. ಮಳೆಗಾಲದಲ್ಲಿ ರಸ್ತೆಗಳಲ್ಲಿ ವಾಹನ ಸಂಚಾರ ಕಷ್ಟವಾಗುತ್ತಿತ್ತು. ಹಿರಿಯ ನಾಗರಿಕರಿಗೆ ಬಯೋಮೆಟ್ರಿಕ್ ಸಮಸ್ಯೆಯಿಂದ ಪಿಂಚಣಿ ಪಡೆಯಲು ತೊಂದರೆ ಆಗುತ್ತಿತ್ತು. ಯುವಕರ ನಗರ ವಲಸೆಯಿಂದ ಕೃಷಿ ಕಾರ್ಮಿಕರ ಕೊರತೆಯೂ ಎದುರಾಗಿತ್ತು.

ಅದನ್ನು ಎದುರಿಸಲು ಪಂಚಾಯಿತಿ ವಿವಿಧ ಯೋಜನೆಗಳನ್ನು ಒಟ್ಟಿಗೆ ಜೋಡಿಸಿ ಕೆಲಸ ಮಾಡಿತು. ನರೇಗಾ ಮತ್ತು ವಸತಿ ಯೋಜನೆಗಳನ್ನು ಸಂಯೋಜಿಸಲಾಯಿತು. ಮಹಿಳಾ ಸಭೆಗಳ ಮೂಲಕ ಫಲಾನುಭವಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲಾಯಿತು. ಕೃಷಿ ಕಾರ್ಮಿಕರ ಕೊರತೆಯನ್ನು ನೀಗಿಸಲು ಯಾಂತ್ರೀಕೃತ ಕೃಷಿಗೆ ಉತ್ತೇಜನ ನೀಡಲಾಯಿತು. ಫಲಾನುಭವಿಗಳ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಮೂಲಕ ಸಾಮಾಜಿಕ ಪರಿಶೀಲನೆಗೂ ಒತ್ತು ನೀಡಲಾಯಿತು.

ಈ ಬದಲಾವಣೆಯ ಹಿಂದೆ ಹಲವು ಇಲಾಖೆಗಳ ಸಹಕಾರವೂ ಇದೆ. ಕೃಷಿ ಇಲಾಖೆ ಬೀಜ ನೀಡಿದೆ. ಪಶುಪಾಲನಾ ಇಲಾಖೆ ಆರೋಗ್ಯ ಶಿಬಿರ ನಡೆಸಿದೆ. ತೋಟಗಾರಿಕೆ ಇಲಾಖೆ ಅಡಿಕೆ ಬೆಳೆ ರೋಗ ನಿರ್ವಹಣೆಯ ಕುರಿತು ತರಬೇತಿ ನೀಡಿದೆ. ವಿದ್ಯಾರ್ಥಿಗಳ ಸಹಾಯದಿಂದ ಯುವಜನರ ಕೌಶಲ ಸಮೀಕ್ಷೆಯೂ ನಡೆದಿದೆ. ಬ್ಯಾಂಕ್‌ಗಳು ಮಹಿಳೆಯರ ಸ್ವಸಹಾಯ ಗುಂಪುಗಳಿಗೆ ಸಾಲ ನೀಡಿವೆ. ಆದರೆ ಈ ಎಲ್ಲ ಯೋಜನೆಗಳಿಗೆ ಜೀವ ಬಂದದ್ದು ಗ್ರಾಮದಲ್ಲಿನ ಮಹಿಳೆಯರ ಕೈ ಸೇರಿದ್ದಾಗಲೇ.

ಮುಂದಿನ ದಿನಗಳಿಗಾಗಿ ಪಂಚಾಯಿತಿಯು ಹೊಸ ಯೋಜನೆಗಳನ್ನೂ ರೂಪಿಸಿದೆ. ವಾರದ ಸಂತೆ ಆರಂಭಿಸಿ ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಶಾಶ್ವತ ಮಾರುಕಟ್ಟೆ ಸೃಷ್ಟಿಸುವ ಯೋಚನೆ ಇದೆ. ತ್ಯಾಜ್ಯ ಸಂಗ್ರಹಣೆಗೆ ಬಳಕೆದಾರ ಶುಲ್ಕ ವ್ಯವಸ್ಥೆ ಜಾರಿಗೊಳಿಸಿ ಸಮುದಾಯ ಆಸ್ತಿಗಳ ನಿರ್ವಹಣೆಯತ್ತ ಗಮನ ಹರಿಸುವ ಚಿಂತನೆಯೂ ಇದೆ.

ಮುದ್ರಾಡಿಯ ದಾರಿಯಲ್ಲಿ ಸಾಗುವಾಗ 'ಬಲೇ ಉಣ್ಕ' ಎನ್ನುವ ಫಲಕ ಮತ್ತೆ ಕಣ್ಣಿಗೆ ಬೀಳುತ್ತದೆ. ಅದು ಕೇವಲ ಊಟಕ್ಕೆ ಕರೆಯುವ ಮಾತಿನಂತೆ ತೋರುವುದಿಲ್ಲ. ಬದುಕಿನ ಜೊತೆ ಹೋರಾಡಿ ನಿಧಾನವಾಗಿ ಗೆಲ್ಲುತ್ತಿರುವ ಗ್ರಾಮವೊಂದು ತನ್ನ ಕಥೆಯೊಳಗೆ ಕರೆಯುತ್ತಿರುವಂತೆ ಭಾಸವಾಗುತ್ತದೆ.

ಕಥೆ
ಅದೀಬ್ ಅಖ್ತರ್ ಅವರ ಎಐ
prajavani.net/short-story

ಕವನ
ಸ್ಮಿತಾ ಅಮೃತರಾಜ್, ಸಂಪಾಜೆ ಅವರ ಹೂ ಚಿಟ್ಟೆ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in


ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಸಂಪುಟ 3
ಸಮೀಪದ ಪುಸ್ತಕ ಅಂಗಡಿಗಳಲ್ಲಿ ಲಭ್ಯ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ದೂರವಾಣಿ : 080 22161900/901/913/914
Shop Online www.navakarnataka.com

ಮೊದಲ ಓದು

ಅವಳಿ ವೀರರ ಆರಾಧನೆಯ ಹೊಸನೋಟ



ಉಲ್ಲಾಕುಳು
ಲೇ: ಪೂವಪ್ಪ ಕಣಿಯೂರು
ಪ್ರ: ತರಂಗಿಣಿ
ಸಂ: 9448984485

ತುಳುನಾಡಿನ ದೈವಾರಾಧನಾ ಪರಂಪರೆಯಲ್ಲಿ 'ಪಾಡ್ದನ'ಗಳು ಕೇವಲ ಮೌಖಿಕ ಕಥನಗಳಲ್ಲ; ಅವು ಸಮುದಾಯದ ನಂಬಿಕೆ, ಆಚರಣೆ, ಕಲಾಸೌಂದರ್ಯ ಮತ್ತು ಧಾರ್ಮಿಕ ರಂಗಭೂಮಿಯ ಜೀವಂತ ದಾಖಲೆಗಳು. ದೈವಗಳ ಹುಟ್ಟು, ಶಕ್ತಿ ಮತ್ತು ಆರಾಧನೆಯ ಅಗತ್ಯವನ್ನು ವಿವರಿಸುವ ಈ ಮೌಖಿಕ ಆಕರಗಳು ತುಳುವ ಜನಪದ ಸಾಹಿತ್ಯದ ಮಹತ್ವದ ಭಾಗವಾಗಿವೆ. ಇದೇ ಪರಂಪರೆಯೊಳಗೆ ಸುಳ್ಯ ಭಾಗದಲ್ಲಿ ಪ್ರಸಿದ್ಧವಾಗಿರುವ 'ಉಲ್ಲಾಕುಳು' ಪರಿಕಲ್ಪನೆ ವಿಶಿಷ್ಟ ಸ್ಥಾನ ಪಡೆದಿದೆ. ಅವಳಿ ವೀರರ ಆರಾಧನೆಯ ರೂಪವಾದ ಉಲ್ಲಾಕುಳು, ಇತರ ದೈವ ಸಂಪ್ರದಾಯಗಳಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ಲೇಖಕ ಪೂವಪ್ಪ ತಮ್ಮ ಸಂಶೋಧನೆಯಲ್ಲಿ ತಾತ್ವಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಎಂಟು ಅಧ್ಯಾಯಗಳಿದ್ದು, ದೈವಾರಾಧನೆಯ ಸ್ಥಾನಮಾನದಿಂದ ಹಿಡಿದು ಅದರ ಐತಿಹಾಸಿಕತೆ, ಆರಾಧನಾ ವಿಧಿವಿಧಾನಗಳು, ಸಮುದಾಯದ ಸಂಬಂಧ ಮತ್ತು ತುಳುವ ಸಂಸ್ಕೃತಿಯೊಂದಿಗಿನ ಬಾಂಧವ್ಯವರೆಗೆ ಹಲವು ಆಯಾಮಗಳನ್ನು ತೆರೆದಿಡುತ್ತಾರೆ. ಹಿರಿಯರು ಮತ್ತು ವೀರರ ಆರಾಧನೆಯೇ ದೈವ ಜಗತ್ತಿನ ಮೂಲ ಬೇರು ಎಂಬುದನ್ನು ಅವರು ಒತ್ತಿ ಹೇಳುತ್ತಾರೆ. ಈ ಅಧ್ಯಯನದಲ್ಲಿ ಕೋಟಿ–ಚೆನ್ನಯರಂತಹ ವೀರ ದೈವಗಳ ಪ್ರಸ್ತಾಪ ವಿಶೇಷ ಗಮನ ಸೆಳೆಯುತ್ತದೆ. ಅವರ ಪಾಡ್ದನಗಳು ಸಾಹಿತ್ಯ ಮತ್ತು ದೃಶ್ಯಮಾಧ್ಯಮಗಳಲ್ಲಿ ಮರುಸೃಷ್ಟಿಯಾಗಿರುವ ರೀತಿಯನ್ನು ಲೇಖಕರು ಉಲ್ಲೇಖಿಸಿದ್ದಾರೆ. ಇಂತಹ ಸಾಂಸ್ಕೃತಿಕ ವೀರರ ಮೌಖಿಕ ಪರಂಪರೆ ಬೇರೆ ಯಾವುದೇ ದೈವ ಸಂಸ್ಕೃತಿಯಲ್ಲಿ ಇಷ್ಟು ವ್ಯಾಪಕವಾಗಿ ಮರುರೂಪ ಪಡೆದಿಲ್ಲ ಎನ್ನುವ ಅಭಿಪ್ರಾಯವನ್ನೂ ಅವರು ದಾಖಲಿಸುತ್ತಾರೆ.

ವಂಶ, ಜಾತಿ, ಅರಸು ನೆಲೆ ಹಾಗೂ ಇತರ ದೈವ ಸಂಪ್ರದಾಯಗಳೊಂದಿಗೆ ಉಲ್ಲಾಕುಳಿನ ಸಾಮ್ಯತೆ–ವೈಶಿಷ್ಟ್ಯಗಳನ್ನು ಗುರುತಿಸುವ ಮೂಲಕ ಈ ಕೃತಿ ತುಳುವ ದೈವಾರಾಧನಾ ಸಂಸ್ಕೃತಿಯ ಒಳಹೊರೆಯನ್ನು ಅರ್ಥಮಾಡಿಕೊಳ್ಳಲು ಮಹತ್ವದ ಅಧ್ಯಯನವಾಗಿ ಮೂಡಿಬಂದಿದೆ.

ಪುಟ: 548 ₹800

ಉಳುವವನಿಗೆ ನೆಲ ಸಿಕ್ಕ ಕಥೆ

ಎರಡು ಖಂಡುಗ
ಲೇ: ಶ್ರೀಧರ ಕೆ.ಎ. ಕೆಳದಿಪುರ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 9449886390

'ಎರಡು ಖಂಡುಗ' ಕೇವಲ ಗೇಣಿ ಹೋರಾಟದ ಕಥನವಲ್ಲ; ಮಲೆನಾಡಿನ ರೈತ ಬದುಕಿನ ದೀರ್ಘಕಾಲದ ನೋವು, ಅವಮಾನ, ಹೋರಾಟ ಮತ್ತು ಅಂತಿಮವಾಗಿ ದೊರೆತ ಸಾಮಾಜಿಕ ನ್ಯಾಯದ ದಾಖಲೆಯಾಗಿ ಓದುಗರ ಮುಂದೆ ತೆರೆದುಕೊಳ್ಳುವ ಕೃತಿ. 'ಉಳುವವನೇ ಹೊಲದೊಡೆಯ' ಎನ್ನುವ ಘೋಷಣೆ ಕೇವಲ ರಾಜಕೀಯ ಘೋಷವಾಕ್ಯವಾಗಿರದೆ, ಶತಮಾನಗಳಿಂದ ನೆಲದ ಬೆವರನ್ನು ಸುರಿಸಿದವರ ಮಾನವೀಯ ಹಕ್ಕಿನ ಕೂಗಾಗಿದ್ದುದನ್ನು ಕಾದಂಬರಿ ಮನದಟ್ಟಾಗಿಸುತ್ತದೆ.

ಲೇಖಕ ಗೇಣಿ ರೈತನ ಮನಸ್ಥಿತಿಯನ್ನು ಇತಿಹಾಸದ ದಾಖಲೆಗಳೊಂದಿಗೆ ಬೆರೆಸಿ ಕಟ್ಟಿಕೊಟ್ಟಿರುವುದು ಕೃತಿಯ ವಿಶೇಷ. ಹೊಲದಲ್ಲಿ ದುಡಿದರೂ ಭೂಮಿಯ ಮೇಲಿನ ಹಕ್ಕಿಲ್ಲದ ಬದುಕು ಎಷ್ಟು ಕಹಿಯಾಗಿತ್ತು, ಭೂಮಾಲೀಕರ ಅಧಿಪತ್ಯ ಹೇಗೆ ರೈತರನ್ನು ಕುಗ್ಗಿಸಿತು ಎಂಬುದು ಇಲ್ಲಿ ನೈಜತೆಯಿಂದ ಮೂಡಿಬರುತ್ತದೆ. ಆದರೆ ಕಾದಂಬರಿ ಕೇವಲ ಶೋಷಣೆಯ ದಾಖಲೆಯಾಗಿ ನಿಲ್ಲುವುದಿಲ್ಲ; ಹೋರಾಟದ ಮೂಲಕ ಗೌರವ ಮರಳಿ ಪಡೆದ ಸಮುದಾಯದ ಸಂಭ್ರಮವನ್ನೂ ಹೊತ್ತಿದೆ.

ಕಾಗೋಡು ಸತ್ಯಾಗ್ರಹ ಮತ್ತು ನಂತರ ಜಾರಿಗೆ ಬಂದ ಭೂ ಸುಧಾರಣಾ ಕಾನೂನಿನ ನಡುವಿನ ಐತಿಹಾಸಿಕ ಸಂಬಂಧವನ್ನು ಲೇಖಕರು ಕಥೆಯೊಳಗೆ ಸಹಜವಾಗಿ ಹೆಣೆದಿದ್ದಾರೆ. ವಿಶೇಷವಾಗಿ ಡಿ. ದೇವರಾಜ ಅರಸು ಅವರ ಭೂಶಾಸನ ತಿದ್ದುಪಡಿ ಕಾಯ್ದೆಯಿಂದ ಗೇಣಿ ರೈತರಿಗೆ ದೊರೆತ ಹಕ್ಕು, ಒಂದು ಸಮುದಾಯದ ಬದುಕಿನ ದಿಕ್ಕೇ ಬದಲಿಸಿದ ಕ್ಷಣವಾಗಿ ಚಿತ್ರಿತವಾಗಿದೆ. ಈ ಮೂಲಕ ಕಾದಂಬರಿ ಇತಿಹಾಸ, ರಾಜಕೀಯ ಮತ್ತು ಜನಜೀವನದ ಸಂಗಮವಾಗುತ್ತದೆ.

ಭಾಷೆಯೂ ಕೃತಿಯ ದೊಡ್ಡ ಶಕ್ತಿ. ಸಾಗರ ಭಾಗದ ಗ್ರಾಮೀಣ ಶೈಲಿ, ಮಲೆನಾಡಿನ ಸ್ಥಳೀಯ ನುಡಿಗಟ್ಟುಗಳು ಮತ್ತು ಜನಜೀವನದ ವಾಸನೆ ಕಥೆಗೆ ಜೀವ ತುಂಬುತ್ತವೆ. ಒಟ್ಟಾರೆ, ಗೇಣಿ ರೈತರ ಹಕ್ಕುಗಳ ಹೋರಾಟವನ್ನು ಸ್ಮರಿಸುವ ಕೃತಿ ಮಾತ್ರವಲ್ಲ; ನೆಲ, ಮನುಷ್ಯ ಮತ್ತು ನ್ಯಾಯದ ನಡುವಿನ ಸಂಬಂಧವನ್ನು ಮನಮುಟ್ಟುವಂತೆ ದಾಖಲಿಸಿದ ಸಾಮಾಜಿಕ ಕಾದಂಬರಿಯಾಗಿದೆ.

ಪುಟ: 124 ₹140

ಹಿತ್ತಲ ತೋಟದ ಕೈಪಿಡಿ



ಹಿತ್ತಲ ಸುತ್ತಲೂ
ಪ್ರ: ವನಸ್ತ್ರೀ
ಸಂ: 98868 56364

ಆಹಾರ ಭದ್ರತೆ ಎಂದರೆ ಕೇವಲ ಜನಸಂಖ್ಯೆಗೆ ತಕ್ಕಷ್ಟು ಆಹಾರ ಪೂರೈಕೆ ಮಾಡುವುದಲ್ಲ; ನಮ್ಮ ಸುತ್ತಲಿನ ವೈವಿಧ್ಯಮಯ ಆಹಾರ ಮೂಲಗಳನ್ನು ಸಮರ್ಪಕವಾಗಿ ಗುರುತಿಸಿ, ಬಳಸಿಕೊಳ್ಳುವುದೂ ಆಗಿದೆ. ಈ ಜೀವನ ಮಾದರಿಯನ್ನು ಮಳೆ ಹೇರಳವಾಗಿರುವ ಕರಾವಳಿ ಮತ್ತು ಮಲೆನಾಡಿನ ಜನರು ಸಹಜವಾಗಿ ಅಳವಡಿಸಿಕೊಂಡಿದ್ದರು. ಪ್ರಕೃತಿಯೇ ಅವರ ಆಹಾರ ಸಂಸ್ಕೃತಿಗೆ ಬೆನ್ನೆಲುಬಾಗಿತ್ತು.

ಆದರೆ ಆಧುನೀಕರಣದ ಅಬ್ಬರದಲ್ಲಿ ಈ ಭಾಗಗಳಲ್ಲಿಯೂ ಕೈತೋಟ, ಕಾಡುಸೊಪ್ಪು, ಸ್ಥಳೀಯ ಆಹಾರ ಪದ್ಧತಿ ಆಧಾರಿತ ಆಹಾರ ಭದ್ರತೆಯ ಕಲ್ಪನೆ ನಿಧಾನವಾಗಿ ಹಿಂದೆ ಸರಿಯುತ್ತಿದೆ. ಇಂಥ ಸಂದರ್ಭದಲ್ಲಿ 'ಹಿತ್ತಲ ಸುತ್ತಲೂ' ಕೃತಿ ಕೇವಲ ಒಂದು ಪುಸ್ತಕವಾಗಿಯೇ ಉಳಿಯದೆ, ಕೈತೋಟದ ಸಂಸ್ಕೃತಿಯನ್ನು ಪುನರುಜ್ಜೀವಗೊಳಿಸುವ ಕೈಪಿಡಿಯಂತೆ ನೆರವಾಗುತ್ತದೆ.

ಹಿತ್ತಲಲ್ಲಿ ನಾವು ಏನು ಬೆಳೆಸುತ್ತೇವೆ ಎಂಬುದಷ್ಟೇ ಮುಖ್ಯವಲ್ಲ; ತಾನಾಗಿಯೇ ಮೊಳೆತು ಬೆಳೆಯುವ ಅನೇಕ ಸಸ್ಯಗಳು, ಸೊಪ್ಪುಗಳಲ್ಲೂ ಅಪಾರ ಔಷಧೀಯ ಗುಣಗಳಿವೆ. ನಮ್ಮ ಪೂರ್ವಜರು ಅವನ್ನು ಅಡುಗೆಮನೆಯ ಪ್ರಯೋಗಗಳ ಮೂಲಕವೇ ಕಂಡುಹಿಡಿದಿದ್ದರು. ಆ ಪರಂಪರೆಯ ಜ್ಞಾನವನ್ನು ಈ ಕೃತಿ ಸರಳವಾಗಿ ದಾಖಲಿಸುತ್ತದೆ.

ಸಮೃದ್ಧ ಕೈತೋಟದಲ್ಲಿ ದೊರೆಯುವ ಸಾವಯವ ತರಕಾರಿಗಳು, ಹಣ್ಣುಗಳು, ಗೆಡ್ಡೆ–ಗೆಣಸುಗಳು, ವಿವಿಧ ಸೊಪ್ಪುಗಳ ಬಗ್ಗೆ ಇಲ್ಲಿರುವ ಮಾಹಿತಿ ಗಮನಾರ್ಹ. ಯಾವ ಪದಾರ್ಥದಲ್ಲಿ ಯಾವ ವಿಟಮಿನ್ ಇದೆ, ಅದನ್ನು ಅಡುಗೆಯಲ್ಲಿ ಹೇಗೆ ಬಳಸಬಹುದು ಎಂಬುದನ್ನು ಚಿತ್ರಸಹಿತವಾಗಿ ವಿವರಿಸಿದ್ದಾರೆ.

ಕೈತೋಟ ಮತ್ತು ಹೆಣ್ಣುಮಕ್ಕಳ ಸಂಬಂಧ ಹಿಂದಿನಿಂದಲೂ ಆಪ್ತ. ಒಂದು ಮನೆಯ ಹಿತ್ತಲನ್ನು ನೋಡಿದರೆ ಆ ಮನೆಯ ಬದುಕಿನ ಸೊಗಡು ಅರಿವಾಗುತ್ತದೆ. ವಿಶೇಷವಾಗಿ ಮಲೆನಾಡು ಮತ್ತು ಕರಾವಳಿಯ ಮಹಿಳೆಯರ ಬದುಕಿನಲ್ಲಿ ಕೈತೋಟ ಒಂದು ಸಹಜ ಸಂಸ್ಕೃತಿ. ಇಂಥ ಮಹಿಳೆಯರೇ ಸೇರಿ ಈ ವಿಶಿಷ್ಟ ಕೃತಿಯನ್ನು ಸಂಪಾದಿಸಿರುವುದು ಇನ್ನಷ್ಟು ಅರ್ಥಪೂರ್ಣವಾಗಿದೆ. ಸಾಂಪ್ರದಾಯಿಕ ಜ್ಞಾನವನ್ನು ಉಳಿಸಬೇಕು, ಅದನ್ನು ಮುಂದಿನ ಪೀಳಿಗೆಗೆ ಅಕ್ಷರ ರೂಪದಲ್ಲಿ ಹಸ್ತಾಂತರಿಸಬೇಕು ಎಂಬ ಆಶಯ ಈ ಕೃತಿಯ ಹಿಂದಿದೆ.

ಪುಟ: 200 ₹247

ಕಡಲ್ ಸಂಗ ರೋಹನ್, ತನ್ವಿ ಬದುಕು

ಕಚೇರಿ ಕೆಲಸ ಬಿಟ್ಟು ಸಮುದ್ರದ ಅಲೆಗಳ ಜೊತೆ ಬದುಕು ಕಟ್ಟಿಕೊಳ್ಳಲು ಹೊರಟ ರೋಹನ್ ಸುವರ್ಣ ಮತ್ತು ಬಾಲ್ಯದಿಂದಲೇ ಸರ್ಫಿಂಗ್‌ನಲ್ಲಿ ಬೆಳೆದ ತನ್ವಿ ಜಗದೀಶ್, ಮಲ್ಪೆಯಲ್ಲಿ ಆರಂಭಿಸಿದ 'ಕಡಲ್' ಸಂಸ್ಥೆಯ ಮೂಲಕ ಸಾವಿರಾರು ಮಂದಿಗೆ ಜಲಸಾಹಸ ಕ್ರೀಡೆ ಮತ್ತು ಜೀವರಕ್ಷಣಾ ಕೌಶಲಗಳನ್ನು ಕಲಿಸುತ್ತಿದ್ದಾರೆ.

ಅಲೆಗಳಿಲ್ಲದ ನೀರಿನಲ್ಲಿ ಸರ್ಫಿಂಗ್ ಅಭ್ಯಾಸ

• ವಿಕ್ರಂ ಕಾಂತಿಕೆರೆ

ಮಲ್ಪೆ ಕಡಲ ತೀರದಲ್ಲಿ ಬೆಳಗಿನ ಅಲೆಗಳು ಒಂದರ ಹಿಂದೆ ಒಂದಾಗಿ ದಡಕ್ಕೆ ಅಪ್ಪಳಿಸುತ್ತಿದ್ದವು. ಸರ್ಫ್‌ಬೋರ್ಡ್ ಹಿಡಿದು ಕೆಲ ಯುವಕರು ನೀರಿನತ್ತ ಓಡುತ್ತಿದ್ದರು. ಮೊದಲ ಬಾರಿಗೆ ಸಮುದ್ರಕ್ಕೆ ಇಳಿಯುವವರ ಕಣ್ಣಲ್ಲಿ ಆತಂಕವೂ ಉತ್ಸಾಹವೂ ಬೆರೆತಿತ್ತು. ಅವರ ಮಧ್ಯೆ ನಿಂತಿದ್ದ ರೋಹನ್ ಆರ್. ಸುವರ್ಣ ಶಾಂತವಾಗಿ ಸೂಚನೆಗಳನ್ನು ನೀಡುತ್ತಿದ್ದರು. ಕೆಲವೇ ವರ್ಷಗಳ ಹಿಂದೆ ಗುಜರಾತ್‌ನ ಕಂಪನಿಯೊಂದರ ಕಚೇರಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದ ಅವರು, ಇಂದು ಸಾವಿರಾರು ಮಂದಿಗೆ ಸಮುದ್ರದ ಜೊತೆ ಸ್ನೇಹ ಮಾಡಿಸುತ್ತಿದ್ದಾರೆ.

ಉಡುಪಿ ಜಿಲ್ಲೆಯ ಮಲ್ಪೆ ಕಡಲ ಕಿನಾರೆಯ ತೊಟ್ಟಂ ನಿವಾಸಿಯಾದ ರೋಹನ್, ಮಂಗಳೂರು ವಿಶ್ವವಿದ್ಯಾಲಯದಿಂದ ರಾಸಾಯನಿಕ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ ಉದ್ಯೋಗಕ್ಕಾಗಿ ಗುಜರಾತ್‌ಗೆ ತೆರಳಿದ್ದರು. ಆದರೆ ಕಚೇರಿ ಕೆಲಸದ ಏಕತಾನತೆ ಅವರೊಳಗೆ ವಿಚಿತ್ರ ಖಾಲಿತನ ಹುಟ್ಟುಹಾಕಿತ್ತು. ಊರಿನ ನೆನಪು, ಸಮುದ್ರದ ಅಲೆಗಳ ಸದ್ದು ಅವರನ್ನು ಹಿಂಬಾಲಿಸುತ್ತಲೇ ಇತ್ತು. 'ವಿಶಾಲ ಸಮುದ್ರದ ನಡುವೆ ಏನಾದರೂ ಸಾಧಿಸಬೇಕು' ಎನ್ನುವ ತುಡಿತ ಹೆಚ್ಚಾಗುತ್ತಿದ್ದಂತೆ ಅವರು ಊರಿಗೆ ಮರಳಿದರು.

ಗೆಳೆಯನೊಂದಿಗೆ ಯೋಜನೆಯೊಂದರಲ್ಲಿ ತೊಡಗಿಸಿಕೊಂಡರೂ ಮನಸ್ಸಿಗೆ ಸಮಾಧಾನ ಇರಲಿಲ್ಲ. 'ಇದು ನಿನ್ನ ದಾರಿ ಅಲ್ಲ' ಎನ್ನುವ ಒಳದನಿ ಅವರನ್ನು ಕಾಡುತ್ತಲೇ ಇತ್ತು. ಕೊನೆಗೆ ಆ ದಾರಿ ಸಮುದ್ರದತ್ತವೇ ತೆರೆಯಿತು. ಏಳು ವರ್ಷಗಳ ಹಿಂದೆ ಮೂಡಿದ ಆ ಹೊಳಹು ಈಗ ಸಾವಿರಾರು ಮಂದಿಯನ್ನು ಜಲಸಾಹಸ ಕ್ರೀಡೆಗಳತ್ತ ಸೆಳೆದಿದೆ.

ರೋಹನ್ ಸರ್ಫಿಂಗ್‌ಗೆ ಕಾಲಿಡುವ ವೇಳೆಗೆ ಉಡುಪಿ ಜಿಲ್ಲೆಯ ತನ್ವಿ ಜಗದೀಶ್ ಆಗಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದರು. ಭಾರತದಲ್ಲಿ ವೃತ್ತಿಪರ ಸ್ಟ್ಯಾಂಡ್ ಅಪ್ ಪ್ಯಾಡ್ಲಿಂಗ್ (ಎಸ್‌ಯುಪಿ) ಕ್ಷೇತ್ರದಲ್ಲಿ ಗುರುತಿಸಿಕೊಂಡ ಮಹಿಳೆಯರ ಪೈಕಿ ಅವರು ಮೊದಲ ಸಾಲಿನಲ್ಲಿದ್ದರು. ಸಮುದ್ರದ ನೀರು ತನ್ವಿಗೆ ಹೊಸದೇನೂ ಅಲ್ಲ. ಮೀನುಗಾರಿಕೆಯನ್ನು ನೋಡುತ್ತ ಬೆಳೆದ ಅವರಿಗೆ ಅಲೆಗಳು ಬಾಲ್ಯದ ಆಟದಂಗಣದಂತಿದ್ದವು. ಹತ್ತನೇ ವಯಸ್ಸಿನಲ್ಲೇ ಸರ್ಫಿಂಗ್ ಅಭ್ಯಾಸ ಆರಂಭಿಸಿದ್ದ ಅವರು ಮೂಲ್ಕಿಯ ಮಂತ್ರ ಸರ್ಫ್ ಕ್ಲಬ್‌ನಲ್ಲಿ ಶಿಸ್ತುಬದ್ಧ ತರಬೇತಿ ಪಡೆದಿದ್ದರು.



ಅಲೆಗಳ ಮೇಲೆ ಸರ್ಫಿಂಗ್ ಲೀಲೆ

ಜಲರಾಶಿಯಲ್ಲಿ ಕಯಾಕಿಂಗ್ ಖುಷಿ

ರೋಹನ್‌ಗೆ ಮೊದಲ ಬಾರಿಗೆ ಸರ್ಫ್‌ಬೋರ್ಡ್ ಮೇಲೆ ಸಮತೋಲನ ಸಾಧಿಸುವುದನ್ನು ಕಲಿಸಿದ್ದೂ ತನ್ವಿಯೇ. ಆ ಗುರು–ಶಿಷ್ಯ ಸಂಬಂಧವೇ ಮುಂದೆ ಪಶ್ಚಿಮ ಕರಾವಳಿಯ ಜಲಸಾಹಸ ಕ್ರೀಡೆಯಲ್ಲಿ ಹೊಸ ಅಧ್ಯಾಯ ಬರೆಯಿತು. ಇಬ್ಬರೂ ಸೇರಿ ಆರಂಭಿಸಿದ 'ಕಡಲ್' ಸಂಸ್ಥೆ ಈಗ ಏಳು ಸಾವಿರಕ್ಕೂ ಹೆಚ್ಚು ಮಂದಿಗೆ ತರಬೇತಿ ನೀಡಿದೆ.

ರೋಹನ್ ಮತ್ತು ತನ್ವಿ

ಇಂದು ಮಲ್ಪೆಯಲ್ಲಿರುವ 'ಕಡಲ್' ಸದಾ ಚಟುವಟಿಕೆಯಿಂದ ಕಂಗೊಳಿಸುತ್ತದೆ. ಸರ್ಫ್‌ಬೋರ್ಡ್‌ಗಳನ್ನು ಭುಜದ ಮೇಲೆ ಹೊತ್ತು ಆತ್ಮವಿಶ್ವಾಸದಿಂದ ಸಾಗುವವರು, ನೀರಿನ ಅಂಚಿನಲ್ಲಿ ನಿಂತು ಧೈರ್ಯ ಕೂಡಿಸಿಕೊಳ್ಳುವವರು, ಕುತೂಹಲದಿಂದ ಪ್ರಶ್ನೆಗಳ ಸುರಿಮಳೆಗೈಯುವ ಮಕ್ಕಳು; ಎಲ್ಲರಿಗೂ ಈ ಜಾಗ ಹೊಸ ಅನುಭವದ ಬಾಗಿಲಾಗುತ್ತದೆ. ರೋಹನ್, ತನ್ವಿ ಸೇರಿ ಏಳು ಮಂದಿ ತರಬೇತುದಾರರು ಇಲ್ಲಿ ಮಾರ್ಗದರ್ಶಕರಾಗಿದ್ದಾರೆ.

ಸರ್ಫಿಂಗ್ ಮಾತ್ರವಲ್ಲ, ಸ್ಟ್ಯಾಂಡ್ ಅಪ್ ಪ್ಯಾಡ್ಲಿಂಗ್ ಮತ್ತು ಪಶ್ಚಿಮ ಕರಾವಳಿಯಲ್ಲಿ ಅಪರೂಪವಾಗಿರುವ ಕಯಾಕಿಂಗ್ ತರಬೇತಿಯನ್ನೂ ಇಲ್ಲಿ ನೀಡಲಾಗುತ್ತಿದೆ. ಸ್ವರ್ಣಾ ನದಿಯಲ್ಲಿ ಕಯಾಕಿಂಗ್ ಅಭ್ಯಾಸ ನಡೆಸಲಾಗುತ್ತದೆ. ಆದರೆ 'ಕಡಲ್' ಚಟುವಟಿಕೆ ಕ್ರೀಡೆಗಷ್ಟೇ ಸೀಮಿತವಾಗಿಲ್ಲ. ಸಮುದ್ರದೊಂದಿಗೆ ಬೆರೆಯುವಾಗ ಅಗತ್ಯವಿರುವ ಜಾಗರೂಕತೆ ಮತ್ತು ಜೀವರಕ್ಷಣಾ ಕೌಶಲಗಳ ಕುರಿತು ಶಾಲೆಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನೂ ನಡೆಸಿಕೊಡುತ್ತಿದೆ.

ರೋಹನ್ ದೇಶದಾದ್ಯಂತ ಸಂಚರಿಸಿ ಜೀವರಕ್ಷಣಾ ತರಗತಿಗಳನ್ನು ನಡೆಸುತ್ತಿದ್ದಾರೆ. ಗೋವಾದ ರಾಷ್ಟ್ರೀಯ ಜಲಕ್ರೀಡಾ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೂ ತರಬೇತಿ ನೀಡುತ್ತಿದ್ದಾರೆ. ಅಂತರರಾಷ್ಟ್ರೀಯ ಸರ್ಫಿಂಗ್ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಜೀವರಕ್ಷಕ ಫೆಡರೇಷನ್ ಇಬ್ಬರನ್ನೂ ತರಬೇತುದಾರರಾಗಿ ಪ್ರಮಾಣೀಕರಿಸಿವೆ.

ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿಯೂ ಇವರ ಸಾಧನೆ ಗಮನಾರ್ಹ. ಪೋಲೆಂಡ್‌ನಲ್ಲಿ ನಡೆದ ವಿಶ್ವ ಎಸ್‌ಯುಪಿ ಚಾಂಪಿಯನ್‌ಷಿಪ್‌ನಲ್ಲಿ ರೋಹನ್ 33ನೇ ಸ್ಥಾನ ಗಳಿಸಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಕಂಚಿನ ಪದಕ ಮತ್ತು ರಾಜ್ಯ ಮಟ್ಟದಲ್ಲಿ ಎರಡು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ತನ್ವಿ ಈಗಾಗಲೇ ಎರಡು ಬಾರಿ ವಿಶ್ವಕಪ್‌ನಲ್ಲಿ ಪಾಲ್ಗೊಂಡು ರಾಷ್ಟ್ರ ಮಟ್ಟದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ.

ಆದರೆ ಈ ದಾರಿ ಸುಲಭವಾಗಿರಲಿಲ್ಲ. ಉದ್ಯೋಗ ಮತ್ತು ಸಂಪಾದನೆಯ ಮೂಲಕ ಬದುಕು ಕಟ್ಟಿಕೊಳ್ಳಬೇಕಾದ ವಯಸ್ಸಿನಲ್ಲಿ ಜಲಕ್ರೀಡೆಯನ್ನೇ ಉದ್ಯಮವನ್ನಾಗಿ ಆರಿಸಿಕೊಂಡಿದ್ದಕ್ಕೆ ಕುಟುಂಬಗಳಲ್ಲಿ ಆರಂಭದಲ್ಲಿ ಅಸಮಾಧಾನವಿತ್ತು. 'ಸಮುದ್ರದಲ್ಲಿ ಆಟವಾಡುವುದೇ ಉದ್ಯೋಗವಾ?' ಎನ್ನುವ ಪ್ರಶ್ನೆಗಳೂ ಎದುರಾದವು. ಆದರೆ ಇಂದು ಅವರ ಸಾಧನೆಯನ್ನು ನೋಡಿ ಕುಟುಂಬಗಳೇ ಹೆಮ್ಮೆಪಡುತ್ತಿವೆ.

'ಈ ಭಾಗದಲ್ಲಿ ಸಾಗರ ಕ್ರೀಡೆಗಳ ಬಗ್ಗೆ ಆಸಕ್ತಿ ಮತ್ತು ಅರಿವು ಕಡಿಮೆ ಇತ್ತು. ಮಕ್ಕಳನ್ನು, ವಿಶೇಷವಾಗಿ ಹೆಣ್ಣುಮಕ್ಕಳನ್ನು ಇಂತಹ ಕ್ರೀಡೆಗಳಿಗೆ ಕಳುಹಿಸುತ್ತಲೇ ಇರಲಿಲ್ಲ. ಆದರೆ ವರ್ಷಗಳು ಕಳೆದಂತೆ ಜನರ ದೃಷ್ಟಿಕೋನ ಬದಲಾಗಿದೆ' ಎಂದು ರೋಹನ್ ಹೇಳುತ್ತಾರೆ.

ನಾಲ್ಕು ವರ್ಷದ ಮಕ್ಕಳಿಂದ ಹಿಡಿದು ಎಪ್ಪತ್ತು ವರ್ಷದವರವರೆಗೂ ಇಲ್ಲಿ ತರಬೇತಿಗೆ ಬರುತ್ತಾರೆ ಎಂದು ತನ್ವಿ ಹೇಳುತ್ತಾರೆ. ಮಲ್ಪೆಯಲ್ಲಿ ಅಲೆಗಳ ಮೇಲೆ ನಿಂತು ಸಮುದ್ರದ ಸೌಂದರ್ಯವನ್ನು ಸವಿಯಲು ಮತ್ತು ಅದರ ಸವಾಲನ್ನು ಅನುಭವಿಸಲು ನವದೆಹಲಿ, ಪಂಜಾಬ್, ಅಸ್ಸಾಂ, ಹೈದರಾಬಾದ್ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಜನರು ಬರುತ್ತಿದ್ದಾರೆ. ಜರ್ಮನಿ, ಜಪಾನ್, ನೆದರ್ಲೆಂಡ್ಸ್, ಇಂಗ್ಲೆಂಡ್ ಮತ್ತು ಅಮೆರಿಕದಿಂದಲೂ ವಿದೇಶಿಗರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ.

ಸಾಹಸ ಮತ್ತು ಜಾಗೃತಿಯ ನಡುವೆ ಸೇತುವೆಯಂತೆ 'ಕಡಲ್' ಬೆಳೆದಿದೆ. ಜಲಕ್ರೀಡೆಗಳನ್ನು ಕಲಿಸುವುದರ ಜೊತೆಗೆ ಸಮುದ್ರದ ಬಗ್ಗೆ ಭಯವನ್ನು ಕಡಿಮೆ ಮಾಡಿ ಆತ್ಮವಿಶ್ವಾಸ ಬೆಳೆಸುತ್ತಿದೆ. ಒಮ್ಮೆ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಷ್ಟೇ ಸಮುದ್ರಕ್ಕೆ ಇಳಿಯುತ್ತಿದ್ದ ರೋಹನ್, ಇಂದು ಸಾವಿರಾರು ಮಂದಿಗೆ ಅದರೊಳಗೆ ಧೈರ್ಯವಾಗಿ ಇಳಿಯುವುದನ್ನು ಕಲಿಸುತ್ತಿದ್ದಾರೆ. ಅಲೆಗಳ ಜೊತೆ ಆಟವಾಡುತ್ತ ಬೆಳೆದ ತನ್ವಿ, ಈಗ ಆ ಅಲೆಗಳನ್ನೇ ಬದುಕಿನ ಪಾಠವಾಗಿಸಿದ್ದಾರೆ.

ಮದ್ದಿನ ಹುಲಿ...

10ನೇ ಪುಟದಿಂದ...

ಓಟಕ್ಕೆ ಸಜ್ಜಾಗುವ ಹುಲಿ...

ಜಾತ್ರೆಯ ಮೂರನೇ ದಿನ ಬೆಳಗ್ಗೆಯೇ ಮದ್ದಿನ ಹುಲಿಗಳನ್ನು ಹರಕೆ ಹೊತ್ತವರ ಮನೆಗಳಿಗೆ ಕೊಂಡೊಯ್ಯಲಾಗುತ್ತದೆ. ಅಲ್ಲಿಂದ ಜೈ ಬಜರಂಗಬಲಿ ಸನ್ನಿಧಿಗೆ, ಬಳಿಕ ಗುಡ್ಡದ ಮೇಲಿನ ಶೇಖ್ ಜಿಂದಾವಲಿ ದರ್ಗಾಕ್ಕೆ ಸಾಗಿಸಲಾಗುತ್ತದೆ.

ಪೂಜೆಗಳ ಬಳಿಕ ಯುವಕರು ಹುಲಿಗಳನ್ನು ಹೊತ್ತು ಅಗಸಿಗೆ ತರುತ್ತಾರೆ. ಅಷ್ಟೊತ್ತಿಗೆ ಊರು ಕಿಕ್ಕಿರಿದಿರುತ್ತದೆ.

ಜೈ ಬಜರಂಗಬಲಿ ಗುಡಿಯ ಬಳಿಯ ಕಂಬಕ್ಕೆ 600 ಅಡಿ ಉದ್ದದ ಹಗ್ಗ ಬಿಗಿಯಲಾಗುತ್ತದೆ. ಅದರ ಇನ್ನೊಂದು ತುದಿ ಸರ್ಕಾರಿ ಶಾಲೆ ಬಳಿಯ ಅಗಸಿಯಲ್ಲಿರುತ್ತದೆ. ಆ ಹಗ್ಗವನ್ನು ಹುಲಿಯ ಕಾಲುಗಳ ನಡುವಿನ ರಂಧ್ರಗಳಲ್ಲಿ ಪೋಣಿಸಲಾಗುತ್ತದೆ. ಇದು ಗ್ರಾಮಸ್ಥರೇ ರೂಪಿಸಿಕೊಂಡಿರುವ ವಿಶಿಷ್ಟ ಸ್ಥಳೀಯ ಎಂಜಿನಿಯರಿಂಗ್ ತಂತ್ರ. ಹಗ್ಗದ ಮೇಲೆ ಹತ್ತಿದ ಹುಲಿ ಓಡಲು ಸಿದ್ಧವಾಗುತ್ತದೆ. ಜನರು ಉಸಿರು ಬಿಗಿಹಿಡಿದು ನಿಂತಿರುತ್ತಾರೆ.

ಮದ್ದಿನ ಬತ್ತಿಗೆ ಕಿಡಿ ತಾಗುತ್ತಿದ್ದಂತೆಯೇ ಹುಲಿ ಮಿಂಚಿನಂತೆ ಚಿಮ್ಮುತ್ತದೆ. ಗಾಲಿಗಳ ಮೇಲೆ ಓಡುತ್ತ ಕ್ಷಣಾರ್ಧದಲ್ಲಿ ಗುರಿ ತಲುಪುತ್ತದೆ. ಅಗಸಿಯಲ್ಲಿ ಕೇಕೆ, ಶಿಳ್ಳೆ, ಜಯಘೋಷಗಳು ಮೊಳಗುತ್ತವೆ.

'ಶೇಖ್ ಜಿಂದಾವಲಿ!'

'ಜೈ ಬಜರಂಗಬಲಿ!'

ಘೋಷಣೆಗಳ ನಡುವೆ ಮದ್ದಿನ ಹುಲಿ ತನ್ನ ಓಟ ಮುಗಿಸುತ್ತದೆ.

> **ನನ್ನ ಮಗನಿಗೆ ಆರೋಗ್ಯ ಸಮಸ್ಯೆ ಕಾಡುತ್ತಿತ್ತು. ಆತ ಗುಣಮುಖನಾದರೆ 'ಮದ್ದಿನ ಹುಲಿ' ಓಡಿಸುವ ಹರಕೆ ಹೊತ್ತಿದ್ದೆ. ನಮ್ಮ ಇಷ್ಟಾರ್ಥ ಈಡೇರಿತು. ಹೀಗಾಗಿ ಈ ವರ್ಷ ಹುಲಿ ಓಡಿಸಿ ಹರಕೆ ತೀರಿಸಿದ್ದೇನೆ**
> **ಶಾಂತಪ್ಪ ಕೊಹಿನೂರ,** ಭಕ್ತ

ಸ್ವಲ್ಪ ಹೊತ್ತಿನ ಹಿಂದೆ ನಿಶ್ಚಲವಾಗಿ ನಿಂತಿದ್ದ ಕಟ್ಟಿಗೆ, ಕಾಗದ, ಕುಂಬಳಕಾಯಿಯ ಆಕೃತಿ ಕ್ಷಣಾರ್ಧದಲ್ಲಿ ಜೀವ ಪಡೆದಂತೆ ಕಾಣಿಸುತ್ತದೆ. ಮದ್ದಿನ ಹೊಗೆ ಗಾಳಿಯಲ್ಲಿ ಹರಡಿರುತ್ತದೆ. ಹಲಗೆಗಳ ಖನಖನ ಇನ್ನೂ ನಿಂತಿರುವುದಿಲ್ಲ. ಮಕ್ಕಳು ಹುಲಿ ಹೋದ ದಿಕ್ಕಿನತ್ತ ಓಡಿರುತ್ತಾರೆ. ಹಿರಿಯರ ಮುಖದಲ್ಲಿ ಸಮಾಧಾನ. ಹರಕೆ ಹೊತ್ತವರ ಕಣ್ಣಲ್ಲಿ ಭಕ್ತಿ ಸಮರ್ಪಿಸಿದ ಭಾವ.

ಆ ಕ್ಷಣದಲ್ಲಿ ಅದು ಕೇವಲ ಸಿಡಿಮದ್ದಿನಿಂದ ಓಡುವ ಗೊಂಬೆಯಾಗಿರುವುದಿಲ್ಲ. ಇಡೀ ಗ್ರಾಮದ ನಂಬಿಕೆ, ಒಗ್ಗಟ್ಟು, ಶ್ರಮ ಮತ್ತು ತಲೆಮಾರುಗಳಿಂದ ಬಂದ ಕೈಚಳಕ ಕಿಡಿ ಹೊತ್ತಂತೆ ದೌಡಾಯಿಸಿದ ಜೀವಂತ ಸಂಪ್ರದಾಯವಾಗಿ ಕಾಣಿಸುತ್ತದೆ.

ಮದ್ದಿನ ಹುಲಿಯ ಮೆರವಣಿಗೆ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಬೋಳು ಮರದ ಕಥೆ!

majakoora@prajavani.co.in

ಗುಂಡ ನಡೆದು ಹೋಗುತ್ತಿದ್ದ ದಾರಿಯಲ್ಲಿ ಮಾವಿನಮರವೊಂದಿತ್ತು. ಅದರಲ್ಲಿ ಕಾಯಿಗಳು ತುಂಬಿದಂತೆ ಕಂಡವು. ಅವುಗಳನ್ನು ಕಂಡ ಗುಂಡ ಕಲ್ಲನ್ನು ತೆಗೆದುಕೊಂಡು ಚಾಟಿಬಿಲ್ಲಿನ ಮೂಲಕ ಗುರಿ ಇಟ್ಟು ಹೊಡೆದ. ಕಲ್ಲು ಮರಕ್ಕೆ ಬಡಿದ ಕ್ಷಣವೇ ಅಲ್ಲಿ ಕುಳಿತಿದ್ದ ನೂರಾರು ಗಿಳಿಗಳು ಒಮ್ಮೆಯೇ ಹಾರಿಹೋದವು. ಗಿಳಿಗಳ ಹಿಂಡೇ ಗುಂಡನಿಗೆ ಮಾವಿನಕಾಯಿಗಳಂತೆ ಕಂಡಿದ್ದವು. ಇದು ಗೊತ್ತಾದಾಗ ಗುಂಡ ಬೆಪ್ಪಾದ!

ಜಾಣಪದ ಆಟ

1.ಪದಚೌಕ:
ಇಲ್ಲಿ ಕೊಟ್ಟಿರುವ ಮಾದರಿ ಪದಚೌಕದಂತೆ ಅಂದರೆ ಎಡದಿಂದ ಓದಿ, ನಂತರ ಮೇಲಿನಿಂದ ಕೆಳಕ್ಕೆ ಓದಿದರೂ ಅವೇ ಪದಗಳು. ಅಂತ ಇನ್ನೆರಡು ಪದ ಚೌಕಗಳನ್ನು ಕೊಟ್ಟಿರುವ ಅಕ್ಷರಗಳನ್ನು ಬಳಸಿಕೊಂಡು ನೀವೇ ತಯಾರಿಸಿ.

ಮಾದರಿ

ಸ	ಮ	ರ
ಮ	ನ	ವಿ
ರ	ವಿ	ಕೆ

	ಕ	
ಕ		ಹ
	ಹ	

ಲ	ರಿ	ಲ	ಸ

	ರಾ	
ರಾ		ಣಿ
	ಣಿ	

ಗ	ಸ	ತ	ಗಿ

2. ಇಲ್ಲಿ ಕೊಟ್ಟಿರುವ 'ಮನ' ಎಂಬ ಪದಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಮ	ನ		
2	ಮ	ನ		
3	ಮ	ನ		
4	ಮ	ನ		
5	ಮ	ನ		

ಅಕ್ಷರಪಟ್ಟಿ

ಸ್ವಾ	ಟ್ಟು	ಕ್ಷಿ	ದ	ಸ್ತ್ರ
ಶ್ಯಾ	ಸಿ	ಪ	ಜ	ಸ್ತಾ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮನೆಯಲ್ಲೇ ಕುಳಿತು ನಿನ್ನ ಗೆಳೆಯನೊಂದಿಗೆ ಆಟವಾಡು

ಇದೊಂದು ಬಗೆಯ ಸಂಖ್ಯೆಯ ಆಟ. ನಿಮ್ಮ ಮಿತ್ರರೊಂದಿಗೆ ನೀವು ಆಟವಾಡಿ ಸಂತಸ ಪಡಿ.

ಆಟ ಶುರು ಮಾಡೋಣ್ವೆ? ಮೊದಲಿಗೆ ಎರಡರ ಅಂಕಿ ಮೀರದ ಸಂಖ್ಯೆಯೊಂದನ್ನು ನಿನ್ನ ಮಿತ್ರನಿಗೆ ಹೇಳಬೇಕು. (ಉದಾಹರಣೆಗೆ 1 ಅಥವಾ 2) ನಂತರ ಆ ಸಂಖ್ಯೆಗಿಂತ ದೊಡ್ಡದಾದ ಅದಕ್ಕೆ ಎರಡನ್ನು ಸೇರಿಸಿದರೆ ಆಗುವ ಮೊತ್ತವನ್ನು ಮೀರದ ಸಂಖ್ಯೆ ಮೊತ್ತೊಬ್ಬ ಹೇಳಬೇಕು.

ಉದಾ: ನಿಮ್ಮ ಮಿತ್ರ 1 ಎಂದು ಹೇಳಿದರೆ, ನೀವು ಹೇಳುವ ಮೊತ್ತ 3ನ್ನು ಮೀರಬಾರದು. ಅಂದರೆ ನೀವು 2 ಅಥವಾ 3 ಸಂಖ್ಯೆಯನ್ನು ಹೇಳಬಹುದು. ಹೀಗೆ ಆಟ ಮುಂದುವರಿಸುತ್ತಾ ಹೋಗಿ, ಯಾರು ಮೊದಲಿಗೆ 20 ಎಂಬ ಸಂಖ್ಯೆ ತಲುಪುತ್ತಾರೆಯೋ ಅವರು ಗೆದ್ದ ಹಾಗೆ.

ಈ ಆಟದಲ್ಲಿ ನೀನೇ ಯಾವಾಗಲೂ ಗೆಲ್ಲಬೇಕೆಂದು ಬಯಸುವೆಯಾ? ಹಾಗಾದರೆ ನಿನ್ನ ಎದುರಾಳಿಗೆ ಈ ಸೂತ್ರವನ್ನು ಹೇಳಬೇಡ. ಮೊದಲಿಗೆ ನೀನು 2 ಎಂಬ ಸಂಖ್ಯೆಯನ್ನು ಹೇಳಿ, ನಂತರ 5,8,11,14,17 ಹಿಡಿದುದಾದರೆ ನೀನೇ ಗೆಲ್ಲುತ್ತೀಯ. ಈ ರಹಸ್ಯ ನಿನ್ನ ಎದುರಾಳಿಗೆ ತಿಳಿಯದ ಕಾರಣ 13ರ ತನಕ ನಿನಗೆ ಮನಸ್ಸಿಗೆ ಬಂದಂತಹ ಸಂಖ್ಯೆ ಹೇಳುತ್ತಾ ಹೋಗು. ನಂತರ 14,17 ಸಂಖ್ಯೆ ಪಟ್ಟಾಗಿ ಹಿಡಿದರೆ ನೀನೇ ಗೆದ್ದಂತೆ.

ಶಬ್ದಾಟ

ಇಲ್ಲಿರುವ ಎರಡು ಪದಗಳನ್ನು ಸೇರಿಸಿ ಒಂದೇ ಪದ ಮಾಡಿ.

ಏಕ + ಸುಂದರಿ = ________

ವರ್ಡ್ ಗೇಮ್

ಇಲ್ಲಿ ಕೊಟ್ಟಿರುವ ನಾಲ್ಕು ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಒಂದೇ ಪದ ಮಾಡಿ. (ಅಕ್ಷರಗಳನ್ನು ಸ್ಥಾನಪಲ್ಲಟ ಮಾಡಬೇಡಿ). ಪದಗಳನ್ನು ಸ್ಥಾನಪಲ್ಲಟ ಮಾಡಿ

BIT	ON	AM	I
ಉತ್ತರ:			

ಒಂದು ಒಗಟು

ಅಟ್ಟಂ ಬಟ್ಟಂ ಅರಣ್ಯದಾಗ
ಶೆಟ್ಟಿ ಅಂಗಡಿ ಇಟ್ಟಾನ

ಆರೋಗ್ಯ ಹನಿ

ಯಾವ ಮನುಷ್ಯ ಕನಿಷ್ಠ 10 ಸಾವಿರ ಹೆಜ್ಜೆಗಳನ್ನು ದಿನಂಪ್ರತಿ ನಡೆಯುತ್ತಾನೋ ಆತ ದಿನವಿಡೀ ಕ್ರಿಯಾಶೀಲನಾಗಿರುತ್ತಾನೆ.

ಬಿರುಸಿನ ನಡಿಗೆ–ಮುಪ್ಪಿನಲ್ಲಿ ಬೇಡ ಬಡಿಗೆ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕರಿ	+	ಏಕೆ	+	ಸುಂ	=	
2	ನಕ್ಕು	+	ರಜ	+	ಹ	=	
3	ನೀತಿ	+	ಮಾಡು	+	ಹಿ	=	
4	ನಯ	+	ದಿಟ	+	ತ	=	
5	ಹಣಿ	+	ದಾಸು	+	ತ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ನೀರಿನಗುಣ 2.ಸಭೆಬಳಿಕೆ 3.ನವಿಲುಗರಿ 4.ಜಾಣಹುಡುಗಿ 5.ಕುರಿಸಾಕಣೆ
ಶಬ್ದಾಟ: ಕಾಲಾವಕಾಶ
ವರ್ಡ್ ಗೇಮ್: CAPSULE
ಬ್ರೇನ್‌ವ್ಹಿಟಾ ಆಟ: STUDY, STUDIO
ಜಾಣಪದ ಆಟ: 1.ಮಾವಿನಮರ 2.ಮಾವಿನಗಿಡ 3.ಮಾವಿನರಸ 4.ಮಾವಿನಕಾಯಿ 5.ಮಾವಿನಮಿಡಿ 6.ಮಾವಿನತೋಟ 7.ಮಾವಿನಸಿಪ್ಪೆ 8.ಮಾವಿನಚಟ್ನಿ 9.ಮಾವಿನಗೊಟ್ಟ 10.ಮಾವಿನಎಲೆ
ಜಾಣಪದ ಆಟ: 1.ಬುದ್ಧಿವಾದ 2.ಬುದ್ಧಿವಂತ 3.ಬುದ್ಧಿಹೀನ 4.ಬುದ್ಧಿಶಕ್ತಿ 5.ಬುದ್ಧಿಬಲ
ಗಣಿತದಲ್ಲಿ ಗರ್ದಿಗಮ್ಮತ್ತು: ₹10X2 = ₹20, ₹5X3 = ₹15, ₹2X4 = ₹8, ₹1X2 = ₹2: 11 ನೋಟು–₹45
ಪುಟಾಣಿ ಪದಬಂಧ: 1.ಸುಮಧುರ 2.ಸಬಕಾರ 3.ಪರಿಹಾರ 4.ಸವಲತ್ತು 5.ಹರದಾರಿ 6.ಭಾಷಾಂತರ 7.ವರಮಾನ 8.ಕಲಾವಿದ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಶ್ರೀನಿವಾಸ ಎನ್.
ಬೆಂಗಳೂರು ದಕ್ಷಿಣ

ಸಮಿಕ್ಷಾ ಬೊಳಗೊಂಡ
ಬೆಂಗಳೂರು

ಅಭಿಮನ್ಯು
ಬೆಂಗಳೂರು

ಚಿರಸ್ವಿ ಚಿರೇಂದ್ರ
ಮಾಚೋಹಳ್ಳಿ

ಸಾನ್ವಿಕ ಕೆ.ಎಸ್.
ಅರಕಲಗೂಡು

ನನಸು ಎ.ಗೌಡ.
ತುಮಕೂರು

ಪೀಯೂಷ್, ಆದಿತಿ ಚಾಂಪಿಯನ್

ರಾಜ್ಯ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್: ಮಹಿತಾಗೆ ಪ್ರಶಸ್ತಿ ಡಬಲ್

ವಿಜಯಪುರದಲ್ಲಿ ಶನಿವಾರ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ ಆಟಗಾರರು ಮತ್ತು ಆಟಗಾರ್ತಿಯರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ವಿಜಯಪುರ: ಬೆಂಗಳೂರು ನಗರದ ಪೀಯೂಷ್ ತ್ರಿಪಾಠಿ ಮತ್ತು ಬೆಂಗಳೂರು ಗ್ರಾಮಾಂತರದ ಆದಿತಿ ಸುಶಾಂತ್ ಅವರು ಶನಿವಾರ ಮುಕ್ತಾಯಗೊಂಡ 'ಯಾನೆಕ್ಸ್- ಸನ್‌ರೈಸ್' ಕರ್ನಾಟಕ ರಾಜ್ಯ ಮಟ್ಟದ ಸಬ್ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ 17 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇಲ್ಲಿನ ಡಾ. ಬಿ.ಆರ್.ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯಲ್ಲಿ ವಿಜೇತರಾದವರಿಗೆ ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷ ಕುಮಾರ್ ಬಂಗಾರಪ್ಪ ಟ್ರೋಫಿ ಮತ್ತು ನಗದು ಬಹುಮಾನ ವಿತರಿಸಿದರು.

ಬೆಂಗಳೂರು ನಗರದ ಗೌತಮ್ ಎಸ್. ನಾಯರ್ ಮತ್ತು ಮಹಿತಾ ನಾಯ್ಡು ಸುರಿಸೆಟ್ಟಿ ಅವರು ಕ್ರಮವಾಗಿ 15 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದುಕೊಂಡರು.

ಫಲಿತಾಂಶಗಳು (ಫೈನಲ್): 17 ವರ್ಷದೊಳಗಿನವರು: ಬಾಲಕರ ಸಿಂಗಲ್ಸ್: ಬೆಂಗಳೂರು ನಗರದ ಪೀಯೂಷ್ ತ್ರಿಪಾಠಿ 21-19, 10-21, 21-17ರಿಂದ ಡಿಲನ್ ಪಿ.ತೋಕ್ಚೊಂ ವಿರುದ್ಧ ಜಯ.
ಬಾಲಕರ ಡಬಲ್ಸ್: ಬೆಂಗಳೂರು ನಗರದ ಮೆಹುಲ್ ಮಾನವ್ ಅರುಳ್ಮುರುಗನ್ ಹಾಗೂ ಸಾತ್ವಿಕ್ ಎಸ್. ಪ್ರಭು 15-21, 21-19, 21-18ರಿಂದ ಚಿರಾಗ್ ಪ್ರಕಾಶ್ ಮತ್ತು ನಿಕೇತನ ಹರಿ ಎನ್.ಡಿ. ವಿರುದ್ಧ ಜಯ.
ಬಾಲಕಿಯರ ಸಿಂಗಲ್ಸ್: ಬೆಂಗಳೂರು ಗ್ರಾಮಾಂತರದ ಆದಿತಿ ಸುಶಾಂತ್ 21-18, 21-16ರಿಂದ ಕೀರ್ತಿ ಬಾಲಾಜಿ ಎದುರು ಜಯ.
ಬಾಲಕಿಯರ ಡಬಲ್ಸ್: ಬೆಂಗಳೂರು ನಗರದ ದಿಶಾ ರವಿ ಭಟ್ ಮತ್ತು ತನ್ವಿ ಮುನೋತ್ 21-11, 21-13 ರಿಂದ ರಕ್ಷಾ ಎನ್. ಮತ್ತು ಶ್ರಿಯಾ ಜೋಶಿ ಎದುರು ಗೆಲುವು.
ಮಿಶ್ರ ಡಬಲ್ಸ್: ಬೆಂಗಳೂರು ನಗರದ ಈಶ್ವರ್ ಸಾಯಿ ಕಟಂ ಮತ್ತು ಡೆಬೋರಾ ಜಾನ್ 21-17, 21-16ರಿಂದ ಚಿರಾಗ್ ಪ್ರಕಾಶ್ ಮತ್ತು ತನ್ವಿ ಮುನೋತ್ ವಿರುದ್ಧ ಜಯ.
15 ವರ್ಷದೊಳಗಿನವರು: ಬಾಲಕರ ಸಿಂಗಲ್ಸ್: ಬೆಂಗಳೂರು ನಗರದ ಗೌತಮ್ ಎಸ್. ನಾಯರ್ 21-12, 21-19ರಿಂದ ಯಶವರ್ಧನ್ ಎಸ್. ಆರ್. ವಿರುದ್ಧ ಜಯ.
ಬಾಲಕರ ಡಬಲ್ಸ್: ಬೆಂಗಳೂರು ನಗರದ ಚೇತಸ್ ಮುಂಡರಗಿ ಮತ್ತು ಕೊಡಗಿನ ವಿಶಾಲ್ ಡಿ. ಆನಂದ್ 14-21, 21-14, 21-16 ಅಂತರದಿಂದ ಗೌತಮ್ ಎಸ್. ನಾಯರ್ ಮತ್ತು ಸಿದ್ಧಾರ್ಥ್ ಎಸ್. ನಾಯರ್ ವಿರುದ್ಧ ಗೆಲುವು.
ಬಾಲಕಿಯರ ಸಿಂಗಲ್ಸ್: ಬೆಂಗಳೂರು ನಗರದ ಮಹಿತಾ ನಾಯ್ಡು ಸುರಿಸೆಟ್ಟಿ 21-10, 21-7ರಿಂದ ಸ್ಮೃತಿ ಎಸ್. ವಿರುದ್ಧ ಜಯ.
ಬಾಲಕಿಯರ ಡಬಲ್ಸ್: ಬೆಂಗಳೂರು ನಗರದ ಹಂಸಾ ಮುರಳೀಧರ ಮತ್ತು ಮಹಿತಾ ನಾಯ್ಡು ಸುರಿಸೆಟ್ಟಿ 21-18, 21-15 ಅಂತರದಿಂದ ಜೀವಿಕಾ ಸಾಯಿ ರಾಜೇಶ್‌ಕುಮಾರ್ ಮತ್ತು ಮನಿಕಾ ನವೀನ್ ವಿರುದ್ಧ ಗೆಲುವು.
ಮಿಶ್ರ ಡಬಲ್ಸ್: ಬೆಂಗಳೂರು ಗ್ರಾಮಾಂತರದ ಯಶವರ್ಧನ್ ಎಸ್. ಆರ್. ಮತ್ತು ಆದಿತಿ ಸುಶಾಂತ್ 21-11, 21-16 ರಿಂದ ಬಿ.ಬಿ. ವಿಶಾಲ್ ಉತ್ತಪ್ಪ ಹಾಗೂ ಹನ್ಸಿಕಾ ರಾಕೇಶ್ ವಿರುದ್ಧ ಜಯ.

400 ಮೀ. ಓಟ: ವಿಶಾಲ್ ಹೊಸ ಮೈಲಿಗಲ್ಲು

ಗುರಿಂದರ್‌ವೀರ್ ರಾಷ್ಟ್ರೀಯ ದಾಖಲೆ

ಗುರಿಂದರ್‌ವೀರ್ ಸಿಂಗ್

ರಾಂಚಿ (ಪಿಟಿಐ): ಸ್ಪ್ರಿಂಟರ್ ಗುರಿಂದರ್‌ವೀರ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೀನಿಯರ್ ಫೆಡರೇಷನ್ ಕಪ್ ಕೂಟದಲ್ಲಿ ಪುರುಷರ 100 ಮೀಟರ್ ಓಟವನ್ನು 10.09 ಸೆಕೆಂಡ್‌ಗಳಲ್ಲಿ ಮುಗಿಸಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ತಮಿಳುನಾಡಿನ ವಿಶಾಲ್ ಟಿ.ಕೆ. ಅವರು 400 ಮೀಟರ್ ದೂರವನ್ನು 45 ಸೆಕೆಂಡ್‌ಗಳಿಗಿಂತ ಕಡಿಮೆ ಅವಧಿಯಲ್ಲಿ ಮುಗಿಸಿದ ಭಾರತದ ಮೊದಲ ಓಟಗಾರನೆಂಬ ಎಂಬ ಹಿರಿಮೆಗೆ ಪಾತ್ರರಾದರು.

ಕೂಟದ ಎರಡನೇ ದಿನವಾದ ಶನಿವಾರ ನಡೆದ ಫೈನಲ್‌ನಲ್ಲಿ 25 ವರ್ಷದ ಗುರಿಂದರ್‌ವೀರ್ ಮಿಂಚಿನ ವೇಗದಲ್ಲಿ ಗುರಿ ಮುಟ್ಟಿ, ಅನಿಮೇಶ್ ಕುಜೂರ್ (10.15 ಸೆ.) ಹೆಸರಿನಲ್ಲಿದ್ದ ದಾಖಲೆ ಮುರಿದರು. 10 ತಿಂಗಳ ಹಿಂದೆ ಅನಿಮೇಶ್ (10.18ಸೆ) ನಿರ್ಮಿಸಿದ್ದ ದಾಖಲೆಯನ್ನು ಗುರಿಂದರ್‌ವೀರ್ (10.17 ಸೆ.) ಶನಿವಾರ ಮೊದಲ ಸೆಮಿಫೈನಲ್ ಹೀಟ್ಸ್‌ನಲ್ಲಿ ಮುರಿದಿದ್ದರು. ಆದರೆ, ಎರಡನೇ ಸೆಮಿಫೈನಲ್ ಹೀಟ್ಸ್‌ನಲ್ಲಿ ಅನಿಮೇಶ್ ಅದಕ್ಕಿಂತ ಎರಡು ಸೆಕೆಂಡ್ ಬೇಗ ಗುರಿ ಮುಟ್ಟುವ ಮೂಲಕ ದಾಖಲೆಯನ್ನು ಮರಳಿ ಪಡೆದಿದ್ದರು.

ರಿಲಯನ್ಸ್ ಫೌಂಡೇಷನ್ ಸಂಸ್ಥೆಯನ್ನು ಪ್ರತಿನಿಧಿಸುತ್ತಿರುವ ಪಂಜಾಬ್‌ನ ಅಥ್ಲೀಟ್ ಗುರಿಂದರ್‌ವೀರ್ ಅವರು 10.10 ಸೆಕೆಂಡುಗಳಿಗಿಂತ ಕಡಿಮೆ ಸಮಯದಲ್ಲಿ ಗುರಿ ತಲುಪಿದ ಭಾರತದ ಮೊದಲ ಓಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದರೊಂದಿಗೆ 2026ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಅರ್ಹತೆ ಗಳಿಸಿದರು.

ಒಡಿಶಾ ರಾಜ್ಯವನ್ನು ಪ್ರತಿನಿಧಿಸಿದ್ದ 23 ವರ್ಷದ ಅನಿಮೇಶ್ (10.21 ಸೆ.) ಎರಡನೇ ಸ್ಥಾನ ಗಳಿಸಿದರು. ರಿಲಯನ್ಸ್‌ನ ಮತ್ತೊಬ್ಬ ಅಥ್ಲೀಟ್ ಪ್ರಣವ್ ಗುರವ್ (10.29 ಸೆ) ಮೂರನೇ ಸ್ಥಾನ ಪಡೆದರು.

ಪುರುಷರ 400 ಮೀಟರ್ ಓಟವನ್ನು ವಿಶಾಲ್ 44.98 ಸೆಕೆಂಡ್‌ಗಳಲ್ಲಿ ಮುಗಿಸಿದರು. ಪ್ರಸಕ್ತ ಋತುವಿನಲ್ಲಿ ಏಷ್ಯಾ ಖಂಡದಲ್ಲಿ ದಾಖಲಾದ ಅತ್ಯುತ್ತಮ ಸಮಯ ಇದಾಗಿದೆ. 22 ವರ್ಷದ ವಿಶಾಲ್ ಕಳೆದ ವರ್ಷ ಚೆನ್ನೈನಲ್ಲಿ 45.12 ಸೆಕೆಂಡುಗಳಲ್ಲಿ ಗುರಿ ತಲುಪಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ್ದರು. ಈಗ ತಮ್ಮದೇ ದಾಖಲೆಯನ್ನು ಉತ್ತಮ ಪಡಿಸಿಕೊಂಡರು.

ತಮಿಳುನಾಡಿನ ಮತ್ತೊಬ್ಬ ಅಥ್ಲೀಟ್ ರಾಜೇಶ್ ರಮೇಶ್ 45.31 ಸೆಕೆಂಡುಗಳಲ್ಲಿ ಓಟ ಮುಗಿಸಿ ಎರಡನೇ ಸ್ಥಾನ ಪಡೆದರೆ, ಉತ್ತರ ಪ್ರದೇಶದ ಜಯ್ ಕುಮಾರ್ (45.47 ಸೆ) ಮೂರನೇ ಸ್ಥಾನ ಗಳಿಸಿದರು.

ಚೆಸ್: ವಿನ್ಸೆಂಟ್ ಕೀಮರ್‌ಗೆ ಪ್ರಶಸ್ತಿ

ಬುಕಾರೆಸ್ಟ್ (ರೊಮೇನಿಯಾ), (ಪಿಟಿಐ): ಜರ್ಮನಿಯ ವಿನ್ಸೆಂಟ್ ಕೀಮರ್ (6 ಅಂಕ) ಅವರು ಶನಿವಾರ ಮುಕ್ತಾಯವಾದ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಅವರು ಅಂತಿಮ ಹಾಗೂ ಒಂಬತ್ತನೇ ಸುತ್ತಿನಲ್ಲಿ ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡನ್ ವಾನ್ ಫೋರೀಸ್ಟ್ ಅವರನ್ನು ಸೋಲಿಸಿದರು.

ಅಮೆರಿಕದ ಫ್ಯಾಬಿಯಾನೊ ಕರುವಾನ ಹಾಗೂ ಕೀಮರ್ ಅವರು ಎಂಟನೇ ಸುತ್ತು ಮುಕ್ತಾಯದ ವೇಳೆಗೆ ತಲಾ 5 ಅಂಕಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದರು. ಕರುವಾನ ಅವರು ಅಂತಿಮ ಸುತ್ತಿನಲ್ಲಿ ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಜೊತೆಗೆ ಡ್ರಾ ಮಾಡಿಕೊಂಡರು. ಹೀಗಾಗಿ ಅವರು ಎರಡನೇ ಸ್ಥಾನಕ್ಕೆ (5.5 ಅಂಕ) ಸರಿದರು. ಜಾವೊಖಿರ್ ಸಿಂದರೋವ್ (ಉಜ್ಬೇಕಿಸ್ತಾನ) 5 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರು.

ಭಾರತದ ಆರ್.ಪ್ರಜ್ಞಾನಂದ ಅವರು ಅನೀಶ್ ಗಿರಿ ಜೊತೆಗೆ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ, ಅಮೆರಿಕದ ವೆಸ್ಲಿ ಸೊ, ಫೋರೀಸ್ಟ್, ಅನೀಶ್ ಹಾಗೂ ಲಗ್ರಾವ್ (ತಲಾ 4.5) ಜಂಟಿಯಾಗಿ ನಾಲ್ಕನೇ ಸ್ಥಾನ ಪಡೆದರು.